ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 6 ಶನಿವಾರ 2024

ಸಂಪುಟ: 44 | ಸಂಚಿಕೆ: 260 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸಿದ್ದರಾಮಯ್ಯ ನಂತರ

ಡಾ.ಪರಮೇಶ್ವರ್‌ಗೆ ಮುಖ್ಯಮಂತ್ರಿ ಗದ್ದುಗೆ

- ಪರಿಶಿಷ್ಟ ಜಾತಿ, ವರ್ಗದ ಸಚಿವರ ಕಾರ್ಯತಂತ್ರ
- ಅದರ ಮೊದಲ ತಂತ್ರವೇ ಮೂವರು ಡಿಸಿಎಂ
- ಡಿಸಿಎಂ ಡಿ.ಕೆ.ಶಿವಕುಮಾರ್ ಆರ್ಭಟಕ್ಕೆ ಕಡಿವಾಣ ಹಾಕಲು ರಹಸ್ಯ ತಂತ್ರ
- ಗುಪ್ತ ಸಭೆ, ಔತಣ ಕೂಟಗಳಲ್ಲಿ ಚರ್ಚೆ: ಹೈಕಮಾಂಡ್ ಗಮನಕ್ಕೆ ತರಲು ತೀರ್ಮಾನ

ಬೆಂಗಳೂರು, ಜ.5(ಕೆಎಂಶಿ)–ಎಐಸಿಸಿ ಅಧಿಕಾರ ಸೂತ್ರದಂತೆ ಸಿದ್ದರಾಮಯ್ಯ ಅವರು ಅಧಿಕಾರದಿಂದ ಕೆಳಗಿಳಿಯುತ್ತಿದ್ದಂತೆ ಆ ಜಾಗಕ್ಕೆ ಡಾ.ಜಿ.ಪರಮೇಶ್ವರ್ ತರಲು ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಚಿವರು ತೀರ್ಮಾನಿಸಿದ್ದಾರೆ.



ಪರಮೇಶ್ವರ್

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆರ್ಭಟಕ್ಕೆ ಕಡಿವಾಣ ಹಾಕಲು ಮೂವರು ಉಪಮುಖ್ಯಮಂತ್ರಿಗಳನ್ನು ತಕ್ಷಣವೇ ನೇಮಿಸುವಂತೆ ವರಿಷ್ಠರಿಗೆ ಮನವಿ ಮಾಡಲು ಈ ವರ್ಗದ ಸಚಿವರು ನಿರ್ಧರಿಸಿದ್ದಾರೆ. ಮುಖ್ಯಮಂತ್ರಿ ಅವರು ದೆಹಲಿ ಪ್ರವಾಸದಲ್ಲಿದ್ದಾಗ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ● 7ನೇ ಪುಟಕ್ಕೆ

ಮೂವರು ಡಿಸಿಎಂ ಮಾಡುವ ಪ್ರಸ್ತಾಪ ಮಂಡಿಸ್ತೇವೆ!

ಸಭೆಯ ಬಗ್ಗೆ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಹಕಾರಿ ಸಚಿವ ರಾಜಣ್ಣ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಾವು ಹೆಚ್ಚು ಸ್ಥಾನ ಗಳಿಸಬೇಕೆಂದರೆ ಮೂವರು ಉಪ ಮುಖ್ಯಮಂತ್ರಿಗಳ ಸ್ಥಾನ ಕಲ್ಪಿಸುವ ಅಗತ್ಯವಿದೆ.

ರಾಜ್ಯದ ಉಸ್ತುವಾರಿ ಹೊಣೆ ಹೊತ್ತ ರಣದೀಪ್ ಸಿಂಗ್ ಸುರ್ಜೇವಾಲ ವಿದೇಶ ಪ್ರವಾಸದಲ್ಲಿದ್ದು, ಅವರು ಹಿಂತಿರುಗುತ್ತಿದ್ದಂತೆ ನಾವು ದೆಹಲಿಗೆ ತೆರಳಿ ಈ ವಿಷಯ ಮನವರಿಕೆ ಮತ್ತು ಒತ್ತಾಯ ಮಾಡುತ್ತೇವೆ ಎಂದರು. ನಿನ್ನೆ ಎಸ್‌ಸಿ, ● 7ನೇ ಪುಟಕ್ಕೆ

ಇಂದಿರಾ ಕ್ಯಾಂಟಿನ್, ಶಾಲಾ ಬಿಸಿಯೂಟದಲ್ಲಿ ಸಿರಿಧಾನ್ಯ ಬಳಕೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ಸಿರಿಧಾನ್ಯ, ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ–2024 ಚಾಲನೆ

ಬೆಂಗಳೂರು, ಜ.5(ಕೆಎಂಶಿ)–ಇಂದಿರಾ ಕ್ಯಾಂಟಿನ್ ಮತ್ತು ಮಧ್ಯಾಹ್ನದ ಶಾಲಾ ಊಟದಲ್ಲಿ ಸಿರಿಧಾನ್ಯ ಬಳಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಮಹತ್ವದ ಘೋಷಣೆ ಮಾಡಿದರು.

ಸಿರಿಧಾನ್ಯ ಮತ್ತು ಸಾವಯುವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ–2024 ಮತ್ತು ಸಿರಿಧಾನ್ಯ ತಿನಿಸುಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ರಾಜ್ಯದ ಜನರು ಮತ್ತು ಶಾಲಾ ಮಕ್ಕಳು ಇನ್ನಷ್ಟು ಸದೃಢವಾಗಿ, ಆರೋಗ್ಯವಂತರಾಗಲು ಇಂದಿರಾ ಕ್ಯಾಂಟೀನ್ ಮತ್ತು ಶಾಲಾ ಊಟದಲ್ಲಿ ಸಿರಿಧಾನ್ಯ ಬಳಸುವ ಸಂಬಂಧ ಸದ್ಯದಲ್ಲೇ ಸಂಬಂಧಪಟ್ಟ ಇಲಾಖೆಗಳ ಸಭೆ ಕರೆದು ಚರ್ಚಿಸಿ ತೀರ್ಮಾನಿಸಲಾಗುವುದು ಎಂದರು. ಉತ್ತಮ ಗುಣಮಟ್ಟದ ಸಿರಿಧಾನ್ಯ ಬೀಜ ಉತ್ಪಾದನೆ, ಹೊಸ ತಳಿ ಅಭಿವೃದ್ಧಿ ಹಾಗೂ ಸಿರಿಧಾನ್ಯ ರಫ್ತಿಗೆ ಅನುಕೂಲ ಆಗುವಂತೆ ಪ್ರೋತ್ಸಾಹದಾಯಕವಾಗಿ ಅಗತ್ಯ ಕೇಂದ್ರವನ್ನು ರಾಜ್ಯ ಸರ್ಕಾರ ಸ್ಥಾಪಿಸಲಿದೆ. ಮಳೆ ಕಡಿಮೆ ಬೀಳುವ, ಭೂಮಿಯ ಫಲವತ್ತತೆ ಕಡಿಮೆ ಇರುವ ಪ್ರದೇಶಗಳಲ್ಲೂ ಸಿರಿಧಾನ್ಯ ಬೆಳೆಯಬಹುದಾಗಿದ್ದು, ಸರ್ಕಾರ ಸಿರಿಧಾನ್ಯ ಮೇಳವನ್ನು ನಿರಂತರವಾಗಿ ಆಯೋಜಿಸುತ್ತಿದೆ. ಸಾರಜನಕ, ಲವಣ, ವಿಟಮಿನ್ ಮತ್ತು ನಾರಿನ ಅಂಶಗಳು ಸಿರಿಧಾನ್ಯಗಳಲ್ಲಿ ಹೇರಳವಾಗಿವೆ, ರಸಾಯನಿಕ ಮಿಶ್ರಿತ ಆಹಾರ ಪದಾರ್ಥ ಸೇವನೆ ಹಲವು ಕಾಯಿಲೆಗಳಿಗೆ ಪ್ರಮುಖ ಕಾರಣವಾಗಿದೆ ಎಂದು ಅಧ್ಯಯನಗಳು ಹೇಳುತ್ತವೆ. ಸಾವಯವ ಸಿರಿಧಾನ್ಯ ಸೇವನೆ ಇದಕ್ಕೆ ಉತ್ತಮ ಪರಿಹಾರ ಎಂದರು.

2004ರಲ್ಲಿ ಸಾವಯವ ಕೃಷಿ ನೀತಿ, 2014ರಲ್ಲಿ ಪರಿಷ್ಕೃತ ಸಾವಯವ ಕೃಷಿ ನೀತಿಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಸಾವಯವ ಮತ್ತು ಸಿರಿಧಾನ್ಯ ಬೆಳೆ ಬೆಳೆಯಲು ಸರ್ಕಾರ ನಿರಂತರ ಉತ್ತೇಜನ ನೀಡುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಸಾವಯವ ಮತ್ತು ಸಿರಿಧಾನ್ಯ ಹೆಚ್ಚು ಜನಪ್ರಿಯವಾಗುತ್ತಿದೆ, ಭಾರತ ಕೃಷಿ ಪ್ರಧಾನ ದೇಶವಾಗಿದ್ದು ಆಹಾರ ಸ್ವಾವಲಂಬನೆ ಸಾಧಿಸಲು, ಪ್ರತಿಯೊಬ್ಬರಿಗೂ ಆಹಾರ ಲಭ್ಯವಾಗುವಂತೆ ಮಾಡಲು ಹಸಿರುಕ್ರಾಂತಿ ನೆರವಾಯಿತು ಎಂದರು.



ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ–2024 ಮತ್ತು ಸಿರಿಧಾನ್ಯ ತಿನಿಸುಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಚಿತ್ರದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯದ ಸಚಿವರಾದ ಎನ್.ಚಲುವರಾಯಸ್ವಾಮಿ, ಕೆ.ವೆಂಕಟೇಶ್, ದಿನೇಶ್ ಗುಂಡೂರಾವ್, ಉತ್ತರ ಪ್ರದೇಶ ಕೃಷಿ ಸಚಿವ ಸೂರ್ಯ ಪ್ರತಾಪ್ ಸಾಹಿ, ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಮೊದಲು ಕನ್ನಡವನ್ನು ಮಾತನಾಡಲು ಕಲಿಸಿ

■ ಪುಟ–4

ಬರ ಪರಿಹಾರಕ್ಕೆ ರಾಜ್ಯ ವಿಪತ್ತು ನಿಧಿಯಿಂದ

ರೂ. 105 ಕೋಟಿ ಬಿಡುಗಡೆ


ರೈತರಿಗೆ ಮೊದಲ ಕಂತು 2000 ಪರಿಹಾರ



ಬೆಂಗಳೂರು: ಬರಗಾಲದಿಂದ ಬೆಳೆ ನಷ್ಟ ಕ್ಕೀಡಾಗಿರುವ ರೈತರಿಗೆ ಮೊದಲನೇ ಕಂತಿನಲ್ಲಿ ತಲಾ ರೂ. 2,000 ಪರಿಹಾರ ವಿತರಣೆಗಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ರೂ. 105 ಕೋಟಿ ಅನುದಾನವನ್ನು ಶುಕ್ರವಾರ ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಕೇಂದ್ರ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ನೆರವು ನಿರೀಕ್ಷಿಸಿ ಎಸ್‌ಡಿಆರ್‌ಎಫ್‌ನಿಂದ ಒಬ್ಬ ರೈತರಿಗೆ ಎರಡು ಹೆಕ್ಟೇರ್ ಜಮೀನಿಗೆ ಸೀಮಿತ ವಾಗಿ ಪರಿಹಾರ ವಿತರಿಸಲಾಗುತ್ತಿದೆ. ಶೇಕಡ 33ಕ್ಕಿಂತ ಹೆಚ್ಚಿನ ಬೆಳೆ ಹಾನಿಯಾಗಿರುವ ರೈತರಿಗೆ ಮಾತ್ರ ಪರಿಹಾರ ವಿತರಿಸಲಾಗುವುದು. ಕೇಂದ್ರ ಗೃಹ ಸಚಿವಾಲಯ ಪ್ರಕಟಿಸಿರುವ ಎಸ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ 'ಇನ್‌ಪುಟ್ ಸಬ್ಸಿಡಿ' ವಿತರಿಸಲಾಗುವುದು ಎಂದು ಕಂದಾಯ ಇಲಾಖೆ ಆದೇಶದಲ್ಲಿ ತಿಳಿಸಿದೆ. ಪ್ರತಿ ಹೆಕ್ಟೇರ್‌ಗೆ ಮಳೆಯಾಶ್ರಿತ ಬೆಳೆಗಳಿಗೆ ರೂ. 8,500, ನೀರಾವರಿ ಬೆಳೆಗಳಿಗೆ ರೂ. 17,000 ಮತ್ತು ಬಹುವಾರ್ಷಿಕ ಬೆಳೆಗಳಿಗೆ ರೂ. 22,500 ಪರಿಹಾರ ನಿಗದಿಪಡಿಸಲಾಗಿದೆ. ಅದರಲ್ಲಿ ಮೊದಲ ಕಂತಿನಲ್ಲಿ ರೂ. 2,000 ● 7ನೇ ಪುಟಕ್ಕೆ

ಪ್ರಧಾನಿ ಮೋದಿ ನೇತೃತ್ವದಲ್ಲಿ ಕರ್ನಾಟಕದಲ್ಲಿ

ಕಾಂಗ್ರೆಸ್ ಅಂತ್ಯ ಕಾಣುವುದು ನಿಶ್ಚಿತ



ಜಂಟಿ ಸುದ್ದಿಗೋಷ್ಠಿಯಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಕೋರ್‌ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಇದ್ದಾರೆ.

ಮಾಜಿ ಪ್ರಧಾನಿ ದೇವೇಗೌಡರ ಭವಿಷ್ಯ

ಬೆಂಗಳೂರು: ಪ್ರಧಾನಿ ಮೋದಿ ನೇತೃತ್ವದಲ್ಲಿ ಕರ್ನಾ ಟಕದಲ್ಲಿ ಕಾಂಗ್ರೆಸ್ ಅಂತ್ಯ ಕಾಣುವುದು ನಿಶ್ಚಿತ ಎಂದು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು ಶುಕ್ರವಾರ ಹೇಳಿದ್ದಾರೆ. ಇಂದು ನಗರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ದೇವೇಗೌಡರು, ಕಳೆದ 60 ವರ್ಷಗಳಿಂದ ರಾಜಕೀಯ ಮಾಡಿಕೊಂಡು ಬಂದಿದ್ದೇನೆ. ನನಗೇ ಇವರು ಹೇಳ್ತಾರೆ. ಇವತ್ತು ಹೇಳ್ತೀನಿ ಕರ್ನಾಟಕದಲ್ಲಿ ಕಾಂಗ್ರೆಸ್ ಅಂತ್ಯ ಕಾಣು ತ್ತದೆ. ನಾವು ಸೋಲಿಸಿಯೇ ಸೋಲಿಸ್ತೀವಿ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನಾಯಕತ್ವದಲ್ಲಿ ಕರ್ನಾಟಕದ ಕಾಂಗ್ರೆಸ್ ಅಂತ್ಯ ಕಾಣುತ್ತೆ ಎಂದರು. ಇದೇ ವೇಳೆ ಹಿಂದೂ ಕಾರ್ಯಕರ್ತರ ವಿರುದ್ಧ ಕರ್ನಾಟಕ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮದ ಬಗ್ಗೆ ವರದಿಗಾರರ ಪ್ರಶ್ನೆಗೆ ಉತ್ತರಿಸಿದ ಮಾಜಿ ಪ್ರಧಾನಿ, ರಾಜ್ಯ ಕಾಂಗ್ರೆಸ್ ಸರ್ಕಾರ ಸೇಡಿನ ರಾಜಕಾರಣ ಮಾಡುತ್ತಿದೆ. ಎನ್‌ಡಿಎ ಸೋಲಿಸಿ 20 ಸ್ಥಾನಗಳನ್ನು ಗೆಲ್ಲುವ ಕನಸು ಕಾಣುತ್ತಿದ್ದಾರೆ. ಆದರೆ ಅವರ ಕನಸು ಕನಸಾಗಿಯೇ ಉಳಿಯುತ್ತದೆ ಎಂದರು.

ರಾಜ್ಯದಲ್ಲಿ ಈ ಬಾರಿ ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ನಾವು ನಿರೀಕ್ಷೆಗಿಂತ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ. ಜನಾದೇಶ ನಮ್ಮ ಪರವಾಗಿದೆ ಎಂದು ದೇವೇಗೌಡರು ಹೇಳಿದ್ದಾರೆ. ಸೀಟು ಹಂಚಿಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲ. ನಾವು ಕಾಂಗ್ರೆಸ್ ಅನ್ನು ಸೋಲಿಸಬೇಕು. ಸೀಟು ಹಂಚಿಕೆ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ ಎಂದರು. ನಾನು ಜಾತ್ಯತೀತ ಆದರ್ಶಗಳಲ್ಲಿ ಸ್ವಲ್ಪವೂ ರಾಜಿ ಮಾಡಿಕೊಳ್ಳದೆ ದೇಶವನ್ನು ಆಳಿದ್ದೇನೆ. ನೀವು (ಕಾಂಗ್ರೆಸ್) ಮತ್ತು ಇಂಡಿಯಾ ಬಣ, ದೇವೇಗೌಡರನ್ನು ● 7ನೇ ಪುಟಕ್ಕೆ

ಸಂಸದ ಪ್ರತಾಪ್ ಸಿಂಹ ಪರ ಬ್ಯಾಟ್

ಬೆಂಗಳೂರು: ಮೈಸೂರು ಸಂಸದ ಪ್ರತಾಪ್ ಸಿಂಹ ಪರ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಬ್ಯಾಟ್ ಬೀಸಿದ್ದಾರೆ. ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರುಗಳು, ಮುಖ್ಯ ಮಂತ್ರಿ ಸಿದ್ದರಾಮಯ್ಯ ತಮ್ಮ ವಿರುದ್ಧ ಧ್ವನಿ ಎತ್ತುವವರನ್ನು ಅಡಗಿಸುವ ಕೆಲಸ ಮಾಡುತ್ತಿದ್ದಾರೆ ಎಂದರು. ಹಾಸನದಲ್ಲಿ ನಡೆದ ಘಟನೆ ಮುಚ್ಚಿಡುವ ಪ್ರಯತ್ನವನ್ನು ಮುಖ್ಯಮಂತ್ರಿ ಮಾಡಿದ್ದಾರೆ, ಪ್ರತಾಪ್ ಸಿಂಹ ಅವರ ತಮ್ಮನ ವಿರುದ್ಧ ಮರ ಕಡಿದ ಆರೋಪ ಮಾಡಿ ಜೈಲಿಗೆ ಕಳುಹಿಸುವ ಹುನ್ನಾರ ನಡೆಸಿದರು. ಇದೇ ವಿಷಯಕ್ಕೆ ಅರಣ್ಯ ಇಲಾಖೆಯ ಐವರು ಅಧಿಕಾರಿಗಳನ್ನು ● 7ನೇ ಪುಟಕ್ಕೆ



ಪ್ರತಾಪ್ ಸಿಂಹ

ಸಹಕಾರ ಇಲಾಖೆ ನಿಬಂಧಕರ ತರಬೇತಿ



ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸಹಕಾರ ಇಲಾಖೆ ವತಿಯಿಂದ ಆಯೋಜಿಸಿದ್ದ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ನಿವೃತ್ತ ಬೋಧಕ ಕೆ.ಶ್ರೀನಿವಾಸ ಅವರು 'ಶಿಸ್ತು ಕ್ರಮ ಮತ್ತು ನಿಯಮ'ಗಳ ಕುರಿತು ಉಪನ್ಯಾಸ ನೀಡಿದರು.

ಮೈಸೂರು, ಜ.5(ಜಿಎ)–ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸಹಕಾರ ಇಲಾಖೆ ವತಿಯಿಂದ ನಗರದ ಹುಣಸೂರು ಮುಖ್ಯರಸ್ತೆಯಲ್ಲಿರುವ ಲಿ ರುಚಿ ಹೋಟೆಲ್‌ನಲ್ಲಿ ಆಯೋಜಿಸಿದ್ದ 'ರಾಜ್ಯದ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ ಆಡಳಿತ ಕಾರ್ಯವಿಧಾನ ಮತ್ತು ಸಹಕಾರ ಚಳವಳಿಯಲ್ಲಿ ಇತ್ತೀಚಿನ ಪ್ರವೃತ್ತಿ ಕುರಿತ ಎರಡು ದಿನಗಳ ವಿಶೇಷ ತರಬೇತಿ ಕಾರ್ಯಕ್ರಮದ ಎರಡನೇ ದಿನವಾದ ಶುಕ್ರವಾರ ತಜ್ಞರು ವಿಶೇಷ ಉಪನ್ಯಾಸ ನೀಡಿದರು.

ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ನಿವೃತ್ತ ಬೋಧಕ ಕೆ.ಶ್ರೀನಿವಾಸ ಅವರು ತರಬೇತಿ ಕಾರ್ಯಕ್ರಮದಲ್ಲಿ 'ಶಿಸ್ತು ಕ್ರಮ ಮತ್ತು ನಿಯಮ'ಗಳ ಕುರಿತು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳು)1975 ವಿವರಿಸಿ ಉಪನ್ಯಾಸ ನೀಡಿದ ಅವರು, ಸಹಾಯಕ ನಿಬಂಧಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು. ನಂತರ ಬೆಂಗಳೂರು ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳಿ ವ್ಯವಸ್ಥಾಪಕ ನಿರ್ದೇಶಕರೂ ಆದ ಡಾ.ಗುರುಸ್ವಾಮಿ ಅವರು 'ಸಹಕಾರ ಸಂಘಗಳ ಕಾಯ್ದೆ ಕಲಂ 64, 65, 69, ಮತ್ತು 70ರ ಕುರಿತು ಉಪನ್ಯಾಸ ನೀಡಿ, ವಿಚಾರಣೆಗೆ ಆದೇಶ ಮಾಡುವ ಸಂದರ್ಭದಲ್ಲಿ ನಿಬಂಧಕರು ಗಮನಿಸಬೇಕಾದ ಸಾಮಾನ್ಯ ಅಂಶಗಳು, ವಿಚಾರಣೆಗೆ ಆದೇಶಿಸಿದ ನಂತರ ವಿಚಾರಣಾಧಿಕಾರಿ ಪ್ರಮುಖ ಅಧಿಕಾರಗಳು ಮತ್ತು ಅವರ ಜವಾಬ್ದಾರಿ ಬಗ್ಗೆ ನಿಬಂಧಕರಿಗೆ ತಿಳಿಸಿಕೊಟ್ಟರು.

'ವ್ಯಕ್ತಿತ್ವ ವಿಕಸನ ಮತ್ತು ಒತ್ತಡ ನಿರ್ವಹಣೆ' ಕುರಿತು ಸಹಕಾರ ಸಂಘಗಳ ನಿವೃತ್ತ ಜಂಟಿ ನಿಬಂಧಕರಾದ ಸಂತೋಷ್ ಕುಮಾರ್ ಅವರು ಒತ್ತಡ ಹೇಗೆ ಪರಿಣಾಮ ಬೀರುತ್ತದೆ, ಒತ್ತಡದ ಲಕ್ಷಣಗಳು, ಒತ್ತಡದ ಸಂದರ್ಭಗಳನ್ನು ಹೇಳೆ ನಿರ್ವಹಿಸುವುದು, ಆರೋಗ್ಯಕರ ಆಹಾರ ಸೇವನೆ, ನಿದ್ರೆ ಸಮಸ್ಯೆ ನಿವಾರಣೆ ಸೇರಿದಂತೆ ನಿಬಂಧಕರ ಒತ್ತಡ ನಿರ್ವಹಣೆಗೆ ಉಪನ್ಯಾಸದ ಮೂಲಕ ಸಲಹೆ ನೀಡಿದರು.



ವಿಶ್ವಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ ಹೊರತಂದಿರುವ ನೂತನ ದಿನದರ್ಶಿಕೆಯನ್ನು ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಕೆ.ಎಸ್. ಕೃಷ್ಣ ಬಿಡುಗಡೆ ಮಾಡಿದರು. ಈ ವೇಳೆ ಎಸ್.ವಿ. ಗೌಡಪ್ಪ, ನಿರ್ದೇಶಕರು, ಸಾಹಿತಿಗಳು ಹಾಜರಿದ್ದರು.

ಸಾವಿತ್ರಿ ಬಾಯಿ ಫುಲೆಯವರು ಸಮಾಜದ ಶಿಕ್ಷಕಿಯಾಗಿದ್ದರು

ಲೇಖಕ, ಅಂಕಣಕಾರ ಡಾ.ಅಮ್ಮಸಂದ್ರ ಸುರೇಶ್



ಮೈಸೂರು, ಜ. 5–ಸತಿ ಪದ್ಧತಿ, ಬಾಲ್ಯ ವಿವಾಹ. ದೇವದಾಸಿ ಪದ್ಧತಿ ಸೇರಿದಂತೆ ಹಲವು ಸಾಮಾಜಿಕ ಶೋಷಣೆಗಳ ವಿರುದ್ಧ ಹೋರಾಟ ಮಾಡುವ ಮೂಲಕ ಸಾವಿತ್ರಿಬಾಯಿ ಫುಲೆಯವರು ಶಾಲಾ ಶಿಕ್ಷಕಿಯಾಗಿದ್ದ ಜೊತೆಗೆ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ ಮಾಡುವ ಮೂಲಕ ಸಮಾಜ ಸುಧಾರಕರೂ ಆಗಿದ್ದರು ಎಂದು ಲೇಖಕ ಮತ್ತು ಅಂಕಣಕಾರ ಡಾ.ಅಮ್ಮಸಂದ್ರ ಸುರೇಶ್ ತಿಳಿಸಿದರು.

ಮೈಸೂರು ಉತ್ತರ ಶಿಕ್ಷಣ ವಲಯದ ಸಾವಿತ್ರಿ ಬಾಯಿ ಫುಲೆ ಶಿಕ್ಷಕಿಯರ ಸಂಘದ ವತಿಯಿಂದ ನಗರದ ಎನ್‌ಆರ್ ಮೊಹಲ್ಲಾ ಸರ್ಕಾರಿ ಪ್ರೌಢಶಾಲೆಯ ಸಭಾಂಗಣದಲ್ಲಿ ಸಾವಿತ್ರಿ ಬಾಯಿ ಫುಲೆ ಜನ್ಮದಿನದ ಅಂಗವಾಗಿ ಏರ್ಪಡಿಸಲಾಗಿದ್ದ ಶೈಕ್ಷಣಿಕ ಕಾರ್ಯಾಗಾರ, ಕ್ಯಾಲೆಂಡರ್ ಬಿಡುಗಡೆ ಮತ್ತು ಉತ್ತಮ ಶಿಕ್ಷಕಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳ ಶಾಲಾ ಮಕ್ಕಳ ಬೆಳವಣಿಗೆಯಲ್ಲಿ ಮುಖ್ಯವಾಗಿ ಬಾಲಕಿಯರ ಶೈಕ್ಷಣಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಶಿಕ್ಷಕಿಯರ ಪಾತ್ರ ಅತ್ಯಂತ ಜವಾಬ್ದಾರಿಯುತವಾಗಿದ್ದು ಮಕ್ಕಳ ಸರ್ವಾಂಗೀಣ ಪ್ರಗತಿಯಲ್ಲಿ ಶಿಕ್ಷಕಿಯರು ನಿರ್ಣಾಯಕ ಪಾತ್ರ ವಹಿಸುತ್ತಾರೆಂದು ತಿಳಿಸಿದ ಅವರು ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಸಮಾಜದ ಎಲ್ಲರ ಮೇಲೂ ಇದೆ ಎಂದು ಅಭಿಪ್ರಾಯಪಟ್ಟರು.

ಸಾವಿತ್ರಿ ಬಾಯಿ ಫುಲೆಯವರ ಆದರ್ಶಗಳನ್ನು ಪ್ರತಿಯೊಬ್ಬ ಶಿಕ್ಷಕರು ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದ ಮೈಸೂರು ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಕೃಷ್ಣ ಅವರು, ಶಿಕ್ಷಕರು ಸೇವಾ ಮನೋಭಾವನೆಯಿಂದ ಕರ್ತವ್ಯ ನಿರ್ವಹಿಸಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಲ್ಯಾಣಗಿರಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಮಮತಾ ಅವರಿಗೆ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಾವಿತ್ರಿ ಬಾಯಿ ಫುಲೆ ಶಿಕ್ಷಕಿಯರ ಸಂಘದ ಅಧ್ಯಕ್ಷೆ ಹೊನ್ನಮ್ಮ. ದೈಹಿಕ ಶಿಕ್ಷಣಾಧಿಕಾರಿ ಶ್ರೀನಿವಾಸ್, ಡಿಡಿಪಿಐ ಲಿಂಗರಾಜು, ಬಿಆರ್‌ಸಿ ನರೇಂದ್ರ, ದೊರೆಸ್ವಾಮಿ, ಪದ್ಮವೈ ಮುಂತಾದವರು ಭಾಗವಹಿಸಿದ್ದರು. ಪುಷ್ಪಾವತಿ ಸ್ವಾಗತಿಸಿ ಜಾಯ್ಸಿ ಥಾಮಸ್ ವಂದಿಸಿದರು. ಮೀನಾಕ್ಷಿ ಕಾರ್ಯಕ್ರಮ ನಿರೂಪಣೆ ಮಾಡಿದರು.

ನಕಲಿ ಕಾರ್ಮಿಕರು ಗುರುತಿನ ಚೀಟಿ ಹಿಂದಿರುಗಿಸಲು ಸೂಚನೆ

ಮೈಸೂರು, ಜ.5– ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲಾ ಕಾರ್ಮಿಕ ಇಲಾಖೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಲ್ಲದವರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನಕಲಿ ದಾಖಲೆಗಳನ್ನು ಸಲ್ಲಿಸಿ ನೋಂದಣಿಯಾಗಿದ್ದು, ಇಂತಹ ನಕಲಿ ಕಾರ್ಮಿಕರು ತಾವೇ ಖುದ್ದಾಗಿ ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ನಿರೀಕ್ಷಕರ ಕಚೇರಿಗೆ ಭೇಟಿ ನೀಡಿ ಮೂಲ ಗುರುತಿನ ಚೀಟಿಯನ್ನು ಹಿಂದಿರುಗಿಸುವ ಮೂಲಕ ತಮ್ಮ ನೋಂದಣಿಯನ್ನು ರದ್ದುಪಡಿಸಿಕೊಳ್ಳಬೇಕು.

ಮಂಡಳಿಯ ವತಿಯಿಂದ ಇಂತಹ ನಕಲಿ ದಾಖಲೆ ನೀಡಿ ನೋಂದಾಯಿತರಾದ ಅನರ್ಹ ಕಾರ್ಮಿಕರನ್ನು ಪತ್ತೆ ಹಚ್ಚಲು ರಾಜ್ಯಾದ್ಯಂತ ಪರಿಶೀಲನೆಯನ್ನು ನಡೆಸಲಾಗುತ್ತಿದೆ. ಈ ಕಚೇರಿ ಕಾರ್ಯ ವ್ಯಾಪ್ತಿಯಲ್ಲಿಯು ಸಿಬ್ಬಂದಿಗಳ ತಂಡ ರಚಿಸಿ ತಪಾಸಣೆ ನಡೆಸಲು ನಿರ್ದೇಶನ ನೀಡಲಾಗಿದೆ.

ಪರಿಶೀಲನೆಯ ಸಮಯದಲ್ಲಿ ಅನರ್ಹರು ನೋಂದಣಿಯಾಗಿರುವುದು ಕಂಡುಬಂದಲ್ಲಿ ಅವರ ನೋಂದಣಿಯನ್ನು ರದ್ದುಪಡಿಸಿ, ಅವರು ಮಂಡಳಿಯಿಂದ ಇಲ್ಲಿಯವರೆಗೂ ಪಡೆದ ಎಲ್ಲಾ ಸೌಲಭ್ಯಗಳನ್ನು ದಂಡ ಸಹಿತ ವಸೂಲು ಮಾಡಲು ಕ್ರಮ ವಹಿಸಲಾಗುವುದು ಹಾಗೂ ಅವರ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮ ಜರುಗಿಸಲಾಗುವುದು.


ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಸಹಾಯವಾಣಿ: 155214 (24x7) ಸಂಪರ್ಕಿಸಬಹುದು ಅಥವಾ ಹತ್ತಿರದ ಕಾರ್ಮಿಕ ಇಲಾಖೆಯ ಕಚೇರಿಗೆ ಭೇಟಿ ನೀಡಬಹುದಾಗಿದೆ ಎಂದು ಕಾರ್ಮಿಕ ಇಲಾಖೆಯ ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಮೇಕೆದಾಟು ಯೋಜನೆ ವಿಚಾರವಾಗಿ ಕಚ್ಚಾಟ

ತಮಿಳುನಾಡಿನಲ್ಲಿ ಸದ್ದಿಲ್ಲದೆ ಕಾವೇರಿ ನದಿ ಜೋಡಣೆ; ಚಕಾರ ಎತ್ತದ ಕರ್ನಾಟಕ

- ಹೆಚ್ಚುವರಿ ಕಾವೇರಿ ನದಿ ನೀರು ಬಳಕೆಗೆ ಪಕ್ಕಾ ಪ್ಲಾನ್
- ಕಾವೇರಿ, ವೈಗೈ, ಗುಂಡಾರ್ ನದಿ ಜೋಡಣೆಗೆ ಭೂಸ್ವಾಧೀನ
- ಮಾರ್ಚ್ ವೇಳೆಗೆ ಪ್ರಕ್ರಿಯೆ ಪೂರ್ಣಗೊಳಿಸುವ ಗುರಿ
- ಕಾವೇರಿ ನ್ಯಾಯ ಮಂಡಳಿ ಐ ತೀರ್ಪಿನ ಸ್ಪಷ್ಟ ಉಲ್ಲಂಘನೆ

● ಬಾಪುಲಿಂಗರಾಜ್ ಅರಸ್





ಮೈಸೂರು, ಜ.5–ಕಾವೇರಿ ನದಿ ನೀರು ಸದ್ಬಳಕೆ ಮಾಡಿಕೊಳ್ಳಲು ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳಲು ಕರ್ನಾಟಕದಲ್ಲಿ ಈ ತನಕ ಅಧಿಕಾರಕ್ಕೆ ಬಂದ ಯಾವ ಪಕ್ಷದ ಸರ್ಕಾರವೂ ಬದ್ಧತೆ ತೋರಿಲ್ಲ. ಅಲ್ಲದೆ ಕಿಂಚಿತ್ತೂ ಪ್ರಯತ್ನ ಕೂಡ ಮಾಡಿಲ್ಲ. ಆದರೆ ಅದೇ ತಮಿಳುನಾಡಿನಲ್ಲಿ ಹೆಚ್ಚುವರಿ ಕಾವೇರಿ ನೀರು ಬಳಸಿಕೊಳ್ಳಲು ಕಾವೇರಿ–ವೈಗೈ–ಗುಂಡಾರ್ ನದಿ ಯೋಜನೆಯನ್ನು ತಮಿಳುನಾಡು ಸರ್ಕಾರ ಕೈಗೆತ್ತಿಕೊಂಡಿದೆ. ಇದಕ್ಕಾಗಿ ಸದ್ದಿಲ್ಲದೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಸಮರೋಪಾದಿಯಲ್ಲಿ ನಡೆಸುತ್ತಿದ್ದು, ಕರ್ನಾಟಕ ಸರ್ಕಾರಕ್ಕೆ ತಮಿಳುನಾಡಿನ ಬುದ್ಧಿವಂತಿಕೆ ನಾಚಿಸುವಂತಿದೆ.

ತಮಿಳುನಾಡಿನ ಕರೂರ್, ತಿರುಚ್ಚಿ ಮತ್ತು ಪುದುಕೊಟ್ಟೈ ಜಿಲ್ಲೆಗಳಲ್ಲಿ ಮಹತ್ವಾಕಾಂಕ್ಷೆಯ ಕಾವೇರಿ–ವೈಗೈ–ಗುಂಡಾರ್ ಅಂತರ ರಾಜ್ಯ ನದಿ ಜೋಡಣೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು, ಈ ಹಣಕಾಸು ವರ್ಷದ ಅಂತ್ಯದೊಳಗೆ ತಮಿಳುನಾಡು ಸರ್ಕಾರ ಪೂರ್ಣಗೊಳಿಸುವ ಗುರಿ ಹೊಂದಿದೆ. ಕಾವೇರಿಯಿಂದ ವೈಗೈ ಹಾಗೂ ಗುಂಡಾರ್‌ಗೆ ಅಗಲ ಹಾಗೂ ಆಳವಾದ ಕಾಲುವೆಗಳನ್ನು ನಿರ್ಮಾಣ ಮಾಡಿ ಹೆಚ್ಚುವರಿ ಕಾವೇರಿ ನೀರು ಸದ್ಬಳಕೆ ಮಾಡಿಕೊಳ್ಳಲು ತಮಿಳುನಾಡು ಸರ್ಕಾರ ಈ ಯೋಜನೆ ರೂಪಿಸಿದೆ. ಇದರಿಂದ ತಮಿಳುನಾಡಿನ ದಕ್ಷಿಣ ಭಾಗಗಳಲ್ಲಿ ನೀರಿನ ಕೊರತೆ ನೀಗಿಸಲಿದೆ.

ಈ ಯೋಜನೆಗೆ ಕರೂರ್ ಜಿಲ್ಲೆಯಲ್ಲಿ 427.81 ಹೆಕ್ಟೇರ್ ಪಟ್ಟಾ ಭೂಮಿ, ತಿರುಚಿ ಜಿಲ್ಲೆಯಲ್ಲಿ 200.41 ಹೆಕ್ಟೇರ್ ಹಾಗೂ ಪುದುಕೊಟ್ಟೈ ಜಿಲ್ಲೆಯಲ್ಲಿ 585.05 ಹೆಕ್ಟೇರ್ ಪಟ್ಟಾ ಹಾಗೂ ಸರ್ಕಾರಿ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ಕರೂರ್ ಜಿಲ್ಲೆಯ ಮಾಯಾನೂರಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಮಾಡಲಾಗಿದೆ. ಇಲ್ಲಿಂದ ಹೆಚ್ಚುವರಿ ಕಾವೇರಿ ನದಿ ನೀರನ್ನು ವೆಲ್ಲಾರ್, ವೈಗೈ ಹಾಗೂ ಗುಂಡಾರ್ ನದಿಗೆ ಹರಿಸಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ 262 ಕಿಲೋ ಮೀಟರ್ ಲಿಂಕ್ ಮುಖ್ಯ ಕಾಲುವೆ ನಿರ್ಮಾಣ ಮಾಡಲಾಗುತ್ತಿದೆ.

> “ಕಾವೇರಿ–ವೈಗೈ–ಗುಂಡಾರ್ ನದಿ ಸಂಪರ್ಕ ಯೋಜನೆಯನ್ನು ತಮಿಳುನಾಡು ಸರ್ಕಾರ 2005ರಲ್ಲೇ ರೂಪಿಸಿತ್ತು. ಈ ಸಂಬಂಧ ಜೂನ್ 24, 2008ರಲ್ಲಿ ಇದಕ್ಕೆ ತಮಿಳುನಾಡು ಸರ್ಕಾರದ ಸಂಪುಟ ಒಪ್ಪಿಗೆ ದೊರೆತು 4 ಸಾವಿರ ಕೋಟಿ ರೂ. ಕೂಡ ಮೀಸಲಿಟ್ಟಿದೆ. ಈ ಯೋಜನೆಯಿಂದ ಕೂರೂರ್, ತಿರುಚ್ಚಿ, ಪುದುಕೋಟೈ, ಶಿವಗಂಗಾ, ವಿರುತ್ ನಗರ್ ಹಾಗೂ ರಾಮನಾಥಪುರಂ ತನಕ ನೀರು ಹರಿಸುವ ಗುರಿ ಇಟ್ಟುಕೊಂಡಿದ್ದಾರೆ. ಇದು ಕಾವೇರಿ ನ್ಯಾಯಾಧೀಕರಣದ ಐ–ತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಆದರೆ ಈ ವಿಚಾರದ ಬಗ್ಗೆ ಕರ್ನಾಟಕ ಸರ್ಕಾರ ಇದೂವರೆಗೆ ತಕರಾರು ತೆಗೆದಿಲ್ಲ. ಇದರಿಂದ ತಮಿಳುನಾಡು ಸರ್ಕಾರದವರು ಈಗ ಸರಾಗವಾಗಿ ಕೆಲಸ ಮಾಡುತ್ತಿದ್ದಾರೆ. ಅತೀ ಹೆಚ್ಚಾಗಿರುವ ಸರ್ಕಾರಿ ಭೂಮಿ ಬಳಸಿಕೊಂಡು ಈ ನೀರಾವರಿ ಯೋಜನೆ ರೂಪಿಸಿದ್ದಾರೆ. ಆದರೆ ತಮಿಳುನಾಡಿನವರಿಗೆ ಇರುವಷ್ಟು ಬುದ್ಧಿವಂತಿಕೆ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ ಯಾವ ಪಕ್ಷದ ಸರ್ಕಾರಕ್ಕೂ ಇಲ್ಲದಿರುವುದು ಬೇಸರದ ಸಂಗತಿ. –ಅರ್ಜುನಹಳ್ಳಿ ಪಸನ್ನ ಕುಮಾರ್, ನೀರಾವರಿ ತಜ್ಞ

ಈ ಯೋಜನೆಯ ಮೊದಲ ಹಂತದಲ್ಲಿ ಸುಮಾರು 42,170 ಎಕರೆ ನೀರಾವರಿ ಪ್ರದೇಶವಾಗಲಿದೆ. ಜೊತೆಗೆ ಕರೂರ್, ತಿರುಚ್ಚಿ, ಹಾಗೂ ಪುದುಕೊಟ್ಟೈ ಜಿಲ್ಲೆಗಳಲ್ಲಿ 342 ನೀರಾವರಿ ಟ್ಯಾಂಕ್‌ಗಳಿಗೆ ನೀರು ದೊರೆಯಲಿದೆ. ಇದಲ್ಲದೆ ಇದರ ಎರಡು ಹಾಗೂ ಮೂರನೆ ಹಂತದ ಯೋಜನೆಯಿಂದ ಮತ್ತೆ ಸಾವಿರಾರು ಎಕರೆ ನೀರಾವರಿ ಪ್ರದೇಶವಾಗಲಿದೆ. ತಮಿಳುನಾಡಿನಲ್ಲಿ ನಡೆಯುತ್ತಿರುವ ಅಂತರ ರಾಜ್ಯ ನದಿ ಜೋಡಣೆ ಯೋಜನೆ ಸದ್ದಿಲ್ಲದೆ ನಡೆಯುತ್ತಿದೆ. ಕಾವೇರಿ ನದಿ ನೀರಿಗೆ ಸಂಬಂಧಿಸಿದಂತೆ ಯಾವುದೇ ಹೊಸ ಯೋಜನೆ ಕೈಗೆತ್ತಿಕೊಳ್ಳುವಂತಿಲ್ಲ ಎಂದು ತಕರಾರು ತೆಗೆಯುವ ತಮಿಳುನಾಡು ಸರ್ಕಾರ ಸದ್ದಿಲ್ಲದೆ ಈ ಯೋಜನೆ ಅನುಷ್ಠಾನಗೊಳಿಸುತ್ತಿದೆ.

ಆದರೆ ಕರ್ನಾಟಕದಲ್ಲಿ ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳಲು ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಹಾದಿರಂಪ ಬೀದಿ ರಂಪ ಮಾಡಿಕೊಂಡಿವೆ. ಈ ತನಕ ಡಿಪಿಆರ್ ಕೂಡ ಸಿದ್ಧಪಡಿಸಲು ಸಾಧ್ಯವಾಗಿಲ್ಲ. ತೀರಾ ಸರ್ವೆ ಕಾರ್ಯ ಕೂಡ ಆರಂಭವಾಗಿಲ್ಲ.

ಮೂರು ಪಕ್ಷಗಳಿಗೆ ಮೇಕೆದಾಟು ಯೋಜನೆ ರಾಜಕೀಯ ಲಾಭಕ್ಕೆ ಒಂದು ಅಸ್ತ್ರವಾಗಿದೆ. ಚುನಾವಣೆ ಬಂದಾಗ ಮೇಕೆದಾಟು ಯೋಜನೆ ಬಗ್ಗೆ ಮಾತನಾಡುವ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದಾಗ ಮರೆತು ಬಿಡುತ್ತವೆ. ಇದೇ ವಿಚಾರವಾಗಿ ಮಾತನಾಡುತ್ತಿದ್ದ ವಿರೋಧ ಪಕ್ಷಗಳು ಕೂಡ ಮೌನ ವಹಿಸಿವೆ. ಕಳೆದ ವಿಧಾನ ಸಭಾ ಚುನಾವಣೆಗೆ ಮುನ್ನ ಈಗಿನ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೇಕೆದಾಟುನಿಂದ ಬೆಂಗಳೂರು ತನಕ ಪಾದಯಾತ್ರೆ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ನಾಯಕರು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಆದರೆ ಈಗ ಅಧಿಕಾರಕ್ಕೆ ಬಂದು 7 ತಿಂಗಳಾದರೂ ಮೇಕೆದಾಟು ಯೋಜನೆ ಬಗ್ಗೆ ಚಕಾರ ಎತ್ತುತ್ತಿಲ್ಲ.

ರಾಮನಗರದ ಜಿಲ್ಲೆಯ ಹನೂರು ಅರಣ್ಯ ವಲಯದ ಗುಡ್ಡೆ ನಡುವೆ ಒಂಟಿಗುಂಡು ಸ್ಥಳದಲ್ಲಿ ಕಾವೇರಿ ನದಿ ಹರಿಯುತ್ತವೆ. ಈ ಸ್ಥಳದಲ್ಲಿ ಆಹಾರಕ್ಕಾಗಿ ಮೇಕೆಗಳು ದಾಟುವ ಕಾರಣ ಇದನ್ನು ಮೇಕೆದಾಟು ಎಂದು ಕರೆಯಲಾಗುತ್ತದೆ.

ಸಮುದ್ರ ಪಾಲಾಗುವ ಸುಮಾರು 67 ಟಿಎಂಸಿ ಹೆಚ್ಚುವರಿ ನೀರನ್ನು ಇಲ್ಲಿ ಸಂಗ್ರಹಿಸಬಹುದು. ಇದರಿಂದ ಸ್ಥಳಿಯವಾಗಿ ಸಾವಿರಾರು ಎಕರೆ ನೀರಾವರಿ ಪ್ರದೇಶವಾಗುತ್ತದೆ. ಜೊತೆಗೆ ವಿದ್ಯುತ್ ಉತ್ಪಾದನೆ ಕೂಡ ಮಾಡಬಹುದಾಗಿದೆ. ಮೇಕೆದಾಟು ಅಣೆಕಟ್ಟು ನಿರ್ಮಾಣವಾದರೆ ಅನಿಯಂತ್ರಿತ ನೀರಿನ ಹರಿವಿಗೆ ತಡೆಯಾಗುತ್ತದೆ. ಅಣೆಕಟ್ಟು ಪ್ರಸ್ತಾಪವು ಕಾವೇರಿ ನ್ಯಾಯಮಂಡಳಿಯ ಐತೀರ್ಪಿನ ಸ್ಪಷ್ಟ ಉಲ್ಲಂಘನೆ ಎಂದು ತಮಿಳುನಾಡು ಸರ್ಕಾರ ಕ್ಯಾತೆ ತೆಗೆದಿದೆ.

ಆದರೆ ಅದೇ ತಮಿಳುನಾಡು ಸರ್ಕಾರ ಅಂತಾರಾಜ್ಯ ನದಿ ಜೋಡಣೆ ಯೋಜನೆ ಮೂಲಕ ಸಮುದ್ರದ ಪಾಲಾಗುತ್ತಿರುವ ಹೆಚ್ಚುವರಿ ಕಾವೇರಿ ನೀರನ್ನು ಸದ್ಬಳಕೆ ಮಾಡಿಕೊಳ್ಳುತ್ತಿದೆ. ಆದರೆ ಕರ್ನಾಟಕದಲ್ಲಿ ರಾಜಕೀಯ ಪಕ್ಷಗಳು ಈ ಬಗ್ಗೆ ತಕರಾರು ಎತ್ತದೆ ಕಚ್ಚಾಡುತ್ತಾ ನಗೆಪಾಟಲಿಗೀಡಾಗಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.1.2024 ಶನಿವಾರ, ಮಳೆ ನಕ್ಷತ್ರ: ಪೂಷಾ 29.12.2023 ರಿಂದ 10.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಂಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು 108 ಕಳಸಗಳ ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಎನ್.ಆರ್. ಫೌಂಡೇಷನ್, ಮಾರುಕಟ್ಟೆಗಳು ಜೀವಂತ ಪರಂಪರೆಯಾಗಿವೆ, ಸಂರಕ್ಷಣೆ ಮತ್ತು ಪುನರುಜ್ಜೀವನದ ಪ್ರಕರಣ :** ಮುಖ್ಯ ಅತಿಥಿಗಳು : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಭಾಷಣಕಾರರು : ಡಾ. ಶಿಖಾ ಜೈನ್, ಪ್ರೊ. ಸಂಗಮಿತ್ರ ಬಸು, ಡಾ. ಎಸ್. ರಘುನಾಥ್, ರಂಜಿತ್ ಪಾಟೀಲ್, ಸ್ಥಳ: ಮಲ್ಟಿ ಪರ್ಪಸ್ ಹಾಲ್, ಕೃಷ್ಣರಾಜ ಬೂಲ್‌ವಾರ್ಡ್, ಬೆ. 9.30ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು :** ಸ್ಪೆಷಲ್ ಫ್ಯೂಷನ್ ಸಂಗೀತ, ಗೌರವ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಲಲಿತಾ ಕಲಾ ಮಂದಿರ, ಲಲಿತ ಕಲೆಗಳ ಕಾಲೇಜು, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆ, ಅಧ್ಯಕ್ಷತೆ : ಪ್ರೌಢಶಾಲಾ ಮುಖ್ಯ ಶಿಕ್ಷಕ ಕೃಷ್ಣಮೂರ್ತಿ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಕಲಾವಿದೆ ಶ್ರೀಮತಿ ಡಾ. ಜಮುನಾರಾಣಿ ಮಿರ್ಲೆ, ಸಂಖ್ಯಾಶಾಸ್ತ್ರಜ್ಞ ಎಸ್.ಜಿ. ಸೀತಾರಾಂ, ಬಹುಮಾನ ವಿತರಣೆ : ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ. ಕಾವೇರಿಯಮ್ಮ, ಪ್ರಾಸ್ತಾವಿಕ ನುಡಿ : ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಸಾರ್ವಜನಿಕ ಬಾಲಕಿಯರ ಪ್ರೌಢಶಾಲೆ, ಚಾಮುಂಡಿಬೆಟ್ಟ, ಬೆಳಗ್ಗೆ 10ಕ್ಕೆ.

■ **ಕೆಎನ್‌ಸಿ ಇನ್ನೋವೇಟಿವ್ ಗ್ಲೋಬಲ್ ಸ್ಕೂಲ್ :** ಬೆಳಗ್ಗೆ 10ಕ್ಕೆ ವಾರ್ಷಿಕೋತ್ಸವ (ಮಾಂಟೆಸ್ಸರಿ, 1, 2, 3 ಮತ್ತು ಗ್ರೇಡ್ 1 ಮತ್ತು 2) ಮುಖ್ಯ ಅತಿಥಿಗಳು : ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ವಿವೇಕಾನಂದ, ವಿಶ್ರಾಂತ ಪ್ರಿನ್ಸಿಪಾಲ್ ಇಂಗ್ರೀಡ್ ಪೇರೇರಾ, ಅಧ್ಯಕ್ಷತೆ : ಕಾಲೇಜು ಅಧ್ಯಕ್ಷ ಡಾ. ಕೆ.ಎನ್. ಚಂದ್ರಶೇಖರ್, ಮಧ್ಯಾಹ್ನ 3.30ಕ್ಕೆ ವಾರ್ಷಿಕೋತ್ಸವ (3 ರಿಂದ 10ನೇ ತರಗತಿ), ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಕಾಲೇಜು ಅಧ್ಯಕ್ಷ ಡಾ. ಕೆ.ಎನ್. ಚಂದ್ರಶೇಖರ್, ಸ್ಥಳ: ಘಟಿಕೋತ್ಸವ ಭವನ, ಮುಕ್ತ ಗಂಗೋತ್ರಿ.

■ **ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ :** ಸುವರ್ಣ ಮಹೋತ್ಸವ ಕಾರ್ಯಕ್ರಮ, ಆಹಾರ ಮೇಳ ಮತ್ತು ಪುಸ್ತಕ ಪ್ರದರ್ಶನ ಮತ್ತು ಮಾರಾಟ, ಸಂಜೆ 4.30ಕ್ಕೆ ಭಗವದ್ಗೀತೆ ಪಠಣ, ಸಂಜೆ 5ಕ್ಕೆ ಕು. ಪೂರ್ವಿ ಹೆಗಡೆ ಅವರಿಂದ ನೃತ್ಯ, ಕು. ಧಾರಿಣಿ ಹೆಗಡೆ ಅವರಿಂದ ಏಕಪಾತ್ರಾಭಿನಯ, ವಿದುಷಿ ಜ್ಯೋತಿ ಎನ್. ಹೆಗಡೆ ಅವರ ಲಾಸ್ಯ ರಂಜನ ನೃತ್ಯಶಾಲೆ ವಿದ್ಯಾರ್ಥಿಗಳಿಂದ ನೃತ್ಯ, ಸಂಜೆ 6ಕ್ಕೆ ಡಾ. ಶಿಲ್ಪಾ ಹೆಗಡೆ, ಅತಿಶಯ ಜೈನ್, ಡಾ. ಪ್ರೀತಿ ಪ್ರಕಾಶ್ ಮತ್ತು ಡಾ. ನಿತಿನ್ ಅವರಿಂದ ಸಂಗೀತ ಸಂಜೆ, ಸಂಜೆ 7ಕ್ಕೆ ಶ್ರೀಮತಿ ಸಂಧ್ಯಾ ರವಿ ಮತ್ತು ತಂಡದವರಿಂದ ಯಕ್ಷಗಾನ 'ಲವ–ಕುಶ', ಸ್ಥಳ: ಯೋಗ ಸಂಸ್ಕೃತಿ ಕಲಾ ಭವನ (ಸಂಘದ ಆವರಣ).

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಕಲ್ಲಾಪುರ ಪವಮಾನಾಚಾರ್ಯ ಅವರಿಂದ ಭಗವದ್ಗೀತೆ 14ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಸಹ ಪ್ರಾಧ್ಯಾಪಕ ಡಾ. ಎಂ.ಜಿ. ಭರತ್‌ರಾಜ್ ಅವರಿಂದ ಭಾರತದ ಸಂವಿಧಾನ ಮತ್ತು ಹಿಂದುಳಿದ ವರ್ಗಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಿಲಯಪಾಲಕ ಜಗದೀಶ್ ಜಿ. ಕೋರಿ, ಸ್ಥಳ: ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕುವೆಂಪುನಗರ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವ ನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6.45ರಿಂದ.

■ **ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರ ಪರಿಷತ್ :** 9ನೇ ವಾರ್ಷಿಕ ಸಮ್ಮೇಳನ, ಬೆಳಗ್ಗೆ 6.15ಕ್ಕೆ ಸ್ವಾಮಿ ಸುಮೇಧಾನಂದಜೀ ಮಹಾರಾಜ್ ಮತ್ತು ಸಂನ್ಯಾಸಿ ವೃಂದದವರಿಂದ ಉಷಃಕೀರ್ತನೆ, 6.45ಕ್ಕೆ ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್ ಅವರಿಂದ ಶ್ರೀ ರಾಮಕೃಷ್ಣರ ಪ್ರಾತಃಸ್ಮರಣೆ ಮತ್ತು ನಿರ್ದೇಶಿತ ಧ್ಯಾನ, ಅಧ್ಯಕ್ಷತೆ: ವಿಧಾನ ಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡ, ವಿಶೇಷ ಆಹ್ವಾನಿತರು : ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಡಾ. ಎಸ್.ಪಿ.ಯೋಗಣ್ಣ, ಪಾಲಿಕೆ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಕಿರಣ್, ಆರ್.ಕೆ. ಶರತ್‌ಕುಮಾರ್, ಶ್ರೀಮತಿ ನಿರ್ಮಲ ಹರೀಶ್, ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಸ್ಥೆ ಅಧ್ಯಕ್ಷ ಹೆಚ್.ಜೆ. ಬಸವಲಿಂಗಪ್ಪ, ಯುವ ಸಮ್ಮೇಳನ : ದಿವ್ಯತ್ರಯ ದರ್ಶನಧಾರೆ ಭಾಗ–1, ಬೆಳಗ್ಗೆ 8.15ರಿಂದ ಸ್ವಾಮಿ ತದ್ಯುಕ್ತಾನಂದಜೀ ಮಹಾರಾಜ್ ಅವರಿಂದ ಭಜನೆ, 8.45ಕ್ಕೆ ಸ್ವಾಮಿ ಶ್ರೀ ಶಾಂತಾನಂದಜೀ ಮಹಾರಾಜ್ ಅವರಿಂದ ಸ್ವಾಗತ, ಬೆ. 9ಕ್ಕೆ ಸ್ವಾಮಿ ಮಂಗಳಾನಾಥಾನಂದಜೀ ಮಹಾರಾಜ್ ಅವರಿಂದ ಯುವಜನತೆಯ ಉಜ್ವಲ ಆದರ್ಶ ಸ್ವಾಮಿ ವಿವೇಕಾನಂದ ಕುರಿತು ಉಪನ್ಯಾಸ, ಬೆ. 9.20ಕ್ಕೆ ಭವತಾರಿಣಿ ಆಶ್ರಮದ ಮುಖ್ಯಸ್ಥೆ ಮಾತಾಜೀ ವಿವೇಕಮಯೀ ಅವರಿಂದ ಪ್ರಕೃತಿಯ ದಾಸ್ಯವಲ್ಲ : ಪ್ರಕೃತಿಯ ಮೇಲೆ ಪ್ರಭುತ್ವ ಸ್ವಾಮಿ ವಿವೇಕಾನಂದರ ಸಿಂಹವಾಣಿ ಕುರಿತು ಉಪನ್ಯಾಸ, ಬೆ. 9.40ಕ್ಕೆ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರಿಂದ ಸಮಾಜ ನಿರ್ಮಾಣದಲ್ಲಿ ಯುವಕರ ಪಾತ್ರ–ವಿವೇಕಾನಂದರ ಮಾರ್ಗ ಕುರಿತು ಉಪನ್ಯಾಸ, ಬೆ. 10.20ಕ್ಕೆ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅವರಿಂದ ಆಧ್ಯಾತ್ಮಿಕ ರಾಷ್ಟ್ರೀಯತೆ–ಸ್ವಾಮಿ ವಿವೇಕಾನಂದರ ಪರಿಕಲ್ಪನೆ ಕುರಿತು ಉಪನ್ಯಾಸ, ಮ. 2.30 ರಿಂದ ದಿವ್ಯತ್ರಯ ದರ್ಶನಧಾರೆ ಭಾಗ–2, ಸ್ವಾಮಿ ವಿನಯಾನಂದಜೀ ಮಹಾರಾಜ್ ಅವರಿಂದ ಸ್ವಾಗತ, ಮ. 2.30 ರಿಂದ ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್ ಅವರಿಂದ ಶ್ರೀಮಾತೆ ಶಾರದಾದೇವಿ ನಡೆದ ದಾರಿ ಮತ್ತು ನುಡಿದ ಮಾತು ಕುರಿತು ಉಪನ್ಯಾಸ, ಮ. 2.50ಕ್ಕೆ ಸ್ವಾಮಿ ಹೃದಾನಂದಜೀ ಮಹಾರಾಜ್ ಅವರಿಂದ ನಿತ್ಯ ಜೀವನದ ಕರ್ತವ್ಯಗಳು ಮತ್ತು ಆಧ್ಯಾತ್ಮಿಕ ಸಾಧನೆ ಕುರಿತು ಉಪನ್ಯಾಸ, ಮ. 3.10ಕ್ಕೆ ಸ್ವಾಮಿ ಅಭಯಾನಂದಜೀ ಮಹಾರಾಜ್ ಅವರಿಂದ ಸ್ವಾಮಿ ವಿವೇಕಾನಂದರ ದೇಶಭಕ್ತಿ ಕುರಿತು ಉಪನ್ಯಾಸ, ಮ. 3.30ಕ್ಕೆ ಸ್ವಾಮಿ ಸರ್ವಜಯಾನಂದಜೀ ಮಹಾರಾಜ್ ಅವರಿಂದ ಶ್ರೀ ರಾಮಕೃಷ್ಣ ಮಹಾತ್ಮೆ ಕುರಿತು ಉಪನ್ಯಾಸ, ಸ್ವಾಮಿ ವಿಜಯಾನಂದಜೀ ಮಹಾರಾಜ್ ಅವರಿಂದ ವಂದನಾರ್ಪಣೆ, ಸಂಜೆ 4.30 ರಿಂದ ದಿವ್ಯತ್ರಯ ದರ್ಶನಧಾರೆ ಭಾಗ–3, ಸಾನ್ನಿಧ್ಯ : ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ಶ್ರೀಪಾದಂಗಳವರು, ಮುಖ್ಯ ಅತಿಥಿಗಳು : ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಸಂಸದ ಪ್ರತಾಪ್ ಸಿಂಹ, ರಾತ್ರಿ 7.15 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗಾವಿ ಶಾಂತಲಾ ನಾಟ್ಯಾಲಯದ ಶಿಷ್ಯ ವೃಂದದವರಿಂದ ಶ್ರೀ ರಾಮಕೃಷ್ಣ ಚರಿತಂ ನೃತ್ಯರೂಪಕ, ನಿರ್ದೇಶನ : ವಿದುಷಿ ರೇಖಾ ಅಶೋಕ್ ಹೆಗಡೆ, ಸ್ಥಳ: ರಾಮಕೃಷ್ಣನಗರ ಪರಮಹಂಸರ ವೃತ್ತ.

■ **ನಾಗರಿಕ ವೇದಿಕೆ, ಪೂರ್ಣಪ್ರಜ್ಞಾ ವಿದ್ಯಾಕೇಂದ್ರ :** ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ನಾಗರಿಕ ವೇದಿಕೆ ಕಾರ್ಯಾಧ್ಯಕ್ಷ ಕೆ.ಆರ್. ಶ್ರೀರಂಗಯ್ಯ, ಮುಖ್ಯ ಅತಿಥಿಗಳು : ಕು. ಸಾಥ್ವಿಕ, ಸಂತೋಷ್ ಬಿಲ್ಲವ, ಕೇಂದ್ರ ತೆರಿಗೆಯ ಅಧೀಕ್ಷಕ ಜಿ.ಎನ್. ಶಶಿಧರ್, ವೇದಿಕೆ ಗೌರವ ಅಧ್ಯಕ್ಷ ಬಿ.ಪಿ. ಪುಟ್ಟಸ್ವಾಮಿ, ಸ್ಥಳ:ರಮಾಗೋವಿಂದ ಕಲಾವೇದಿಕೆ, ಗಾನಭಾರತೀ, ವೀಣೆ ಶೇಷಣ್ಣ ಭವನ, ಸಂಜೆ 4.30ಕ್ಕೆ.

■ **ಇಸ್ಕಾನ್ :** ಇಸ್ಕಾನ್ ಶ್ರೀಕೃಷ್ಣ ಬಲರಾಮ ರಥಯಾತ್ರೆ, ಮುಖ್ಯ ಅತಿಥಿಗಳು : ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಇಸ್ಕಾನ್ ಅಧ್ಯಕ್ಷ ಮಧು ಪಂಡಿತ ದಾಸರು, ಸ್ಥಳ: ಅರಮನೆ ಆಂಜನೇಯಸ್ವಾಮಿ ದೇವಸ್ಥಾನದಿಂದ, ಸಂಜೆ 4.30ಕ್ಕೆ.

■ **ಭಾರತೀ ಯೋಗಧಾಮ :** ಅರ್ಧಮಂಡಲೋತ್ಸವ, ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣದ ಔಚಿತ್ಯ ಮತ್ತು ವಿದ್ಯಾನಂದಿನಿ ಗುರುಕುಲದ ವೆಬ್‌ಸೈಟ್ ಲೋಕಾರ್ಪಣೆ, ಉಪನ್ಯಾಸಕರು: ರಾಷ್ಟ್ರೀಯ ಚಿಂತಕ ಚಕ್ರವರ್ತಿ ಸೂಲಿಬೆಲೆ, ಅಧ್ಯಕ್ಷತೆ : ಭಾರತೀ ಯೋಗಧಾಮ ಸಂಸ್ಥಾಪಕ ಡಾ.ಕೆ.ಎಲ್. ಶಂಕರ ನಾರಾಯಣ ಜೋಯಿಸ್, ಸ್ಥಳ: ಭಾರತೀ ಯೋಗಧಾಮ, ವಿಜಯಗಿರಿ, ಉತ್ತನಹಳ್ಳಿ, ಸಂಜೆ 6 ರಿಂದ.

■ **ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್ :** ನೃತ್ಯ ಸಮರ್ಪಣಾ, ನಾಟ್ಯಾಚಾರ್ಯ ಟಿ.ಎನ್. ಸೋಮಶೇಖರ್ ಸಂಸ್ಮರಣಾ ನೃತ್ಯ ವೈಭವ ಭರತನಾಟ್ಯ ಕಾರ್ಯಕ್ರಮ, ಅಧ್ಯಕ್ಷತೆ : ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸನ್ಮಾನಿತರು: ಡಾ.ಕೆ.ಕುಮಾರ್, ಡಾ. ರೋಹಿತ್ ಈಶ್ವರ್, ಸಂಜೆ 5.45ಕ್ಕೆ ನೃತ್ಯ ಕಾರ್ಯಕ್ರಮ ಉದ್ಘಾಟನೆ, ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರದ ಶಿಷ್ಯ ವೃಂದದವರಿಂದ ನೃತ್ಯ ವೈಭವ, ಸಭಾ ಕಾರ್ಯಕ್ರಮ, ಸೋಮಶ್ರೀ ಪ್ರಶಸ್ತಿ ಪ್ರದಾನ, ವಿದ್ವಾನ್ ವಿನಯ್ ರಾಜಮಾನ್ಯ ಅವರಿಂದ ಗಾಯನ, ವಿದುಷಿ ಲಕ್ಷ್ಮಿಕುಮಾರ್–ನಟುವಾಂಗ, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ರಾಜೇಶ್–ಕೊಳಲು, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.45ಕ್ಕೆ.

■ **ಇನ್‌ಸ್ಟ್ಯೂಷನ್ ಆಫ್ ಇಂಜಿನಿಯರ್ಸ್:**ಎಡ್‌ಸ್ಪೈರ್ ರೀಸರ್ಚ್ ಸೆಂಟರ್ ನಿರ್ದೇಶಕ ಡಾ. ತೋಟ್ರಂಗಮ್ ಕಸಾರ್ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಕೇಶವ ಪ್ರಕಾಶ್ ಎಂ.ಎನ್., 6.40 ಪದ ಸಂಸ್ಕೃತಿ–ಪ್ರೊ. ಲಕ್ಷ್ಮೀನಾರಾಯಣ ಅರೋರಾ, 6.50 ರೈತರಿಗೆ ಸಲಹೆ, 7.15 ನಂದಿಸದಿರಿ ನಂದಾದೀಪ–ಪ್ರಾಯೋಜಿತ ಕಾರ್ಯಕ್ರಮ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ, 10.00 ಎಂ.ಎಸ್. ಆನಂದ್–ನಾಗಸ್ವರ ವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ, 3.30 ಮಕ್ಕಳ ಮಂಟಪ –ಮಳವಳ್ಳಿ ನಂಜೇಗೌಡನದೊಡ್ಡಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ "ಅಮ್ಮ", ಮೂಲ ಹಿಂದಿ– ವಿಷ್ಣು ಪ್ರಭಾಕರ, ಕನ್ನಡಾನುವಾದ– ಪಾರ್ವತಿ ಜಿ. ಐತಾಳ್, ನಿರ್ಮಾಣ–ಡಾ. ಬಿ.ಎಂ. ಶರಭೇಂದ್ರ ಸ್ವಾಮಿ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರ್ ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.15 ಯುವವಾಣಿ–ಮೈಸೂರಿನ ವಿಜಯನಗರದಲ್ಲಿರುವ ಸದ್ವಿದ್ಯಾ ಸೆಮಿರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ಹರಿ ಮೋಹನ್ ಝಾ, ದ್ರುಪದ್–ದಮಾರ್

ಪರ ಪುರುಷನೊಂದಿಗೆ ಸಂಭಾಷಣೆ ಆರೋಪ; ಪತ್ನಿಯ ಕೊಚ್ಚಿ ಹತ್ಯೆ ಯತ್ನ: ಪತಿಯ ಬಂಧನ

ಹುಲ್ಲಹಳ್ಳಿ, ಜ. 5– ಪರ ಪುರುಷನೊಂದಿಗೆ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದಾಳೆ ಎಂಬ ಕಾರಣಕ್ಕಾಗಿ ಪತಿರಾಯನೋರ್ವ ಪತ್ನಿಯನ್ನು ಮಚ್ಚಿನಲ್ಲಿ ಕೊಚ್ಚಿ ಹತ್ಯೆಗೆ ಯತ್ನಿಸಿದ ಘಟನೆ ನಂಜನಗೂಡು ತಾಲೂಕು ರಾಂಪುರ ಗ್ರಾಮದಲ್ಲಿ ನಡೆದಿದೆ. ಈ ಗ್ರಾಮದ ನಿವಾಸಿ ಪ್ರಕಾಶ್ (37) ಎಂಬಾತನೇ ಪತ್ನಿ ದೇವಮಣಿ(27) ಹತ್ಯೆಗೆ ಯತ್ನಿಸಿ, ಪೊಲೀಸರ ಅತಿಥಿಯಾದವನಾಗಿದ್ದು, ತೀವ್ರವಾಗಿ ಗಾಯಗೊಂಡಿರುವ ದೇವಮಣಿ ಕೆಆರ್ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ವಿವರ: ಪ್ರಕಾಶ್ ಮತ್ತು ದೇವಮಣಿ ಅವರಿಗೆ 12 ವರ್ಷದ ಹಿಂದೆ ವಿವಾಹವಾಗಿದ್ದು, ಇಬ್ಬರು ಪುತ್ರಿಯರಿದ್ದಾರೆ. ಕಳೆದ 3 ವರ್ಷದಿಂದ ದೇವಮಣಿ ಬೇರೆ ಯಾರೊಂದಿಗೋ ಮೊಬೈಲ್‌ನಲ್ಲಿ ನಿರಂತರವಾಗಿ ಮಾತನಾಡುತ್ತಿದ್ದಾಳೆ ಎಂಬ ಕಾರಣಕ್ಕಾಗಿ ಇವರಿಬ್ಬರ ನಡುವೆ ಗಲಾಟೆಗಳು ನಡೆದು, ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣವೂ ದಾಖಲಾಗಿತ್ತು. ಪ್ರಕಾಶ್ ಮತ್ತು ದೇವಮಣಿ ಕುಟುಂಬದವರು ಈ ದಂಪತಿಗೆ ಅನ್ಯೋನ್ಯವಾಗಿ ಜೀವನ ಸಾಗಿಸುವಂತೆ ಬುದ್ಧಿವಾದ ಹೇಳಿದ್ದರು.

ಈ ನಡುವೆ ಜ. 3ರಂದು ರಾತ್ರಿ 10 ಗಂಟೆ ಸುಮಾರಿನಲ್ಲಿ ದೇವಮಣಿ ತಾಯಿಗೆ ಮೊಬೈಲ್‌ನಿಂದ ಕರೆ ಮಾಡಿದ ಪ್ರಕಾಶ್, ನಿಮ್ಮ ಮಗಳು ಬೇರೆಯವನೊಂದಿಗೆ ಫೋನ್‌ನಲ್ಲಿ ಮಾತನಾಡುತ್ತಿದ್ದರಿಂದ ಅವಳನ್ನು ಕೊಚ್ಚಿ ಹಾಕಿದ್ದೇನೆ ಎಂದು ತಿಳಿಸಿದ್ದಾನೆ. ತಕ್ಷಣವೇ ಆಕೆಯ ಕುಟುಂಬದವರು ಮನೆಗೆ ಹೋಗಿ ನೋಡಿ, ರಕ್ತದ ಮಡುವಿನಲ್ಲಿ ಬಿದ್ದಿದ್ದ ದೇವಮಣಿಯನ್ನು ಮೈಸೂರಿನ ಕೆಆರ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಹುಲ್ಲಹಳ್ಳಿ ಠಾಣೆ ಪೊಲೀಸರು ಪ್ರಕಾಶ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಮನೆ ಬಾಗಿಲು ಮುರಿದು ಚಿನ್ನಾಭರಣ, ಬೆಳ್ಳಿ ಪದಾರ್ಥ ಕಳವು

ಮೈಸೂರು, ಜ. 5– ಮನೆ ಬಾಗಿಲು ಬೀಗ ಮುರಿದು ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥ ಕಳವು ಮಾಡಿರುವ ಘಟನೆ ಮೈಸೂರಿನ ಗಾಯತ್ರಿಪುರಂ 2ನೇ ಹಂತದಲ್ಲಿ ನಡೆದಿದೆ.

ಇಲ್ಲಿನ ನಿವಾಸಿ ಮೈಸೂರು ಹಾಲಿ ಡೈರಿ ಸಿಬ್ಬಂದಿ ಗೋವಿಂದರಾಜು(53) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಮತ್ತು ಪತ್ನಿ ಜನವರಿ 1ರಂದು ಸಂಬಂಧಿಕರ ಮನೆಗೆ ತೆರಳಿದ್ದು, ಜ. 2ರಂದು ರಾತ್ರಿ 10.30ರಲ್ಲಿ ಹಿಂತಿರುಗಿದಾಗ ಮನೆಯ ಡೋರ್‌ಲಾಕ್ ಮುರಿದು ಹಾಗೂ ಬೆಡ್‌ರೂಂನಲ್ಲಿದ್ದ ಬೀರುವನ್ನು ಮೀಟಿ ಅದರಲ್ಲಿದ್ದ 25 ಗ್ರಾಂ ತೂಕದ ಚಿನ್ನದ ಸರ ಮತ್ತು 150 ಗ್ರಾಂ ತೂಕದ ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಡಗಿನ ಮೂಲದ ಅಮೆರಿಕಾದ ನಿವೃತ್ತ ಪ್ರೊಫೆಸರ್ ಖಾತೆಯಿಂದ 1.97 ಲಕ್ಷ ಅಕ್ರಮವಾಗಿ ಡ್ರಾ

ಮಡಿಕೇರಿ, ಜ.5–ಮೂಲತಃ ಕೊಡಗಿನವರಾಗಿದ್ದು, ಅಮೆರಿಕಾದ ನಿವೃತ್ತ ಪ್ರೊಫೆಸರ್ ಬ್ಯಾಂಕ್ ಖಾತೆಯಿಂದ ಅವರಿಗೆ ತಿಳಿಯದಂತೆ 1.97 ಲಕ್ಷ ರೂ. ಅಕ್ರಮವಾಗಿ ಡ್ರಾ ಮಾಡಲಾಗಿದೆ.

ಅಮೆರಿಕದಲ್ಲಿ ಪ್ರೊಫೆಸರ್ ಆಗಿದ್ದು, ನಿವೃತ್ತರಾಗಿರುವ ಪೊನ್ನಂಪೇಟೆ ತಾಲೂಕು ದೇವನೂರು ಗ್ರಾಮದ ಕೆ.ಬಿ. ಪೂಣಚ್ಚ(85) ಹಣ ಕಳೆದುಕೊಂಡವರಾಗಿದ್ದು, ಅಮೆರಿಕದಲ್ಲಿ ವಾಸವಿರುವ ಇವರು ಆಗಿಂದಾಗ್ಗೆ ಕೊಡಗಿಗೆ ಬಂದು ಹೋಗುತ್ತಾರೆ. ಅವರು ಕೆನರಾ ಬ್ಯಾಂಕ್ ವಿರಾಜಪೇಟೆ ಬ್ರಾಂಚ್‌ನಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದು, ಅವರು ಕೊಡಗಿಗೆ ಬಂದಾಗ ತಮ್ಮ ಬ್ಯಾಂಕ್ ವಹಿವಾಟನ್ನು ಗಮನಿಸಿದ ವೇಳೆ ಅವರ ಗಮನಕ್ಕೆ ಬಾರದಂತೆ 2023ರ ಫೆ.23ರಿಂದ ಸೆ.8ರವರೆಗೆ ಹಲವು ಬಾರಿ ಅವರ ಖಾತೆಯಿಂದ ಒಟ್ಟು 1,97,325 ರೂ. ಅಕ್ರಮವಾಗಿ ಡ್ರಾ ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜ.26ರಿಂದ 'ಚಿತ್ರಸಂತೆ'

ಮೈಸೂರು, ಜ.5– ಪ್ರವಾಸೋದ್ಯಮ ಇಲಾಖೆ ವತಿಯಿಂದ ಮೈಸೂರು ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಮೈಸೂರು ಫೆಸ್ಟ್ ಕಾರ್ಯಕ್ರಮನ್ನು ಜನವರಿ 26 ರಿಂದ ಆಯೋಜಿಸಲಾಗುತ್ತಿದೆ.

ಮೈಸೂರು ಫೆಸ್ಟ್ ಕಾರ್ಯಕ್ರಮದ ಪ್ರಯುಕ್ತ ಮೈಸೂರು ಜಿಲ್ಲೆಯ ಇತಿಹಾಸ, ಸಾಂಸ್ಕೃತಿಕ ಪರಂಪರೆ, ವೈಭವ ಹಾಗೂ ಪ್ರವಾಸಿ ತಾಣಗಳನ್ನು ಪ್ರತಿ ಬಿಂಬಿಸುವ 'ಚಿತ್ರಸಂತೆ' ಕಾರ್ಯಕ್ರಮವನ್ನು ಜನವರಿ 26 ರಿಂದ 28 ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ಲಾಕ್ ಟವರ್ ಮುಂಭಾಗದ ರಸ್ತೆಯಲ್ಲಿ ನಡೆಸಲಾಗುತ್ತಿದೆ.

ಆಸಕ್ತರು ಜ.8ರಿಂದ https://forms.gle/M4U2dsXfkBEgmZn9 ಲಿಂಕ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಜ.16 ಕೊನೆಯ ದಿನಾಂಕವಾಗಿರುತ್ತದೆ. ಸಲ್ಲಿಕೆಯಾದ ಅರ್ಜಿಗಳಲ್ಲಿ ಆಯ್ಕೆ ಸಮಿತಿಯು ಆಯ್ಕೆ ಮಾಡಿದ 30 ಅರ್ಜಿದಾರರಿಗೆ ಮಾತ್ರ ಮಳಿಗೆಗಳನ್ನು ನಿಗಧಿತ ದರದಲ್ಲಿ ಮೂರು ದಿನಗಳಿಗೆ ಹಂಚಿಕೆ ಮಾಡಿ ಚಿತ್ರಸಂತೆಗೆ ಅವಕಾಶ ಮಾಡಿಕೊಡಲಾಗುವುದು.

ಮಾಹಿತಿಗಾಗಿ 7411564510 ಸಂಪರ್ಕಿಸಿ ಅಥವಾ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್ ಪೇಜ್‌ನ್ನು ಫಾಲೋ ಮಾಡಬಹುದಾಗಿದೆ. ಚಿತ್ರಸಂತೆಯ ಕಾರ್ಯಕ್ರಮಕ್ಕೆ ಆಸಕ್ತ ಕಲಾವಿದರು ಭಾಗವಹಿಸುವಂತೆ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ಟಿ.ಕೆ. ಹರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಪತ್ರಕರ್ತ : ನಿಮ್ಮ ಸಾಧನೆ ಬಗ್ಗೆ ಎಲ್ಲರಿಗೂ ಖುಷಿ ತಂದಿದೆ. ಎಲ್ಲರೂ ನಿಮ್ಮನ್ನು ಭಾರತ ಮಾತೆಯ ಹೆಮ್ಮೆಯ ಪುತ್ರಿ ಅನ್ನುತ್ತಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯ?

ಚಿತ್ರನಟಿ : ಈ ಮಾತನ್ನು ನಾನು ಒಪ್ಪಲ್ಲ. ನಾನು ತಿಪ್ಪಮ್ಮನ ಪುತ್ರಿ...!

ಮೈಸೂರು ಮಿತ್ರ
ಶನಿವಾರ, 6 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಸವಾಲುಗಳು ಎದುರಾದಾಗಲೇ ನೀವೇ ಕಂಡಿರದ ಯೋಗ್ಯತೆ ನಿಮ್ಮಲ್ಲಿರುವುದನ್ನು ತಿಳಿಯುವಿರಿ. – ಡೋರಾ ಅಲ್ಬರ್ಟ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧಾನ್ಯ ಹೆಚ್ಚಿದವನಿಗೆ ಮಾನ್ಯವೂ ಹೆಚ್ಚು

ನಿಮ್ಮ ಪತ್ರಗಳು

ವಿಶ್ವನಾಥ್‌ರ ಜನತಾ ದರ್ಶನ ಯಶಸ್ವಿಯಾಗಲಿ

ಮಾನ್ಯರೆ,

ತಮ್ಮ ಮೊನಚಾದ ಮಾತುಗಳಿಗೆ ಹಾಗೂ ನಿರ್ಭೀತ ವ್ಯಕ್ತಿತ್ವಕ್ಕೆ ಹೆಸರಾದ ವಿಧಾನಪರಿಷತ್ ಸದಸ್ಯರಾದ ಅಡಗೂರು ಹೆಚ್. ವಿಶ್ವನಾಥ್ ಅವರು ತಮ್ಮ ಕ್ಷೇತ್ರದ (ಹುಣಸೂರು) ಜನರ ಕುಂದುಕೊರತೆಗಳನ್ನು ಆಲಿಸಿ, ಸಮಸ್ಯೆಗಳನ್ನು ಬಗೆಹರಿಸುವ ದೃಷ್ಟಿಯಿಂದ ಪ್ರತಿ ಸೋಮವಾರ 'ಜನತಾ ದರ್ಶನ' ಕಾರ್ಯಕ್ರಮ ಹಮ್ಮಿಕೊಂಡಿರುವುದು ಸ್ವಾಗತಾರ್ಹ. ತಮ್ಮ ಸಾರ್ವಜನಿಕ ಜೀವನದಲ್ಲಿ ಸಾಕಷ್ಟು ಏಳು ಬೀಳುಗಳನ್ನು ಕಂಡಿರುವ ವಿಶ್ವನಾಥ್ ಜನರಿಂದ ನೇರವಾಗಿ ಆಯ್ಕೆ ಹೊಂದಿಲ್ಲವಾದರೂ, ರಾಜ್ಯ ವಿಧಾನ ಮಂಡಲದ ಹಿರಿಯರ ಮನೆ ಎಂದು ಕರೆಯಲ್ಪಡುವ "ವಿಧಾನ ಪರಿಷತ್ತಿನ" ನಾಮಕರಣ ಸದಸ್ಯರು. ಲೋಕಸಭೆ, ವಿಧಾನಸಭೆ ಸದಸ್ಯರಾಗಿಯೂ ಅವರು ಕೆಲಸ ಮಾಡಿದ್ದು, ರಾಜ್ಯ ಸಚಿವರಾಗಿಯೂ ಕರ್ತವ್ಯ ನಿರ್ವಹಿಸಿರುವ ಅವರಿಗೆ ಸಾರ್ವಜನಿಕ ಜೀವನದಲ್ಲಿ 4 ದಶಕಗಳಿಗಿಂತಲೂ ಅಧಿಕ ಅನುಭವವಿದೆ. 'ಮತ ಸಂತೆ' ಸೇರಿದಂತೆ ಕೆಲವು ಪುಸ್ತಕಗಳನ್ನು ಬರೆದಿರುವ ವಿಶ್ವನಾಥ್ ಯಾವುದೇ ಸಂದರ್ಭದಲ್ಲೂ ತಮ್ಮ ಸ್ವಂತಿಕೆಯನ್ನು ಮೆರೆಯುತ್ತಿರುವ ವಿಶಿಷ್ಟ ರಾಜಕಾರಣಿ. ಎಸ್.ಎಂ.ಕೃಷ್ಣರ ಸಚಿವ ಸಂಪುಟದಲ್ಲಿ ಶಿಕ್ಷಣ ಸಚಿವರಾಗಿ ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅಷ್ಟೇ ಅಲ್ಲದೇ, ವಿಧಾನ ಪರಿಷತ್ ಸದಸ್ಯರು "ಜನತಾ ದರ್ಶನ" ನಡೆಸಬಾರದೆಂಬ ಯಾವ ಕಾನೂನು ಇಲ್ಲ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಯಾವುದೇ ಜನತಾ ಪ್ರತಿನಿಧಿ "ಜನತಾ ದರ್ಶನ" ನಡೆಸಬಹುದು. ವಿಶ್ವನಾಥ್ ಅವರು ಹಮ್ಮಿಕೊಂಡಿರುವ "ಜನತಾ ದರ್ಶನ" ಯಶಸ್ವಿಯಾಗಲಿ ಹಾಗೂ ಅವರು ಸಾಧ್ಯವಾದಷ್ಟು ಜನರ ಸಮಸ್ಯೆಗಳನ್ನು ಕ್ಷಿಪ್ರವಾಗಿ ಬಗೆಹರಿಸಲು ಪ್ರಯತ್ನಿಸಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ವಿದ್ಯಾರ್ಥಿಗಳಿಗೆ ಮಾನಸಿಕ ಧೈರ್ಯ ತುಂಬಿ

ಮಾನ್ಯರೆ,

ಪರೀಕ್ಷಾ ಸಮಯ ಹತ್ತಿರವಾಗುತ್ತಿದೆ. ಇದರ ನಡುವೆ ಕೊರೊನಾ ಸೋಂಕಿನ ಗೊಂದಲವು ಕಾಣಿಸಿಕೊಂಡಿದೆ. ಮಕ್ಕಳು ಅನೇಕ ಊಹಾಪೋಹಗಳಿಂದ ವಿಚಲಿತವಾಗುತ್ತಿದ್ದಾರೆ. ಪತ್ರಿಕೆ ಹಾಗೂ ದೂರದರ್ಶನದಲ್ಲಿನ ಏರು ಧ್ವನಿಯಲ್ಲಿ ಕೊರೊನಾ ಸುದ್ದಿಗಳು ಎಲ್ಲರನ್ನೂ ಸಂಕಷ್ಟಕ್ಕೆ ಸಿಲುಕಿಸಿದೆ. ಮಕ್ಕಳ ಮನಸ್ಸು ಮೊದಲೇ ಮೃದುವಾಗಿರುತ್ತದೆ. ಪರೀಕ್ಷಾ ಭಯದ ಜೊತೆ ಕಾಯಿಲೆಯ ಭಯ ಆವರಿಸಿತ್ತಿದೆ. ಸುಳ್ಳು ವದಂತಿಗಳಿಗೆ ಯಾರು ಕಿವಿ ಕೊಡಬೇಡಿ. ಪ್ರತಿ ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಮಾನಸಿಕ ತಜ್ಞರ ನೆರವು ಬೇಕಾಗಿದೆ. ಧೈರ್ಯ ತುಂಬುವ ಕೆಲಸ ಹಾಗೂ ಕೊರೊನಾ ನಿಯಮಗಳನ್ನು ತಿಳಿಸಬೇಕಾಗಿದೆ. ಇದರಿಂದ ಮಕ್ಕಳು ಧೈರ್ಯವಾಗಿ ಪರೀಕ್ಷೆಯನ್ನು ಎದುರಿಸಬಹುದು ಹಾಗೂ ಮನಸ್ಸಿನ ಗೊಂದಲ ದೂರಾಗುತ್ತದೆ.

–ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ರಸ್ತೆ ಡಾಂಬರೀಕರಣ ಮಾಡಿ, ಅಪಘಾತ ತಪ್ಪಿಸಿ



ಮಾನ್ಯರೆ,

ಮೈಸೂರಿನ ಕೆ.ಜಿ.ಕೊಪ್ಪಲು ಗ್ರಾಮದ ಚಂದ್ರಮೌಳೇಶ್ವರ ದೇವಸ್ಥಾನದ ಪಕ್ಕದ ರಸ್ತೆಗೆ ಹಲವಾರು ತಿಂಗಳುಗಳ ಹಿಂದೆ ಡಾಂಬರ್ ಹಾಕಲಾಗಿದೆ. ಹೀಗೆ, ಡಾಂಬರ್ ಹಾಕುವಾಗ ಅರ್ಧ ಭಾಗಕ್ಕೆ ಮಾತ್ರ ಹಾಕಲಾಗಿದ್ದು, ಇನ್ನರ್ಧ ರಸ್ತೆಯನ್ನು ಹಾಗೇ ಬಿಟ್ಟಿದ್ದಾರೆ. ಇದರಿಂದ ಈ ಮಾರ್ಗವಾಗಿ ಓಡಾಡುವ ವಾಹನ ಸವಾರರಿಗೆ ಬಹಳ ಕಿರಿಕಿರಿಯಾಗುವುದರ ಜೊತೆಗೆ, ವಾಹನ ಸವಾರರು ಆಯತಪ್ಪಿ ಬಿದ್ದು ಸಣ್ಣಪುಟ್ಟ ಅಪಘಾತಗಳು ಸಂಭವಿಸಿವೆ. ಆದ್ದರಿಂದ, ಸಂಬಂಧಪಟ್ಟವರು ಇನ್ನಾದರು ಎಚ್ಚೆತ್ತು ಉಳಿದ ಭಾಗಕ್ಕೂ ಡಾಂಬರೀಕರಣ ಮಾಡಿದರೆ ಆಗಬಹುದಾದ ಅನಾಹುತಗಳನ್ನು ತಪ್ಪಿಸಬಹುದಾಗಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಮಾಧ್ಯಮಗಳು ತಪ್ಪು ಸುದ್ದಿ ಬಿತ್ತರಿಸದಿರಲಿ

ಮಾನ್ಯರೆ,

ಸುದ್ದಿ–ಮಾಧ್ಯಮಗಳಲ್ಲಿ ಮತ್ತು ದೃಶ್ಯ–ಮಾಧ್ಯಮಗಳಲ್ಲಿ ಬರುವ ಸುದ್ದಿ ಸಮಾಚಾರಗಳನ್ನು ಬಹುಪಾಲು ಜನರು ನಿಜವೆಂದೇ ನಂಬುತ್ತಾರೆ. ಆದರೆ ದೃಶ್ಯ ಮಾಧ್ಯಮಗಳು ಕೆಲವು ಸಲ ಅತುರಕ್ಕೆ ಬಿದ್ದವರಂತೆ, ವದಂತಿಗಳನ್ನೇ ನಿಜವೆಂದೇ ಪ್ರಸಾರ ಮಾಡಿ ಇದು ನಮ್ಮಲ್ಲೇ ಮೊದಲು ಎಂದು ಹೇಳಿಕೊಳ್ಳುವುದುಂಟು.

ಇದಕ್ಕೊಂದು ಉದಾಹರಣೆ ಎಂದರೆ, ಅಯೋಧ್ಯೆಯ ಶ್ರೀರಾಮ ಮಂದಿರದ ಗರ್ಭಗುಡಿಯಲ್ಲಿ ಪ್ರಾಣ ಪ್ರತಿಷ್ಠಾಪನೆ ಮಾಡುವ ಶ್ರೀರಾಮ ವಿಗ್ರಹವು ಮೈಸೂರಿನ ಶಿಲ್ಪಿ ಯೋಗಿರಾಜ್ ಕೆತ್ತನೆ ಮಾಡಿರುವ ವಿಗ್ರಹವೇ ಅಂತಿಮವಾಗಿದೆ ಎಂದು ಪ್ರಸಾರ ಮಾಡಿದವು. ಆದರೆ ಮಾರನೆ ದಿನ ಅಯೋಧ್ಯೆಯ ಶ್ರೀ ರಾಮ ಮಂದಿರ ತೀರ್ಥಕ್ಷೇತ್ರ ಟ್ರಸ್ಟ್‌ನವರು ಮೂರ್ತಿ ಆಯ್ಕೆ ಇನ್ನೂ ಅಂತಿಮವಾಗಿಲ್ಲ ಎಂದು ಹೇಳಿಕೆ ನೀಡಿದರು.

ನಮ್ಮ ದೃಶ್ಯ–ಮಾಧ್ಯಮಗಳಿಗೆ ಯಾಕಿಷ್ಟು ಧಾವಂತ ತಿಳಿಯದು. ಹಿಂದೊಮ್ಮೆ ಖಾಸಗಿ ಟಿವಿ ಚಾನೆಲ್ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರು ನಿಧನರಾದರೆಂದು ಮೂರು ದಿನಗಳ ಮೊದಲೇ ಪ್ರಸಾರ ಮಾಡಿತ್ತು. ಮತ್ತೊಂದು ಟಿವಿ ಚಾನಲ್‌ನವರು ಭಾರತದ ಉಪರಾಷ್ಟ್ರಪತಿಯಾಗಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಆಯ್ಕೆಯಾಗಿದ್ದಾರೆ ಎಂದು ಹೇಳಿತ್ತು. (ಆಗ ಜಗದೀಶ್ ಶೆಟ್ಟರ್ ಬಿಜೆಪಿಯಲ್ಲಿದ್ದರು). ನಂತರ ಕೊನೆ ಗಳಿಗೆಯಲ್ಲಿ ಬದಲಾವಣೆಯಾಗಿದೆ ಎಂದು ಸಮಜಾಯಿಷಿ ನೀಡಿತು. ದಯಮಾಡಿ ಸುದ್ದಿ ಮಾಧ್ಯಮಗಳು ನಿಖರವಾದ ಸುದ್ದಿಗಳನ್ನು ಪ್ರಕಟಿಸಿ, ಜನರ ವಿಶ್ವಾಸಗಳಿಸಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಮೊದಲು ಕನ್ನಡವನ್ನು ಮಾತನಾಡಲು ಕಲಿಸಿ

ಕಳೆದ ವಾರ ಬೆಂಗಳೂರಿನಲ್ಲಿ ಕನ್ನಡಪರ ಸಂಘಟನೆಗಳು ವ್ಯಾಪಾರ–ವಾಣಿಜ್ಯ ಮಳಿಗೆಗಳ ಮುಂದೆ ಹಾಕಲಾಗಿದ್ದಂತಹ ಕನ್ನಡೇತರ ನಾಮಫಲಕಗಳನ್ನು ಧ್ವಂಸಗೊಳಿಸಿದವು.

ಕಡ್ಡಾಯವಾಗಿ ನಾಮಫಲಕಗಳು ಶೇ.60 ಪ್ರತಿಶತ ಕನ್ನಡದಲ್ಲಿರಬೇಕು ಎಂಬ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದೇಶವನ್ನು ಈ ಕೂಡಲೇ ಅನುಷ್ಠಾನಕ್ಕೆ ತರಬೇಕು ಎಂಬ ಬೇಡಿಕೆಯನ್ನು ಪ್ರತಿಭಟನಾಕಾರರು ಮುಂದಿಟ್ಟಿದ್ದರು.

ಈ ಹೊಸ ನಿಯಮ ಪಾಲನೆಗೆ ಫೆ.28, 2024 ರವರೆಗೆ ಗಡುವು ನೀಡಲಾಗಿದೆ. ಹೌದಾ; ಹಾಗಿದ್ದರೆ, ಅಂಗಡಿ ಮುಂಗಟ್ಟುಗಳನ್ನು ಧ್ವಂಸ ಮಾಡಿದ ಕನ್ನಡ ಪರ ಹೋರಾಟಗಾರರು ಫೆ.28ರವರೆಗೆ ಕಾಯಲಿಲ್ಲವೇಕೆ?

ಅಂಗಡಿಗಳನ್ನು ಧ್ವಂಸ ಮಾಡಿ, ಅವುಗಳ ಮಾಲೀಕರನ್ನು ಬೆದರಿಸಿ ಕನ್ನಡ ಭಾಷೆಯನ್ನು ಉಳಿಸಲು ಸಾಧ್ಯವಿಲ್ಲ. ಕನ್ನಡಿಗರಾದ ನಾವು ಕನ್ನಡದಲ್ಲಿ ಮಾತನಾಡುವುದರಿಂದ ಮಾತ್ರ ಕನ್ನಡವನ್ನು ಉಳಿಸಿ–ಬೆಳೆಸಲು ಸಾಧ್ಯ.

ನಿಜ ಹೇಳಬೇಕೆಂದರೆ, ನಾಮಫಲಕಗಳಲ್ಲಿ ಖಂಡಿತವಾಗಿಯೂ ಕನ್ನಡ ಇರಲೇಬೇಕು. ಹಾಗಾದರೆ ಆಡು ಭಾಷೆ ಕನ್ನಡದ ಕತೆಯೇನು?

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸರಿಯಾಗಿಯೇ ಹೇಳಿದ್ದರು; "ರಾಜ್ಯದಲ್ಲಿ ವಾಸಿಸುವ ಪ್ರತಿಯೊಬ್ಬರು ಕನ್ನಡದಲ್ಲಿ ಮಾತನಾಡಬೇಕು, ನಾವೆಲ್ಲರೂ ಕನ್ನಡಿಗರು".

ಇಲ್ಲಿ ಒಂದು ಪ್ರಶ್ನೆ; ಕನ್ನಡಿಗ ಯಾರು?

ಕನ್ನಡಿಗರಿಗೆ ಅನುಕೂಲಕಾರಿಯಾಗುವಂತಹ ಶಿಫಾರಸುಗಳನ್ನು ಮಾಡಲು 1983ರಲ್ಲಿ ರಚಿಸಲಾದ **ಸರೋಜಿನಿ ಮಹಿಷಿ** ಸಮಿತಿಯ ಪ್ರಕಾರ ರಾಜ್ಯದಲ್ಲಿ 15 ವರ್ಷಗಳಿಗೂ ಅಧಿಕ ಕಾಲದಿಂದ ವಾಸಿಸುವವರು ಹಾಗೂ ಕನ್ನಡ ಭಾಷೆಯನ್ನು 'ತಕ್ಕಮಟ್ಟಿಗೆ' ಮಾತನಾಡುವ, ಓದುವ ಹಾಗೂ ಬರೆಯುವವರು ಕನ್ನಡಿಗರು.

ಸತ್ಯವೇನೆಂದರೆ, ಹೆಚ್ಚಿನ ಕನ್ನಡಿಗರು ಓದು– ಬರೆಯುವುದಕ್ಕಿಂತ ಚೆನ್ನಾಗಿ ಮಾತನಾಡಬಲ್ಲೆವು. ಇದನ್ನು ಸರಳವಾಗಿ ವ್ಯಾಖ್ಯಾನಿಸುವುದಾದರೆ ನಾವು ಚೆನ್ನಾಗಿ ಕನ್ನಡ ಮಾತನಾಡಬಲ್ಲವರಾದರೆ ಮತ್ತು ಇಲ್ಲಿ ಸುದೀರ್ಘ ಕಾಲದಿಂದ ವಾಸವಾಗಿದ್ದರೆ ಖಂಡಿತ ನಾವು ಕನ್ನಡಿಗರು.

ಹೀಗೆ ಹೇಳಿದ ಮೇಲೆ ಆಡು ಭಾಷೆ ಕನ್ನಡವನ್ನು ಉಳಿಸಿ–ಬೆಳೆಸುವ ತುರ್ತು ಅಗತ್ಯವಿದೆ. ಏಕೆಂದರೆ, ಅದು ಆಹಾರ, ಉಪಭಾಷೆ, ಸಂಸ್ಕೃತಿ ಮತ್ತು ಸಂಪ್ರದಾಯ ಯಾವುದೇ ವಿಷಯವನ್ನು ತೆಗೆದುಕೊಂಡರೂ ಕರ್ನಾಟಕ ಈಗಾಗಲೇ ಭಾರತ ದೇಶದಲ್ಲೇ ಅತ್ಯಂತ ವೈವಿಧ್ಯಮಯ ರಾಜ್ಯಗಳಲ್ಲಿ ಒಂದಾಗಿದೆ. ಈ ವೈವಿಧ್ಯಮಯ ಜನ ಸಮೂಹಗಳನ್ನು ಒಟ್ಟಿಗೆ ಬೆಸೆದಿರುವುದು ಯಾವುದೆಂದರೆ ಅದು **'ಆಡು ಭಾಷೆ ಕನ್ನಡ'**.

ಮಂಗಳೂರಿನ ಬಂಟ್ ಸಮುದಾಯದವರು 'ತುಳು' ಉಪ ಭಾಷೆಯನ್ನು ಬಳಸುತ್ತಾರೆ. ಆದರೆ ಅವರು ಕನ್ನಡವನ್ನು ಕೂಡ ಮಾತನಾಡುತ್ತಾರೆ. ಹಾಗೆಯೇ ಕೊಡವರು 'ಕೊಡವ ತಕ್' ಮಾತನಾಡಿದರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ಮುಸಲ್ಮಾನರು 'ಧಖನಿ' ಭಾಷೆಯನ್ನು ಮಾತನಾಡುವರು. ಅವರು ಕೂಡ ಕನ್ನಡದಲ್ಲಿ ಮಾತನಾಡಬಲ್ಲರು.

ಹಲವು ದಶಕಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರುವ ಹಲವಾರು ದಕ್ಷಿಣ ಭಾರತೀಯರು ಕೂಡ ಕನ್ನಡ ಮಾತನಾಡಬಲ್ಲರು. ಅವರಲ್ಲಿ ಹೆಚ್ಚಿನವರಿಗೆ ಕನ್ನಡ ಬರೆಯಲು ಇಲ್ಲವೆ ಸರಾಗವಾಗಿ ಓದಲು ಸಾಧ್ಯವಾಗದಿರಬಹುದು. ಆದರೆ ಅವರು ಲೀಲಾಜಾಲವಾಗಿ ಕನ್ನಡ ಮಾತನಾಡುವವರು. ಹೀಗಾಗಿ ಆಡು ಭಾಷೆ ಕನ್ನಡವೇ ನಮ್ಮನ್ನೆಲ್ಲಾ ಬೆಸೆದಿಟ್ಟಿರುವ ಬಲವಾದ ಅಂಟು ಎಂದು ಹೇಳಬಹುದು.

ಈಗ ಉತ್ತರ ಭಾರತದಿಂದ ಹಿಂಡು ಹಿಂಡಾಗಿ ಹರಿದು ಬರುತ್ತಿರುವ ವಲಸಿಗರು ಹಿಂದಿ ಭಾಷೆಯನ್ನು ತಮ್ಮೊಂದಿಗೆ ಹೊತ್ತು ತಂದಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಂತಹ ಮಹಾನಗರಗಳಲ್ಲಿ ಆಡು ಭಾಷೆ ಕನ್ನಡ ಅದನ್ನು ದಿಟ್ಟವಾಗಿ ಹಿಮ್ಮೆಟ್ಟಿಸಿ, ಎಷ್ಟು ಕಾಲ ನಿಲ್ಲಬಹುದು ಎಂಬುದೇ ದೊಡ್ಡ ಪ್ರಶ್ನೆ. ಅದರ ಅರ್ಥ ಬೆಸುಗೆ ಸಡಿಲಗೊಂಡು, ಸಾಮರಸ್ಯದ ಕೊರತೆ ನೆಲೆಗೊಳ್ಳಬಹುದು ಎಂದೆನಿಸುತ್ತಿದೆ.

ಆದ್ದರಿಂದ ಕರ್ನಾಟಕ ಸರ್ಕಾರ ತುರ್ತಾಗಿ ಆಡು ಭಾಷೆ ಕನ್ನಡವನ್ನು ಮುನ್ನಲೆಗೆ ತರಬೇಕಿದೆ. ಸರ್ಕಾರವು ನಿರ್ಮಾಣ ಸಂಸ್ಥೆಗಳು, ಐಟಿ ಕಂಪನಿಗಳು ಮತ್ತು ಸೇವಾ ಉದ್ಯಮಗಳ ಜೊತೆ ಕೈಜೋಡಿಸಿ ಕನ್ನಡ ಸರಳ ಆಡು ಭಾಷೆಯ ತರಗತಿಗಳನ್ನು ಏರ್ಪಡಿಸಬೇಕು. ಇಂತಹ ಕಂಪನಿಗಳಿಗೆ ಪ್ರೋತ್ಸಾಹಕಗಳನ್ನು ನೀಡಬೇಕಿದೆ. ನಮ್ಮ ರಾಜ್ಯದಲ್ಲಿ ಶಾಂತಿ, ಸೌಹಾರ್ದತೆ ನೆಲೆಸಬೇಕೆಂದಿದ್ದರೆ ಸರ್ಕಾರ ಮುಖ್ಯವಾಗಿ ಬೆಂಗಳೂರು ಹಾಗೂ ಇನ್ನಿತರ ನಗರ ಪ್ರದೇಶಗಳಲ್ಲಿ ಈ ಕ್ರಮವನ್ನು ಕೈಗೊಳ್ಳಲೇ ಬೇಕಿದೆ. ಇಲ್ಲದಿದ್ದರೆ ದೀರ್ಘಾವಧಿಯಲ್ಲಿ ನಾವು **'ಭಾಷಾ ಹಿಂಸಾಚಾರಗಳನ್ನು'** ಎದುರಿಸಬೇಕಾಗುತ್ತದೆ.

1966ರಲ್ಲಿ ಮಹಾರಾಷ್ಟ್ರದಲ್ಲಿ ಏನು ನಡೆಯಿತು ಎಂದು ನಮಗೆಲ್ಲರಿಗೂ ಗೊತ್ತಿದೆ. ಅಲ್ಲಿ ವಲಸಿಗರ ವಿರೋಧಿ ಭಾವನೆಗಳನ್ನು ಶಿವಸೇನೆ ಹುಟ್ಟು ಹಾಕಿತು. ಇತ್ತ, 1965ರಲ್ಲಿ ತಮಿಳುನಾಡಿನಲ್ಲಿ ಹಿಂದಿ ವಿರೋಧಿ ಹೋರಾಟಗಳು ಡಿಎಂಕೆ ಪಕ್ಷಕ್ಕೆ ಜನ್ಮ ಕೊಟ್ಟವು. ಯಾರಿಗೆ ಗೊತ್ತು, ಕರ್ನಾಟಕದಲ್ಲಿ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಕನ್ನಡಕ್ಕೆ ಉತ್ತೇಜನ ಕೊಡದೇ ಹೋದರೆ ಒಂದು ದಿನ **ಕರ್ನಾಟಕ ರಕ್ಷಣಾ ವೇದಿಕೆ** ಕೂಡ ರಾಜಕೀಯ ಶಕ್ತಿಯಾಗಿ ಹೊರ ಹೊಮ್ಮಬಹುದು!

ಪ್ರತಿ ವರ್ಷ ರಾಜ್ಯೋತ್ಸವದಂದು, ನಮ್ಮ ನಾಯಕರು ಹಳದಿ–ಕೆಂಪು ಕರ್ನಾಟಕ ಬಾವುಟವನ್ನು ಹಾರಿಸಿ, ಕನ್ನಡವನ್ನು ಉಳಿಸಿ, ಬೆಳೆಸುವುದಾಗಿ ಘೋಷಣೆ ಹೊರಡಿಸುತ್ತಾರೆ. ಆದರೆ ಅದೇ ನಾಯಕರು ರಾಷ್ಟ್ರೀಯ ಟಿವಿ ಚಾನಲ್‌ಗಳು ಅವರ ಮುಂದೆ ಮೈಕ್ ಹಿಡಿದ ತಕ್ಷಣ ಹರಕು–ಮುರುಕು 'ಬಟ್ಲರ್ ಇಂಗ್ಲಿಷ್' ಭಾಷೆಯಲ್ಲಿ ಮಾತನಾಡಲು ಶುರು ಮಾಡುತ್ತಾರೆ. ಇತರ ರಾಜ್ಯಗಳ ರಾಜಕಾರಣಿಗಳು ಮಾಡುವಂತೆ ಇವರು ಏಕೆ ತಮ್ಮ ಭಾಷೆ ಕನ್ನಡದಲ್ಲೇ ಉತ್ತರಿಸುವುದಿಲ್ಲ?

ಪ್ರಾಯಶಃ ಕನ್ನಡ ಪರ ಸಂಘಟನೆಗಳು ಹೊರಗಿನಿಂದ ಬಂದವರು ಕನ್ನಡ ಕಲಿಯಬೇಕು ಎಂದು ತಾಕೀತು ಮಾಡುವ ಬದಲು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಕಡಿಮೆ ಖರ್ಚಿನಲ್ಲಿ ಆಡು ಭಾಷೆಯಲ್ಲಿ ಕನ್ನಡ ಮಾತನಾಡಬಹುದಾದಂತಹ ತರಗತಿಗಳನ್ನು ಸ್ಥಾಪಿಸುವಂತೆ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಬೇಕು. ಅಷ್ಟಕ್ಕೂ ಬರವಣಿಗೆಗಿಂತ ಆಡು ಭಾಷೆ ಕನ್ನಡ ಹೆಚ್ಚು ಉಪಯೋಗಕಾರಿ ಹಾಗೂ ಪರಿಣಾಮಕಾರಿ.

ನಿಮಗೆ ತಿಳಿದಿರಲಿ, ಯುವ ಐಟಿ ಉದ್ಯಮಿಗಳು, ವಿವಿಧ ಕನ್ನಡ ಪರ ಸಂಘಟನೆಗಳು ಹಾಗೂ ಸರ್ಕಾರಕ್ಕಿಂತಲೂ ಕನ್ನಡಕ್ಕಾಗಿ ಹೆಚ್ಚು ಕೆಲಸ ಮಾಡಿದ್ದಾರೆ. ಈ ಉದ್ಯಮಿಗಳು ಸಾಕಷ್ಟು ಕನ್ನಡ ಕಲಿಕಾ ಆಪ್‌ಗಳನ್ನು – **'ಕನ್ನಡ ಬರುತ್ತೆ'**, **'ಲರ್ನ್ ಕನ್ನಡ ಕ್ವಿಕ್‌ಲಿ'**, **'ಡೇ ಟುಡೇ ಕನ್ನಡ'** ಮತ್ತು **'ಕನ್ನಡ ಗೊತ್ತಿಲ್ಲ.ಕಾಂ'**ನಂತಹ ಜಾಲತಾಣಗಳನ್ನು ಅಭಿವೃದ್ಧಿ ಪಡಿಸಿದ್ದೇ ಅವರಲ್ಲವೆ?

ಮೈಸೂರಿನಲ್ಲಿರುವ ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ (ಸಿಐಐಎಲ್) ಕೂಡ 500 ರೂ.ಗೆ ಆನ್‌ಲೈನ್ ಕನ್ನಡ ಕೋರ್ಸ್‌ವೊಂದನ್ನು ಕಲ್ಪಿಸುತ್ತಿದೆ. ದುರಾದೃಷ್ಟವಶಾತ್, ಇಲ್ಲಿ ಆಡು ಭಾಷೆ ಕನ್ನಡ ಕಲಿಯುವ ಮೊದಲು ಲಿಖಿತ ಪಾಠಗಳನ್ನು ಕಲಿಯಲೇಬೇಕಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಅಲ್ಪಕಾಲಿಕ ಕನ್ನಡ ಕೋರ್ಸುಗಳಿದ್ದು, ಆದರೆ, ಅವು ಕನ್ನಡ ಮಾತನಾಡುವುದಕ್ಕೆ ಬದಲು ಹೆಚ್ಚಾಗಿ ಬರವಣಿಗೆಗೆ ಒತ್ತು ಕೊಡುವುದರಿಂದ ಅಷ್ಟೇನು ಅನುಕೂಲಕರವಾಗಿಲ್ಲ. ವಿಶ್ವವಿದ್ಯಾನಿಲಯವು ಶೀಘ್ರ, ಸರಳವಾಗಿ ಮಾತನಾಡುವ ಕೋರ್ಸುಗಳನ್ನು ಆರಂಭಿಸಿದರೆ ಹೆಚ್ಚು ಉಪಯೋಗಕಾರಿಯಾಗುತ್ತಿತ್ತು.

ಕರ್ನಾಟಕದಲ್ಲಿ ನೆಲೆಸಲು ಇಚ್ಛಿಸುವ ಕನ್ನಡೇತರರು ಕನ್ನಡ ಕಲಿತರೆ ಪೊಲೀಸರು, ಸ್ಥಳೀಯ ಸರ್ಕಾರ, ಅಂಗಡಿ–ಮುಂಗಟ್ಟುಗಳು ಮತ್ತು ದೈನಂದಿನ ಜೀವನದಲ್ಲಿ ಸಂವಹನೆಗೆ ಅನುಕೂಲಕಾರಿಯಾಗುತ್ತದೆ ಎಂಬುದನ್ನು ನಾವು ಕನ್ನಡಿಗರು ಅವರಿಗೆ ಸೌಜನ್ಯದಿಂದಲೇ ಮನವರಿಕೆ ಮಾಡಿಕೊಡಬೇಕು.

ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳನ್ನು ತಿಳಿದಿರುವುದು ಉತ್ತಮವಾದರೂ ನೀವು ಪ್ರಾಂತೀಯ ಭಾಷೆಯನ್ನೂ ಕಲಿಯುವುದು ಸಾಮಾಜಿಕ ದೃಷ್ಟಿಕೋನದಿಂದ ಬಹಳ ಒಳ್ಳೆಯದು ಎಂದು ಅವರಿಗೆ ತಿಳಿಸಿಕೊಡಬೇಕು.

ಅದು ಹೊಸ ಅನುಬಂಧಗಳು ಹಾಗೂ ಹೊಂದಾಣಿಕೆಯ ಭಾವವನ್ನು ಬೆಸೆಯಲು ಸಹಾಯ ಮಾಡುತ್ತದೆ. ಇಲ್ಲದಿದ್ದರೆ ನೀವು ಸದಾ ಹೊರಗಿನವರಾಗಿಯೇ ಉಳಿದುಕೊಳ್ಳುತ್ತೀರಾ. ಅಲ್ಲದೇ ದಶಕಗಳ ಕಾಲ ಇಲ್ಲಿ ವಾಸ ಮಾಡಿಯೂ ಸ್ಥಳೀಯ ಭಾಷೆಯನ್ನು ಮಾತನಾಡುವುದನ್ನು ಕಲಿಯದೇ ಇದ್ದರೆ ಅದು ಒಂದು ರೀತಿ ಅವಮಾನ ಇಲ್ಲವೇ ಕೃತಘ್ನತೆಯ ಸಂಕೇತವೆಂದು ಅವರಿಗೆ ನಾವು ಮನವರಿಕೆ ಮಾಡಿಕೊಡಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಸ್ಥಳೀಯ ಭಾಷೆಗೆ ಸಾಟಿ ಇಲ್ಲದ ಭಾವನಾತ್ಮಕ ಮತ್ತು ಸಂವಹನ ಮೌಲ್ಯವಿದೆ. ಆದ್ದರಿಂದಲೇ ನೆಲ್ಸನ್ ಮಂಡೇಲಾ ಈ ರೀತಿ ಹೇಳಿದ್ದು; "ನೀವು ಒಬ್ಬ ವ್ಯಕ್ತಿಗೆ ಅವನಿಗೆ ಅರ್ಥವಾಗುವ ಭಾಷೆಯಲ್ಲಿ ಮಾತನಾಡಿದರೆ ಅರ್ಥ ಮಾಡಿಕೊಳ್ಳುತ್ತಾನೆ, ಅದು ಅವನ ತಲೆಗೂ ಹೋಗುತ್ತದೆ. ಆದರೆ ಅವನೊಡನೆ ಅವನದೇ ಭಾಷೆಯಲ್ಲಿ ಮಾತನಾಡಿದರೆ ಅದು ಅವನ ಹೃದಯವನ್ನು ತಟ್ಟುತ್ತದೆ." ಇದನ್ನು ಇತರರಿಗೆ ಅರ್ಥ ಮಾಡಿಸುವುದು ನಮ್ಮ ಕನ್ನಡಿಗರ ಕರ್ತವ್ಯ.

email: vikram@starofmysore.com



ಇತ್ತೀಚೆಗೆ ಬೆಂಗಳೂರಿನಲ್ಲಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ನಾಮಫಲಕಗಳಲ್ಲಿ ಕನ್ನಡ ಬಳಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.



ಕನ್ನಡ ಪರ ಹೋರಾಟಗಾರರು ಇಂಗ್ಲಿಷ್ ನಾಮಫಲಕಗಳನ್ನು ಧ್ವಂಸಗೊಳಿಸುತ್ತಿರುವುದು.

ಎಲ್‌ಪಿಜಿ ಗ್ರಾಹಕರಿಗೆ 50 ಲಕ್ಷ ವಿಮೆ

ನವದೆಹಲಿ: ಎಲ್‌ಪಿಜಿ ಸಿಲಂಡರ್ ಸ್ಫೋಟಗೊಂಡ ಹಲವು ಪ್ರಕರಣಗಳು ದೇಶಾದ್ಯಂತ ಸಂಭವಿಸುತ್ತಲೇ ಇರುತ್ತವೆ. ಸಾಕಷ್ಟು ಆಸ್ತಿಪಾಸ್ತಿ ನಷ್ಟ, ಜೀವಹಾನಿ ಆಗುವುದುಂಟು. ಹೀಗಾಗಿ, ಇಂಥದ್ದಕ್ಕೆ ಇನ್ಶೂರೆನ್ಸ್ ಕವರೇಜ್ ಇರುವುದು ಬಹಳ ಮುಖ್ಯ. ಪೆಟ್ರೋಲಿಯಂ ಕಂಪನಿಗಳೇ ತಮ್ಮ ಎಲ್ಲಾ ಎಲ್‌ಪಿಜಿ ಗ್ರಾಹಕರಿಗೂ ಉಚಿತವಾಗಿ ಅಪಘಾತ ವಿಮಾ ಕವರೇಜ್ ಸೌಲಭ್ಯ ಒದಗಿಸುತ್ತದೆ. ಅದೂ 50 ಲಕ್ಷ ರೂ. ಮೊತ್ತದ ಆಕ್ಸಿಡೆಂಟ್ ಇನ್ಶೂರೆನ್ಸ್ ಕವರೇಜ್ ಇರುತ್ತದೆ. ಇದಕ್ಕೆ ಎಲ್‌ಪಿಜಿ ಗ್ರಾಹಕರು ಪ್ರತ್ಯೇಕ ಪ್ರೀಮಿಯಮ್ ಕಟ್ಟಬೇಕಿಲ್ಲ. ಪೆಟ್ರೋಲಿಯಂ ಕಂಪನಿಯೇ ಉಚಿತವಾಗಿ ಈ ಕವರೇಜ್ ನೀಡುತ್ತದೆ.

ಎಲ್‌ಪಿಜಿ ಸಿಲಿಂಡರ್ ಸ್ಫೋಟ ಘಟನೆಯಿಂದ ಆಗುವ ಹಾನಿಗೆ ಎಲ್‌ಪಿಜಿ ಗ್ರಾಹಕರು ಸಂಬಂಧಿತ ಪೆಟ್ರೋಲಿಯಂ ಕಂಪನಿಯಿಂದ ಪರಿಹಾರ ಪಡೆಯಲು ಅವಕಾಶ ಇದೆ. ಎಲ್‌ಪಿಜಿ ಗ್ರಾಹಕ ಹಾಗೂ ಅವರ ಕುಟುಂಬ ಸದಸ್ಯರಿಗೆ ಒಟ್ಟಾರೆ ವರ್ಷಕ್ಕೆ 50 ಲಕ್ಷ ರೂವರೆಗೂ ಕಾಂಪೆನ್ಸೇಶನ್ ಅವಕಾಶ ಇರುತ್ತದೆ. ಒಂದು ಕುಟುಂಬದಲ್ಲಿ ಒಬ್ಬ ಸದಸ್ಯರಿಗೆ 10 ಲಕ್ಷ ರೂ. ವರೆಗೂ ಪರಿಹಾರ ಪಡೆಯಬಹುದು.

ಗ್ಯಾಸ್ ಸೋರಿಕೆ, ಸ್ಫೋಟ ಇತ್ಯಾದಿ ಅಪಘಾತ ಘಟನೆಗಳಿಗೆ ಈ ವಿಮಾ ಸೌಲಭ್ಯ ಅನ್ವಯ ಆಗುತ್ತದೆ. ಅದಕ್ಕಾಗಿ ಪೆಟ್ರೋಲಿಯಂ ಕಂಪನಿಗಳು ವಿವಿಧ ವಿಮಾ ಸಂಸ್ಥೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತವೆ.

ಯಾವ್ಯಾವ ಹಾನಿಗೆ ಎಷ್ಟೆಷ್ಟು ಪರಿಹಾರ: ಎಲ್‌ಪಿಜಿ ಸಿಲಿಂಡರ್ ಅಪಘಾತ ಘಟನೆಯಲ್ಲಿ ಯಾವುದಾದರೂ ಆಸ್ತಿಗೆ ಹಾನಿಯಾದರೆ ಗರಿಷ್ಟ 2 ಲಕ್ಷ ರೂ.ವರೆಗೆ ಹಣ ಕ್ಲೈಮ್ ಮಾಡಬಹುದು. ಸಾವಾದರೆ, ಒಬ್ಬ ವ್ಯಕ್ತಿಗೆ 6 ಲಕ್ಷ ರೂ. ವಿಮಾ ಪರಿಹಾರ ಸಿಗುತ್ತದೆ. ಗಾಯವಾದರೆ ಒಬ್ಬ ವ್ಯಕ್ತಿಗೆ 2 ಲಕ್ಷ ರೂ.ವರೆಗೆ ಪರಿಹಾರ ಕೊಡಲಾಗುತ್ತದೆ.

ವಿಮೆ ಕ್ಲೈಮ್ ಮಾಡುವುದು ಹೇಗೆ: ಅಕಸ್ಮಾತ್ ಗ್ಯಾಸ್ ಸ್ಫೋಟ ದುರಂತ ಸಂಭವಿಸಿ ಅನಾಹುತವಾಗಿ ಬಿಟ್ಟರೆ ಇನ್ಶೂರೆನ್ಸ್ ಕಂಪನಿಯನ್ನು ಸಂಪರ್ಕಿಸುವ ಅಗತ್ಯ ಇರುವುದಿಲ್ಲ. ಆದರೆ, ಸಮೀಪದ ಪೊಲೀಸ್ ಸ್ಟೇಷನ್ ಮತ್ತು ಎಲ್‌ಪಿಜಿ ಡಿಸ್ಟ್ರಿಬ್ಯೂಟರ್‌ಗೆ ಮಾಹಿತಿ ನೀಡಬೇಕು. ಪೊಲೀಸ್ ಸ್ಟೇಷನ್‌ನಲ್ಲಿ ದೂರು ನೀಡಿದ ಪ್ರತಿಯನ್ನು ಜೋಪಾನವಾಗಿ ಇಟ್ಟುಕೊಳ್ಳಬೇಕು. ನೀವು ಎಲ್‌ಪಿಜಿ ಡಿಸ್ಟ್ರಿಬ್ಯೂಟರ್‌ಗೆ ಮಾಹಿತಿ ನೀಡಿದ ಬಳಿಕ ಅದು ಸಂಬಂಧಿತ ಇನ್ಶೂರೆನ್ಸ್ ಕಂಪನಿಗೆ ಮಾಹಿತಿ ತಲುಪುತ್ತದೆ. ಆ ಸಂಸ್ಥೆಯ ಪ್ರತಿನಿಧಿಗಳು ಬಂದು ತನಿಖೆ ನಡೆಸುತ್ತಾರೆ.

ಶಿಕ್ಷಕರ ನೇಮಕಕ್ಕೆ ಸುಪ್ರೀಂ ತಡೆ

ನವದೆಹಲಿ: ಕರ್ನಾಟಕದಲ್ಲಿ 13,352 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಹೈಕೋರ್ಟ್ ವಿಭಾಗೀಯ ಪೀಠ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.



ಹೈಕೋರ್ಟ್ ಆದೇಶ ಪ್ರಶ್ನಿಸಿ ಚಿಕ್ಕಬಳ್ಳಾಪುರದ ಜಿ.ವಿ.ನರೇಂದ್ರಬಾಬು ಹಾಗೂ ಇತರರು ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಅಹಸಾನುದ್ದೀನ್ ಅಮಾನುಲ್ಲಾ ಅವರ ಪೀಠವು ಈ ಆದೇಶ ನೀಡಿದೆ. ವಾದ ಆಲಿಸದೆ ಮಧ್ಯಂತರ ಆದೇಶ ಹೊರಡಿಸಬಾರದು ಎಂದು ಕರ್ನಾಟಕ ಸರ್ಕಾರ ಕೇವಿಯೆಟ್ ಸಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿರುವ ಪೀಠವು, ನಾಲ್ಕು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದೆ. ಹೈಕೋರ್ಟ್ ವಿಭಾಗೀಯ ಪೀಠ ನೀಡಿರುವ ಆದೇಶದ 45ರಿಂದ 47ರ ವರೆಗಿನ ಪ್ಯಾರಾಗಳನ್ನು ಜಾರಿಗೊಳಿಸಬಾರದು ಎಂದು ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿದೆ. 2023ರಲ್ಲಿ ಪ್ರಕಟಿಸಿರುವ ಆಯ್ಕೆಪಟ್ಟಿ ಪ್ರಕಾರ, ಅಭ್ಯರ್ಥಿಗಳಿಗೆ ಆಯ್ಕೆಪಟ್ಟಿ ವಿತರಿಸುತ್ತಿದ್ದರೆ ಅದನ್ನು ಅಮಾನತಿನಲ್ಲಿಡಬೇಕು ಎಂದೂ ಸೂಚಿಸಿದೆ. 2023ರ ಅ.13ರಂದು ಏಕಸದಸ್ಯ ಪೀಠದ ಆದೇಶವನ್ನು ರದ್ದುಪಡಿಸಿದ್ದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ದ್ವಿಸದಸ್ಯ ಪೀಠ, ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಹೊರಗಿಡಲಾಗಿರುವ ಅಭ್ಯರ್ಥಿಗಳು ತಮ್ಮ ತಕರಾರನ್ನು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಮುಂದೆ ಮಂಡಿಸಿ ಸೂಕ್ತ ನ್ಯಾಯ ಪಡೆಯಬಹುದು ಎಂದೂ ಸ್ಪಷ್ಟಪಡಿಸಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಭಾರತದ ಅತ್ಯಂತ ಹಿರಿಯ ಗಂಡು ಕರಡಿ ಬಬ್ಲೂ ಇನ್ನಿಲ್ಲ




ಭೋಪಾಲ್ (ಮಧ್ಯಪ್ರದೇಶ): ಭಾರತದಲ್ಲಿ ಸೆರೆಯಲ್ಲಿರುವ ಅತ್ಯಂತ ಹಿರಿಯ ಗಂಡು ಕರಡಿ ಎಂದು ಖ್ಯಾತಿಯಾಗಿದ್ದ 'ಬಬ್ಲೂ' ಭೋಪಾಲ್‌ನ ವನವಿಹಾರ ರಾಷ್ಟ್ರೀಯ ಉದ್ಯಾನ ಹಾಗೂ ಪ್ರಾಣಿಗಳ ಪುನರ್ವಸತಿ ಕೇಂದ್ರದಲ್ಲಿ ಶುಕ್ರವಾರ ಮೃತಪಟ್ಟಿದೆ.

ಬಬ್ಲೂ ಕರಡಿ ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿತ್ತು. ಕಳೆದ ನಾಲ್ಕೈದು ದಿನಗಳಿಂದ ಆಹಾರ ತ್ಯಜಿಸಿತ್ತು. ಅದಕ್ಕೆ 36 ವರ್ಷ ವಯಸ್ಸಾಗಿತ್ತು ಎಂದು ಪಶುಚಿಕಿತ್ಸಕ ಡಾ. ಅತುಲ್ ಗುಪ್ತಾ ತಿಳಿಸಿದ್ದಾರೆ. 19 ವರ್ಷ ವಯಸ್ಸಿದ್ದಾಗ ಬಬ್ಲೂವನ್ನು 2006ರಲ್ಲಿ ರಾಜಸ್ಥಾನದ ಗ್ರಾಮವೊಂದರಲ್ಲಿ ಕರಡಿ ಕುಣಿಸುವವರಿಂದ ರಕ್ಷಿಸಿ ವನವಿಹಾರ ಕರಡಿಧಾಮಕ್ಕೆ ಕರೆತರಲಾಗಿತ್ತು.

2022 ರಲ್ಲಿ ಇದೇ ವನವಿಹಾರದಲ್ಲಿ 40 ವರ್ಷದ ಹೆಣ್ಣು ಕರಡಿ ಗುಲಾಬೊ ಮೃತಪಟ್ಟಿತ್ತು. ಕರಡಿಗಳು ಸಾಮಾನ್ಯವಾಗಿ 25ರಿಂದ 30 ವರ್ಷ ಬದುಕುತ್ತವೆ. ಪ್ರಾಣಿ ಸಂಗ್ರಹಾಲಯದಲ್ಲಿ ಸ್ವಲ್ಪ ಹೆಚ್ಚು ಎಂದು ಅವರು ತಿಳಿಸಿದ್ದಾರೆ.

ಬಬ್ಲೂವಿನ ಮೃತದೇಹವನ್ನು ಅಧ್ಯಯನ ದೃಷ್ಟಿಯಿಂದ ಜಬಲ್ಪುರದ ವನ್ಯಜೀವಿ ವಿಧಿವಿಜ್ಞಾನ ಪ್ರಯೋಗಾಲಯ ಹಾಗೂ ಆರೋಗ್ಯ ಕೇಂದ್ರಕ್ಕೆ ಕಳುಹಿಸಿಕೊಡಲಾಗುವುದು ಎಂದು ಗುಪ್ತಾ ತಿಳಿಸಿದ್ದಾರೆ.

ಮುಕೇಶ್ ಅಂಬಾನಿ ಹಿಂದಿಕ್ಕಿದ ಗೌತಮ್ ಅದಾನಿ: ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿ!



ನವದೆಹಲಿ: ಹಿಂಡನ್ ಬರ್ಗ್ ವರದಿ ಕುರಿತಂತೆ ಕೋರ್ಟ್‌ನ ಮಹತ್ವದ ಆದೇಶ ಹೊರಬಿದ್ದ ಬೆನ್ನಲ್ಲೇ ಇದೀಗ ಮತ್ತೆ ಗೌತಮ್ ಅದಾನಿ ಭಾರತದ ಮತ್ತು ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ಅದಾನಿ ಸಮೂಹ ಸಂಸ್ಥೆಗಳ ಮುಖ್ಯಸ್ಥರಾದ ಗೌತಮ್ ಅದಾನಿ ಅವರು ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರನ್ನು ಹಿಂದಿಕ್ಕಿ ಭಾರತದ ಮತ್ತು ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಬ್ಲೂಮ್‌ಬರ್ಗ್ ಬಿಲಿಯನೇರ್ಸ್ ಇಂಡೆಕ್ಸ್‌ನಲ್ಲಿ ಹೊರಹೊಮ್ಮಿದ್ದಾರೆ.

ಜಗತ್ತಿನ ಅತ್ಯಂತ ಶ್ರೀಮಂತರ ಪಟ್ಟಿಯಲ್ಲಿ 12ನೇ ಸ್ಥಾನದಲ್ಲಿ ಅದಾನಿ ಇದ್ದು, ರಿಲಯನ್ಸ್ ಸಮೂಹದ ಮುಖ್ಯಸ್ಥ ಅಂಬಾನಿ 13ನೇ ಸ್ಥಾನದಲ್ಲಿದ್ದಾರೆ. ವರದಿಯಲ್ಲಿರುವಂತೆ ಅದಾನಿ ಒಟ್ಟು 97.6 ಬಿಲಿಯನ್ ಅಮೆರಿಕನ್ ಡಾಲರ್ ಸಂಪತ್ತಿನ ಒಡೆಯರಾಗಿದ್ದಾರೆ. ಅತ್ತ ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಏಷ್ಯಾದ 2ನೇ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದು ಅವರು ಒಟ್ಟು ಸಂಪತ್ತಿನ ಮೌಲ್ಯ 97 ಬಿಲಿಯನ್ ಅಮೆರಿಕನ್ ಡಾಲರ್ ಆಗಿದೆ ಎಂದು ಹೇಳಲಾಗಿದೆ.

ಅದಾನಿ ಸಂಸ್ಥೆಗಳು ಅವ್ಯವಹಾರ ನಡೆಸಿವೆ ಎಂಬ ಹಿಂಡೆನ್‌ಬರ್ಗ್ ವರದಿಯನ್ನಾಧರಿಸಿ ಸಂಸ್ಥೆಯ ವಿರುದ್ಧ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕೆಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದ ನಂತರ ಅದಾನಿ ಷೇರುಗಳ ಬೆಲೆ ಏರಿಕೆ ಕಂಡಿತ್ತು. ಇದಕ್ಕಿಂತ ಒಂದು ದಿನ ಹಿಂದೆ ಅದಾನಿ ಸಂಪತ್ತು ಮೌಲ್ಯ ರೂ. 8.98 ಲಕ್ಷ ಕೋಟಿ ಇದ್ದರೆ ಒಂದೇ ದಿನದಲ್ಲಿ ಅದು ರೂ. 9.37 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಡಿಕೆಶಿ ವಿರುದ್ದದ ಅಕ್ರಮ ಆಸ್ತಿ ಗಳಿಕೆ ಪ್ರಕರಣ: ಹೈಕೋರ್ಟ್ ವಿಸ್ತೃತ ಪೀಠಕ್ಕೆ ವರ್ಗಾವಣೆ



ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣದ ವಿಚಾರಣೆಯನ್ನು ಹೈಕೋರ್ಟ್ ಶುಕ್ರವಾರ ವಿಸ್ತೃತ ಪೀಠಕ್ಕೆ ವರ್ಗಾವಣೆ ಮಾಡಿದೆ. ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆದ ರಾಜ್ಯ ಸರ್ಕಾರದ ಕ್ರಮ ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರನ್ನೊಳಗೊಂಡ ಏಕ ಸದಸ್ಯ ಪೀಠ, ಪ್ರಕರಣದ ವಿಚಾರಣೆಯನ್ನು ವಿಸ್ತೃತ ಪೀಠಕ್ಕೆ ವರ್ಗಾವಣೆ ಮಾಡಿದೆ.

ಈ ಮಧ್ಯೆ ಡಿಕೆ ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ವಹಿಸುವ ರಾಜ್ಯ ಸರ್ಕಾರದ ಕ್ರಮ ಪ್ರಶ್ನಿಸಿ ಸಿಬಿಐ ಇಂದು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, ಯತ್ನಾಳ್ ಹಾಗೂ ಸಿಬಿಐ ರಿಟ್ ಅರ್ಜಿ ವಿಚಾರಣೆಯನ್ನು ವಿಸ್ತೃತ ಪೀಠಕ್ಕೆ ವರ್ಗಾವಣೆ ಮಾಡಿ ಹೈಕೋರ್ಟ್ ಏಕಸದಸ್ಯ ಪೀಠ ಆದೇಶ ಹೊರಡಿಸಿದೆ. ಅಲ್ಲದೆ ಸಿಬಿಐ ಅರ್ಜಿ ಸಂಬಂಧ ಡಿಕೆ ಶಿವಕುಮಾರ್‌ಗೆ ಮತ್ತು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಸೂಕ್ತವೆನಿಸಿದ ವಿಸ್ತೃತ ಪೀಠ ರಚಿಸಬಹುದು ಎಂದು ಏಕ ಸದಸ್ಯ ಪೀಠ ಹೇಳಿದೆ.

ಏರ್‌ಟೆಲ್ ತಾಂತ್ರಿಕ ದೋಷ

ಮೈಸೂರಿನಲ್ಲಿ ಎರಡು ಗಂಟೆಗಳ ಕಾಲ ಸಂಪರ್ಕ ಸ್ಥಗಿತ


ಮೈಸೂರು, ಜ.5(ಬಿಎಲ್‌ಯು)– ಏರ್‌ಟೆಲ್ ನೆಟ್‌ವರ್ಕ್‌ನಲ್ಲಿ ತಾಂತ್ರಿಕ ದೋಷ ಉಂಟಾದ ಪರಿಣಾಮ ಮೈಸೂರಿನಲ್ಲಿ ಸುಮಾರು ಎರಡು ಗಂಟೆಗಳ ಕಾಲ ಏರ್‌ಟೆಲ್ ಮೊಬೈಲ್ ಸಂಪರ್ಕ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು.

ಏರ್‌ಟೆಲ್ ಬಳಕೆದಾರರು ಕರೆಗಳ ಮಾಡಲು ಹಾಗೂ ಸ್ವೀಕರಿಸಲು ಸಾಧ್ಯವಾಗದೆ ಪರದಾಡಿದರು. ಕರೆ ಮಾಡಿದರೆ ಕಾಲ್ ಎಂಡೆಡ್ ಆಗಿ ಸಂಪರ್ಕ ಸ್ಥಗಿತವಾಗುತ್ತಿತ್ತು. ಇದರಿಂದ ಒಳ ಬರುವ ಕರೆ ಹಾಗೂ ಹೊರ ಹೋಗುವ ಕರೆ ಸಾಧ್ಯವಾಗುತ್ತಿರಲಿಲ್ಲ.

ತಮ್ಮ ಸಿಮ್ ಕಾರ್ಡ್‌ನಲ್ಲಿ ಏನೋ ದೋಷವಿರಬೇಕೆಂದು ಬಹಳಷ್ಟು ಗ್ರಾಹಕರು ಈ ವೇಳೆ ಮೈಸೂರಿನ ಏರ್‌ಟೆಲ್ ಕಚೇರಿಗಳಿಗೆ ಭೇಟಿ ನೀಡಿ ದೂರು ನೀಡಿದರು.

ತಾಂತ್ರಿಕ ದೋಷದಿಂದ ಎಲ್ಲಾ ನೆಟ್‌ವರ್ಕ್ ಡೌನ್ ಆಗಿದೆ. ಸ್ವಲ್ಪ ಸಮಯದಲ್ಲಿ ಸರಿ ಹೋಗಲಿದೆ ಎಂದು ಏರ್‌ಟೆಲ್ ಕಂಪನಿ ಸಿಬ್ಬಂದಿಗಳು ಸ್ಪಷ್ಟನೆ ನೀಡಿದರು.

ಹುಬ್ಬಳ್ಳಿ ಗಲಭೆ ಪ್ರಕರಣ: ಶ್ರೀಕಾಂತ್ ಪೂಜಾರಿಗೆ ಷರತ್ತುಬದ್ಧ ಜಾಮೀನು ಮಂಜೂರು!



ಹುಬ್ಬಳ್ಳಿ: ಅಯೋಧ್ಯೆ ರಾಮಜನ್ಮ ಭೂಮಿ ಹೋರಾಟದ ಪ್ರಕರಣದಲ್ಲಿ ಆರೋಪಿಯಾಗಿರುವ ಕರಸೇವಕ ಶ್ರೀಕಾಂತ ಪೂಜಾರಿಗೆ ಷರತ್ತುಬದ್ಧ ಜಾಮೀನು ಸಿಕ್ಕಿದೆ.

ಹುಬ್ಬಳ್ಳಿಯ ಒಂದನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯ ಶ್ರೀಕಾಂತ್ ಪೂಜಾರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಡಿಸೆಂಬರ್ 29ರಂದು ಶ್ರೀಕಾಂತ್ ಪೂಜಾರಿ ಅವರನ್ನು ಬಂಧಿಸಿ ಬಳಿಕ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಪ್ರಕರಣ ಮೂರನೇ ಆರೋಪಿಯಾಗಿರುವ ಶ್ರೀಕಾಂತ್ ವಿರುದ್ಧ ಹುಬ್ಬಳ್ಳಿಯ ಶಹರ ಠಾಣೆಯಲ್ಲಿ ಐಪಿಸಿ ಸೆಕ್ಷನ್‌ಗಳಾದ 143, 147, 436, 427 ಹಾಗೂ 149 ಅಡಿ ಪ್ರಕರಣವನ್ನು ದಾಖಲು ಮಾಡಲಾಗಿತ್ತು. ಈ ಪ್ರಕರಣದ ಸಂಬಂಧ ಆರೋಪ ಪಟ್ಟಿಯನ್ನೂ ಸಲ್ಲಿಸಲಾಗಿತ್ತು.

1992ರಲ್ಲಿ ಅಯೋಧ್ಯೆ ಹೋರಾಟ ಸಂಬಂಧ ಹುಬ್ಬಳ್ಳಿಯಲ್ಲಿ ನಡೆದಿದ್ದ ಗಲಾಟೆಯಲ್ಲಿ ಶ್ರೀಕಾಂತ್ ಪೂಜಾರಿ ಭಾಗಿಯಾಗಿದ್ದರು. ಈ ಹಿನ್ನೆಲೆ ಇತ್ತೀಚೆಗೆ ಬಂಧನ ಮಾಡಲಾಗಿತ್ತು. ಇದರಿಂದ ರಾಜ್ಯದಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿತ್ತು. ವಿಪಕ್ಷ ನಾಯಕ ಆರ್ ಅಶೋಕ್ ಹುಬ್ಬಳ್ಳಿಗೆ ಭೇಟಿ ನೀಡುತ್ತಿದ್ದಂತೆ ಪ್ರತಿಭಟನೆ ಮತ್ತೊಂದು ಸ್ವರೂಪ ಪಡೆದಿತ್ತು. ಠಾಣೆ ಮುಂದೆ ಟೈರ್‌ಗೆ ಬೆಂಕಿ ಹಚ್ಚಿದ್ದ ಕಾರ್ಯಕರ್ತರು ಹಿಂಬದಿ ಗೇಟ್‌ನಿಂದ ಠಾಣೆಗೆ ಮುತ್ತಿಗೆ ಹಾಕಲು ಯತ್ನಿಸಿದ್ದರು.

ಕಲಾಕುಂಚದಿಂದ ಜ.14ರಂದು ಯಕ್ಷಗಾನ ಚಿತ್ರ ಬರೆಯುವ ಸ್ಪರ್ಧೆ

ದಾವಣಗೆರೆ, ಜ. 5– ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ 34ನೇ ವರ್ಷದ ವಾರ್ಷಿಕೋತ್ಸವ ಮತ್ತು ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ನಗರದ ವಿಶ್ವವಿದ್ಯಾಲಯ ದೃಶ್ಯ ಕಲಾ ಮಹಾವಿದ್ಯಾಲಯ, ಯಕ್ಷರಂಗ ಯಕ್ಷಗಾನ ಸಂಸ್ಥೆಗಳ ಸಂಯಕ್ತಾಶ್ರಯದಲ್ಲಿ ಜ. 14 ರಂದು ಭಾನುವಾರ ಬೆಳಿಗ್ಗೆ 9.30ಕ್ಕೆ ದೃಶ್ಯಕಲಾ ಮಹಾವಿದ್ಯಾಲಯ ಸಭಾಂಗಣದಲ್ಲಿ ಯಕ್ಷಗಾನ ಚಿತ್ರ ವೀಕ್ಷಿಸಿ ಸ್ಥಳದಲ್ಲಿಯೇ ಚಿತ್ರ ಬರೆಯುವ ಉಚಿತ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಯಕ್ಷರಂಗದ ಅಧ್ಯಕ್ಷರಾದ ಮಲ್ಯಾಡಿ ಪ್ರಭಾಕರ ಶೆಟ್ಟಿ ತಿಳಿಸಿದ್ದಾರೆ.

ವಯೋಮಾನಕ್ಕೆ ಅನುಗುಣವಾಗಿ ವಿವಿಧ ವಿಭಾಗಗಳಾಗಿ ವಿಂಗಡಿಸುತ್ತಿದ್ದು, ಚಿತ್ರ ಬರೆಯುವ ಹಾಳೆ (ಡ್ರಾಯಿಂಗ್ ಶೀಟ್) ಉಚಿತವಾಗಿ ವಿತರಿಸಲಾಗುವುದು. ಇನ್ನುಳಿದಂತೆ ಚಿತ್ರ ಬರೆಯುವ ಪರಿಕರಗಳನ್ನು ಸ್ಪರ್ಧಿಗಳೇ ತರಬೇಕು. ಯಕ್ಷಗಾನ ಚಿತ್ರ ಬರೆಯಲು ಕೇವಲ ಒಂದು ಗಂಟೆ ಕಾಲಾವಕಾಶವಿದ್ದು ಜ.10 ರೊಳಗೆ ಹೆಸರು ನೊಂದಾಯಿಸಬಹುದು ಎಂದು ಯಕ್ಷರಂಗದ ಪ್ರಧಾನ ಕಾರ್ಯದರ್ಶಿ ಬೇಳೂರು ಸಂತೋಷ್ ಕುಮಾರ್ ಶೆಟ್ಟಿ ತಿಳಿಸಿದ್ದಾರೆ. ಹೆಸರು ನೊಂದಾಯಿಸುವ ಸನೀಹವಾಣಿ 9731062936. ಮಾಹಿತಿಗೆ 9538732777 ಈ ಸನೀಹವಾಣಿಗೆ ಸಂಪರ್ಕಿಸಬಹುದು ಎಂದು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಜೆಎಸ್‌ಎಸ್ ನರ್ಸಿಂಗ್ ಕಾಲೇಜಲ್ಲಿ ಪದವಿ ಪ್ರದಾನ

- ಪದವಿ ಪಡೆಯುತ್ತಿದ್ದಂತೆ ಕಲಿಕೆ ಮುಕ್ತಾಯವಾಗಲ್ಲ
- ಮಣಿಪಾಲ್ ನರ್ಸಿಂಗ್ ಕಾಲೇಜಿನ ಡೀನ್ ಡಾ.ಜುಡಿತ್ ಏಂಜೆಲಿಟ್ಟಾ ನೊರೊನ್ಹಾ ಕಿವಿಮಾತು



ಮೈಸೂರಿನ ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಶುಕ್ರವಾರ ಪದವಿ ಪ್ರದಾನ ಮಾಡಲಾಯಿತು. ಪ್ರಾಂಶುಪಾಲರಾದ ಎಂ.ಕೆ.ಅಶ್ವತಿದೇವಿ, ಮಣಿಪಾಲ್ ನರ್ಸಿಂಗ್ ಕಾಲೇಜು ಡೀನ್ ಡಾ.ಜುಡಿತ್ ಏಂಜೆಲಿಟ್ಟಾ ನೊರೊನ್ಹಾ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ಹಾಗೂ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್ ಚಿತ್ರದಲ್ಲಿದ್ದಾರೆ.

ಮೈಸೂರು, ಜ.5(ಎಸ್‌ಬಿಡಿ)– ಕಲಿಕೆ ನಿರಂತರವಾಗಿರಲಿ. ಜ್ಞಾನ ನಿಮ್ಮಲ್ಲಿ ಭರವಸೆ ಮೂಡಿಸುತ್ತದೆ ಎಂದು ಮಣಿಪಾಲ್ ನರ್ಸಿಂಗ್ ಕಾಲೇಜು ಡೀನ್ ಡಾ.ಜುಡಿತ್ ಏಂಜೆಲಿಟ್ಟಾ ನೊರೊನ್ಹಾ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಡಾ. ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಶುಕ್ರವಾರ ನಡೆದ ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ಬೇಸಿಕ್ ಬಿಎಸ್‌ಸಿ ನರ್ಸಿಂಗ್‌ನ 23ನೇ ಬ್ಯಾಚ್, ಪಿಬಿಬಿಎಸ್‌ಸಿ ನರ್ಸಿಂಗ್‌ನ 18ನೇ ಬ್ಯಾಚ್ ಹಾಗೂ ಎಂ.ಎಸ್ಸಿ ನರ್ಸಿಂಗ್‌ನ 17ನೇ ಬ್ಯಾಚ್‌ನ ಪದವಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪದವಿ ಪೂರೈಸುವುದರೊಂದಿಗೆ ಕಲಿಕೆ ಮುಕ್ತಾಯಗೊಳ್ಳುವುದಿಲ್ಲ. ಜೀವನದ ಸುದೀರ್ಘ ಪಯಣದಲ್ಲಿ ಕಲಿಕೆ ನಿರಂತರ. ಹೊಸತನ್ನು ಕಲಿಯುವ ಅವಕಾಶಗಳು ವಿಫಲವಾಗಿವೆ. ಅಂದುಕೊಂಡಂತೆ ಪದವಿ ಪಡೆದರೆ ಸಾಕು ಎಂದು ಅಲ್ಲಿಗೆ ಕಲಿಕೆ ನಿಲ್ಲಿಸಬಾರದು. ನಿರಂತರ ಕಲಿಕೆಯಿಂದ ಜ್ಞಾನ ವೃದ್ಧಿಸುತ್ತದೆ. ಕಲಿಕೆ ಮೂಲಕ ಪಡೆದ ಜ್ಞಾನ ನಿಮ್ಮ ಬದುಕಿನಲ್ಲಿ ಭರವಸೆ ಮೂಡಿಸುವುದರ ಜೊತೆಗೆ ಗುರಿ ಸಾಧನೆಗೆ ನೆರವಾಗುತ್ತದೆ. ಜ್ಞಾನ ಸಂಪತ್ತು ಎಂದಿಗೂ ವ್ಯರ್ಥವಾಗುವುದಿಲ್ಲ. ಸಾಧಕರ ಸ್ಫೂರ್ತಿ ಪಡೆದು ನೀವೂ ಅದೇ ದಾರಿಯಲ್ಲಿ ಮುಂದುವರೆಯಿರಿ. ಗುರಿ ಸಾಧನೆ ಜೊತೆಗೆ ಸಮಾಜಕ್ಕೆ ನೆರವಾಗುವ ಮನೋಭಾವ ರೂಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಕೋರ್ಸ್‌ಗಳು ಸಹಜವಾಗಿ ವಿಜ್ಞಾನದ ತಳಹದಿ ಹೊಂದಿರುತ್ತವೆ. ಆದರೆ ನರ್ಸಿಂಗ್ ಕೋರ್ಸ್ ಮಾತ್ರ ವಿಭಿನ್ನ. ಇದು ವಿಜ್ಞಾನವನ್ನೂ ಮೀರಿ, ಮಾನವೀಯ ನೆಲೆಗಟ್ಟು ಹೊಂದಿದೆ. ವೈಜ್ಞಾನಿಕ ಕ್ರಮದಲ್ಲಿ ರೋಗಿಯ ಶುಶ್ರೂಷೆ ಮಾಡಿದರೂ ಅದರಲ್ಲಿ ಮಾನವೀಯತೆಯ ಸ್ಪರ್ಶ ಅಡಗಿರುತ್ತದೆ. ಆದ್ದರಿಂದಲೇ ಈ ಸೇವೆ ಮಹತ್ವದ್ದಾಗಿದೆ ಎಂದು ಶುಶ್ರೂಷಕರ ಸೇವೆಯನ್ನು ಬಣ್ಣಿಸಿದರು.

ಸಮಾರಂಭದಲ್ಲಿ ವಿವಿಧ ಕೋರ್ಸ್‌ಗಳ 73 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ, ಅಭಿನಂದಿಸಲಾಯಿತು. ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಪ್ರಾಂಶುಪಾಲರಾದ ಎಂ.ಕೆ.ಅಶ್ವತಿದೇವಿ ಮತ್ತಿತರರು ಉಪಸ್ಥಿತರಿದ್ದರು.

ಹಿಂದೂ ರಾಷ್ಟ್ರದ ವಿಚಾರವಾಗಿ ಡಾ.ಅಂಬೇಡ್ಕರ್ ಅವರು ಹೇಳಿದ್ದನ್ನೇ ನಾನೂ ಹೇಳಿದ್ದೇನೆ

ಶಾಸಕ ಡಾ.ಯತಿಂದ್ರ ಸಿದ್ದರಾಮಯ್ಯ ಸಮರ್ಥನೆ



ಮೈಸೂರು, ಜ.5(ಎಂಟಿವೈ)– ಬಿಜೆಪಿ ಮಾಡುತ್ತಿರುವ ಧರ್ಮ ರಾಜಕಾರಣದಿಂದ ಜನರಿಗೂ, ಸಮಾಜ ಅಥವಾ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಆ ಕಾರಣದಿಂದ ಧರ್ಮ ರಾಜಕಾರಣ ತಪ್ಪೆಂದು ಹೇಳಿದ್ದೇನೆ. ಇದನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದು ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಮೈಸೂರಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿ ಅವರು, ಭಾರತ ಹಿಂದೂ ರಾಷ್ಟ್ರವಾದರೆ ದೇಶಕ್ಕೆ ಅಪಾಯಕಾರಿ ಎಂಬ ಹೇಳಿಕೆಗೆ ವಿರೋಧ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಶುಕ್ರವಾರ ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈ ಹಿಂದೆ ನೀಡಿದ್ದ ಹೇಳಿಕೆಯನ್ನು ಸಮರ್ಥಿಸಿಕೊಂಡರಲ್ಲದೆ, ಈಗಾಗಲೇ ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡಿದ ದೇಶಗಳು ನಾಶವಾಗಿವೆ. ಅಭಿವೃದ್ಧಿ ಕೆಲಸದ ಆಧಾರದ ಮೇಲೆ ಜನರು ಸರ್ಕಾರವನ್ನು ಆಯ್ಕೆ ಮಾಡಬೇಕು. ರಾಜಕಾರಣಿಗಳು ಧರ್ಮದ ಕೆಲಸ ಮಾಡಬಾರದು. ಧರ್ಮದ ಕೆಲಸ ಮಾಡಲು ಬೇರೆಯ ವ್ಯವಸ್ಥೆ ಇದೆ. ಇದನ್ನು ಅರ್ಥ ಮಾಡಿಕೊಳ್ಳಬೇಕು. ರಾಜಕಾರಣದ ಲಾಭಕ್ಕಾಗಿ ಧರ್ಮದ ಹೆಸರು, ದೇವರ ಹೆಸರು ಬಳಸಬಾರದು ಎಂದು ಕಿಡಿಕಾರಿದರು.

ಬಿಜೆಪಿ ಅಭಿವೃದ್ಧಿಯನ್ನೇ ಮಾಡದೆ ಧರ್ಮದ ಹೆಸರಿನಲ್ಲಿ ರಾಜಕಾರಣ ನಡೆಸುತ್ತಿದೆ. ಧರ್ಮದ ವಿಚಾರ ಮುಂದಿಟ್ಟುಕೊಂಡು ಇತರ ವಿಚಾರಗಳನ್ನು ಆ ಪಕ್ಷದವರು ಮರೆಮಾಚುತ್ತಿದ್ದಾರೆ. ಹಿಂದೂ ರಾಷ್ಟ್ರ ವಿಚಾರವಾಗಿ ಡಾ.ಅಂಬೇಡ್ಕರ್ ಹೇಳಿರುವುದನ್ನು ನಾನು ಹೇಳಿದ್ದೇನೆ. ಸಂವಿಧಾನದ ಪೀಠಿಕೆಯಲ್ಲಿ ನಂಬಿಕೆ ಇರುವವರು ಅದನ್ನು ತಪ್ಪೆಂದು ಭಾವಿಸುವುದಿಲ್ಲ. ನಮ್ಮ ದೇಶ ಜಾತ್ಯಾತೀತ ರಾಷ್ಟ್ರ. ಯಾವುದೇ ಒಂದು ಧರ್ಮದ ವಿಚಾರವಾಗಿ ದೇಶ ಇರಬಾರದು. ಡಾ.ಅಂಬೇಡ್ಕರ್ ಮೇಲೆ ನಂಬಿಕೆ ಇದ್ದರೆ ನನ್ನ ಹೇಳಿಕೆಯನ್ನು ನಂಬುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಟಾರ್ಗೆಟ್ ಮಾಡಲು ಪ್ರತಾಪ್ ಸಿಂಹ ನ್ಯಾಷನಲ್ ಲೀಡರಾ?: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಸದ ಪ್ರತಾಪ ಸಿಂಹ ಅವರನ್ನು ಟಾರ್ಗೆಟ್ ಮಾಡಲು ಅವರೇನು ನ್ಯಾಷನಲ್ ಲೀಡರಾ? ಅವರು ತಮ್ಮನ್ನು ತಾವೇ ದೊಡ್ಡ ನಾಯಕನೆಂದು ಬಿಂಬಿಸಿಕೊಳ್ಳುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 45 ವರ್ಷದ ರಾಜಕೀಯ ಜೀವನದಲ್ಲಿ ಯಾರ ಮೇಲೂ ಹಗೆ ಸಾಧಿಸಿಲ್ಲ. ತಮಗೆ ಅನ್ಯಾಯ ಮಾಡಿದವರನ್ನು ಸಹಿಸಿಕೊಂಡಿದ್ದಾರೆ. ಪ್ರತಾಪಸಿಂಹ ಸಹೋದರ ವಿಕ್ರಂ ಸಿಂಹ ತಪ್ಪು ಮಾಡಿರುವುದಕ್ಕೆ ಕಾನೂನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಸ್ಪಷ್ಟಪಡಿಸಿದರು. ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸಂಬಂಧ ಯಾವುದೇ ನಿಲುವು ಇಟ್ಟುಕೊಂಡಿಲ್ಲ. ಆಕಾಂಕ್ಷೆಯೂ ಇಲ್ಲ. ಅಲ್ಲದೇ ಟಿಕೆಟ್ ಕೊಡುವಂತೆ ಪಕ್ಷವನ್ನು ಕೇಳಿಲ್ಲ. ಯಾರು ಸ್ಪರ್ಧೆ ಮಾಡಬೇಕು ಎಂಬುದನ್ನು ವರಿಷ್ಠರು ತೀರ್ಮಾನ ಮಾಡುತ್ತಾರೆ. ಒಂದು ವೇಳೆ ಪಕ್ಷ ನಿಲ್ಲುವಂತೆ ಸೂಚಿಸಿದರೆ ತೀರ್ಮಾನ ಮಾಡಬೇಕಾಗುತ್ತದೆ ಎಂದರು.

ಬೆಂಗಳೂರಿನ ವಿಶ್ವೇಶ್ವರಯ್ಯ ಮ್ಯೂಸಿಯಂಗೆ ಬಾಂಬ್ ಬೆದರಿಕೆ ಮೇಲ್

ಬೆಂಗಳೂರು, ಜ.5– ಹುಸಿ ಬಾಂಬ್ ಮೇಲ್‌ನ ಗುಮ್ಮ ಮತ್ತೆ ಸದ್ದು ಮಾಡಿದೆ. ಇಷ್ಟು ದಿನ ಸ್ಕೂಲ್‌ಗಳನ್ನು ಟಾರ್ಗೆಟ್ ಮಾಡಿಕೊಂಡಿದ್ದ ದುಷ್ಕರ್ಮಿಗಳು ಇಂದು ಮ್ಯೂಸಿಯಂಗಳನ್ನ ಟಾರ್ಗೆಟ್ ಮಾಡಿ ಬಾಂಬ್ ಮೇಲ್ ಕಳಿಸಿದ್ದಾರೆ.

ಇಂದು ಬೆಳಗ್ಗೆ 9 ಗಂಟೆಗೆ ಅಧಿಕಾರಿಗಳು ಎಂದಿನಂತೆ ಇ–ಮೇಲ್ ಪರಿಶೀಲಿಸಿದ್ದಾರೆ. ಅದರಲ್ಲಿನ ಒಂದು ಇ–ಮೇಲ್ ದಿಗಿಲು ಹುಟ್ಟಿಸಿತ್ತು. Morgue999lol ಎಂಬ ಇ–ಮೇಲ್ ಐಡಿಯಿಂದ ವಿಶ್ವೇಶ್ವರಯ್ಯ ಮ್ಯೂಸಿಯಂಗೆ ಬಾಂಬ್ ಇಟ್ಟಿರುವುದಾಗಿ ಉಲ್ಲೇಖವಾಗಿತ್ತು.

ಮ್ಯೂಸಿಯಂ ಒಳಗೆ ವಿವಿಧ ಸ್ಫೋಟಕ ವಸ್ತುಗಳನ್ನು ಇಟ್ಟಿದ್ದೇವೆ. ಅದನ್ನು ಗೌಪ್ಯ ಸ್ಥಳದಲ್ಲಿ ಇರಿಸಿದ್ದು, ಬೆಳಗ್ಗೆ ಸ್ಫೋಟಗೊಳ್ಳಲಿದೆ. ಮ್ಯೂಸಿಯಂನಲ್ಲಿರುವ ಅಷ್ಟು ಜನ ಸಾವನ್ನಪ್ಪಲಿದ್ದಾರೆ. ನಾವು ಟೆರರಿಸರ್ಸ್ 111 ಎಂಬ ಸಂಘಟನೆಗೆ ಸೇರಿದವರು. ನಮ್ಮ ಗ್ರೂಪ್ ಹೆಸರನ್ನು ಮಾಧ್ಯಮದವರಿಗೆ ನೀಡಿ ಅಂತಾ ಮೇಲ್ ಕಳಿಸಲಾಗಿತ್ತು.

ಮೇಲ್ ನೋಡಿದ್ದೇ ತಡ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸ್ ಸಿಬ್ಬಂದಿ, ಶ್ವಾನ ದಳ, ಬಾಂಬ್ ನಿಷ್ಕ್ರಿಯ ದಳದ ತಂಡ ಪರಿಶೀಲನೆ ನಡೆಸಿದ್ದು, ಯಾವುದೇ ಸ್ಫೋಟಕ ವಸ್ತು ಕಂಡು ಬಂದಿರೋದಿಲ್ಲ. ನಂತರ ಇದೊಂದು ಹುಸಿ ಬಾಂಬ್ ಕರೆ ಎಂಬುದು ಖಾತ್ರಿ ಆಗುತ್ತಿದ್ದಂತೆ ಅಧಿಕಾರಿಗಳು ನಿಟ್ಟುಸಿರು ಬಿಟ್ಟಿದ್ದಾರೆ.

ವಿದ್ಯುತ್ ವ್ಯತ್ಯಯ

ಮೈಸೂರು, ಜ.5– ನಿರ್ವಹಣಾ ಕೆಲಸದ ನಿಮಿತ್ತ ಜನವರಿ 7ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಬ್ಬಾಳ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಕುಂಬಾರ್‌ಕೊಪ್ಪಲು, ಟೋಲ್‌ಗೇಟ್, ವಾಣಿವಿಲಾಸ ಲೇಔಟ್, ಮಹದೇಶ್ವರ ಬಡಾವಣೆ, ಸುಭಾಷ್‌ನಗರ, ಸೂರ್ಯ ಬೇಕರಿ, ವಿಜಯನಗರ, ರೈಲ್ವೆ ಲೇಔಟ್, ಅಭಿಷೇಕ್ ವೃತ್ತ, ಮಾದೇಗೌಡ ವೃತ್ತ, ಎಂ.ಜಿ. ಕೊಪ್ಪಲು, ಹೊರ ವರ್ತುಲ ರಸ್ತೆ, ಹಂಪಿ ವೃತ್ತ, ಸಂಗಮ್ ವೃತ್ತ, ಆರ್ಕಿಯೋಲಜಿ ಆಫೀಸ್ ಸುತ್ತ ಮುತ್ತ, ಕೆ.ಐ.ಎ.ಡಿ.ಬಿ ಕೈಗಾರಿಕಾ ಹೌಸಿಂಗ್ ಲೇಔಟ್, ಎಲ್&ಟಿ ಫ್ಯಾಕ್ಟರಿ ಸುತ್ತ ಮುತ್ತಲಿನ ಪ್ರದೇಶ, ರಾಣೆ ಮದ್ರಾಸ್ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಕಾಡು ಹಂದಿಗೆ ಡಿಕ್ಕಿ ಹೊಡೆಯುವುದ ತಪ್ಪಿಸಲು ಹೋಗಿ ಸ್ಕೂಟರ್‌ನಿಂದ ಬಿದ್ದು ನಿವೃತ್ತ ಕಂಡಕ್ಟರ್ ಸಾವು

ಗುಂಡ್ಲುಪೇಟೆ, ಜ. 5– ಅಡ್ಡಲಾಗಿ ಬಂದ ಕಾಡುಹಂದಿಯ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವ ಪ್ರಯತ್ನದಲ್ಲಿ ನಿಯಂತ್ರಣ ತಪ್ಪಿದ ಸ್ಕೂಟರ್ ಬಿದ್ದ ಪರಿಣಾಮ ಕೆಎಸ್‌ಆರ್‌ಟಿಸಿ ನಿವೃತ್ತ ಕಂಡಕ್ಟರ್ ಸಾವನ್ನಪ್ಪಿದ ಘಟನೆ ಗುಂಡ್ಲುಪೇಟೆ ತಾಲೂಕು ಮಾದರಹಳ್ಳಿ ಬಳಿ ಸಂಭವಿಸಿದೆ.


ಗುಂಡ್ಲುಪೇಟೆ ಟೌನ್ ನಿವಾಸಿ ನಿವೃತ್ತ ಕಂಡಕ್ಟರ್ ಬಿ.ನಾಗರಾಜು ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಗುಂಡ್ಲುಪೇಟೆಯ ಜನತಾನಗರದಲ್ಲಿ ಇವರು ವಾಸವಿದ್ದು, ನೇನೇಕಟ್ಟೆ ಗ್ರಾಮದಲ್ಲಿ ಚಿಲ್ಲರೆ ಅಂಗಡಿ ಇಟ್ಟುಕೊಂಡಿದ್ದಾರೆ. ಜನವರಿ 2ರಂದು ರಾತ್ರಿ 8.15ರ ಸುಮಾರಿನಲ್ಲಿ ನೇನೇಕಟ್ಟೆ ಗ್ರಾಮದಿಂದ ಸುಜುಕಿ ಆಕ್ಸಿಸ್–125 ಸ್ಕೂಟರ್‌ನಲ್ಲಿ (ಕೆಎ 10–ಇಬಿ 4568) ತೆರಳುತ್ತಿದ್ದಾಗ ಗುಂಡ್ಲುಪೇಟೆ–ಮೈಸೂರು ಮುಖ್ಯರಸ್ತೆಯಲ್ಲಿ ಕಾಡುಹಂದಿ ಅಡ್ಡಲಾಗಿ ಬಂದಾಗ ನಿಯಂತ್ರಣ ತಪ್ಪಿ ಸ್ಕೂಟರ್ ಬಿದ್ದ ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದಾರೆ. ಇದೇ ವೇಳೆ ಹಿಂದೆ ಬೈಕ್‌ನಲ್ಲಿ ಬರುತ್ತಿದ್ದ ಅವರ ಸೋದರಳಿಯ ಪ್ರದೀಪ್‌ಕುಮಾರ್ ಅವರು, ನಾಗರಾಜು ಅವರನ್ನು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆತಂದು ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ, ಮೈಸೂರಿನ ಪುರಭವನದ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಡೆಯುತ್ತಿರುವ ಧರಣಿ ಶುಕ್ರವಾರ 60ನೇ ದಿನ ಪೂರೈಸಿತು. ಈ ವೇಳೆ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ (ಜೆಪಿ), ಉಪಾಧ್ಯಕ್ಷ ಸುರೇಶ್ ಗೌಡ, ಮೂಗೂರು ನಂಜುಂಡಸ್ವಾಮಿ, ಮೆಲ್ಲಳ್ಳಿ ಮಹಾದೇವಸ್ವಾಮಿ, ಲೋಕೇಶ್‌ಗೌಡ, ಮಂಜುಳಾ, ಪುಷ್ಪ, ಕೃಷ್ಣೇಗೌಡ, ಶಿವಕುಮಾರ್, ಬಾಲಕೃಷ್ಣ, ನಾಗರಾಜು, ಕೃಷ್ಣಪ್ಪ, ಹನುಮಂತಯ್ಯ, ರಮೇಶ್, ಆಟೋ ಮಹದೇವ, ವಿಷ್ಣು, ದಾರಿಪುರ ಡಿ.ಚಂದ್ರಶೇಖರ್, ಎಸ್.ವಿ.ಶಿವ ನಾಯಕ್, ಸಿಂಧುವಳ್ಳಿ ಶಿವಕುಮಾರ್, ಸಿ.ಕೃಷ್ಣ, ಕೆ.ಮಹೇಶ್, ರಾಜಶೇಖರ್, ಬಸವರಾಜು, ಅಶೋಕ್, ಹೊನ್ನೇಗೌಡ,ವರಕೋಡು ಕೃಷ್ಣೆಗೌಡ, ಸೋಮಶೇಖರ್, ಎಂ.ರಾಜು, ಆರ್.ಶ್ರೀನಿವಾಸ್, ಜಿ.ನಾಗರಾಜು, ಶ್ರೀನಿವಾಸ್, ಸಂಜಯ, ಯೋಗರಾಜ್, ಇನ್ನಿತರರು ಪಾಲ್ಗೊಂಡಿದ್ದರು. ಮತ್ತಿತರರಿದ್ದರು.

ನೈಸ್ ಯೋಜನೆ ಸರ್ಕಾರದ ವಶಕ್ಕೆ ಪಡೆಯಲು ಮಾಜಿ ಪ್ರಧಾನಿ ದೇವೇಗೌಡರ ಆಗ್ರಹ

- ಆ ಕಂಪನಿ ವಶದಲ್ಲಿರುವ 7 ಸಾವಿರ ಕೋಟಿ ಮೌಲ್ಯದ 13,404 ಎಕರೆ ರೈತರ ಭೂಮಿ ಮರು ವಶಕ್ಕೆ ಒತ್ತಾಯ
- ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಪತ್ರ ಬರೆದರೂ, ಫೋನ್‌ನಲ್ಲಿ ಮಾತನಾಡಿದರೂ ಕ್ರಮ ಕೈಗೊಳ್ಳದ್ದಕ್ಕೆ ಬೇಸರ



ಬೆಂಗಳೂರು, ಜ.5(ಕೆಎಂಶಿ)– ನೈಸ್ ಯೋಜನೆಯನ್ನು ರಾಜ್ಯ ಸರಕಾರ ವಶಕ್ಕೆ ಪಡೆಯಬೇಕು ಎಂದು ಆಗ್ರಹಪಡಿಸಿರುವ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರು, ಕಂಪನಿ ವಶದಲ್ಲಿರುವ 13,404 ಎಕರೆ ರೈತರ ಭೂಮಿಯನ್ನು ಸರಕಾರ ಮರು ವಶಪಡಿಸಿಕೊಳ್ಳಬೇಕು ಎಂದರು.

ಈ ಬಗ್ಗೆ ತಾವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರೂ, ಈವರೆಗೂ ಯಾವುದೇ ಕ್ರಮ ವಹಿಸಿಲ್ಲ ಎಂದು ಮಾಜಿ ಪ್ರಧಾನಿ ಅತೀವ ಬೇಸರ ವ್ಯಕ್ತಪಡಿಸಿದರು. ಸಿದ್ದರಾಮಯ್ಯ ಅವರಿಗೆ ಏನು ಕಷ್ಟ ಇದೆಯೋ ಗೊತ್ತಿಲ್ಲ. ಅವರು ಬಡವರ ಪರ ಮಾತನಾಡುತ್ತಾರೆ. ಆ ಯೋಜನೆಯಲ್ಲಿ ಇಷ್ಟೊಂದು ಅಕ್ರಮ ಆಗಿದ್ದರೂ, ಬಡವರ ಭೂಮಿ ಲೂಟಿ ಹೊಡೆಯಲಾಗಿದ್ದರೂ ಏನು ಕ್ರಮ ತೆಗೆದುಕೊಂಡಿಲ್ಲ. ಬಡವರ ಪರ ಮಾತಾಡುವ ಮುಖ್ಯಮಂತ್ರಿ ಯಾಕೆ ಕ್ರಮ ತೆಗೆದುಕೊಂಡಿಲ್ಲ ಎಂದು ಮಾಜಿ ಪ್ರಧಾನಿ ಅತ್ಯಂತ ಖಾರವಾಗಿ ಪ್ರಶ್ನಿಸಿದರು.

ಸಿದ್ದರಾಮಯ್ಯ ಅವರು ಎಷ್ಟು ವರ್ಷ ಆಳಿದರೂ ಈ ಕಪ್ಪುಚುಕ್ಕೆಯಿಂದ ಹೊರಗೆ ಬರಲು ಸಾಧ್ಯವಿಲ್ಲ. ಇದರ ವಿರುದ್ಧ ಅವರು ಕ್ರಮ ತೆಗೆದುಕೊಳ್ಳದೇ ಹೋದರೆ ಅವರ ರಾಜಕೀಯ ಜೀವನಕ್ಕೆ ಇದೇ ಕಪ್ಪುಚುಕ್ಕೆಯಾಗಿ ಉಳಿದು ಹೋಗುತ್ತದೆ ಎಂದರು. ಈ ವಿಷಯದಲ್ಲಿ ರೈತರ ಪರ ನಿಲ್ಲುವುದಕ್ಕೆ ಮೀನಾಮೇಷ ಎಣಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ನೈಸ್ ರಸ್ತೆಯೋಜನೆ ವಿಷಯ ಎಲ್ಲರಿಗೂ ಗೊತ್ತಿದೆ, ಅದರಲ್ಲಿ ಏನೇನು ನಡೆದಿದೆ ಎನ್ನುವುದೂ ತಿಳಿದಿದೆ, ಬಡವರಿಗೆ ಇದರಿಂದ ಅನ್ಯಾಯ ಆಗಿದೆ, ನಮ್ಮ ಪಕ್ಷ ಇದರ ವಿರುದ್ಧ ದನಿ ಎತ್ತಿದೆ, ವಿಧಾನಸಭೆಯಲ್ಲೂ ಈ ಬಗ್ಗೆ ಸುದೀರ್ಘ ಚರ್ಚೆ ಆಗಿದೆ. ವಿಧಾನಸಭೆಯಲ್ಲಿ ಟಿ.ಬಿ.ಜಯಚಂದ್ರ ನೇತೃತ್ವದಲ್ಲಿ ಸದನ ಸಮಿತಿ ನೇಮಕ ಮಾಡಲಾಗಿತ್ತು, ಸದನ ಸಮಿತಿ ವರದಿ ಕೊಟ್ಟಿದೆ ಎಷ್ಟು ಅಕ್ರಮ ಮಾಡಿದೆ, ಈ ಯೋಜನೆಯನ್ನು ಸರ್ಕಾರ ವಶಪಡಿಸಿಕೊಳ್ಳಬೇಕು ಎಂದು ವರದಿ ಕೊಟ್ಟಿದೆ. ಆದರೆ ಸರ್ಕಾರ ಅಂತಿಮ ನಿರ್ಧಾರ ಮಾಡಿಲ್ಲ. ಇದಕ್ಕೆ ಕಾರಣ ಗೊತ್ತಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

2023 ಅಕ್ಟೋಬರ್ 19ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದೆ, ನೈಸ್ ವಿಚಾರವಾಗಿ ಕ್ರಮಕ್ಕೆ ಆಗ್ರಹ ಮಾಡಿದ್ದೆ, ಈ ಬಗ್ಗೆ ಖುದ್ದು ಅವರಿಗೆ ದೂರವಾಣಿ ಕರೆ ಮಾಡಿ ಮಾತನಾಡಿದ್ದೇನೆ ಎಂದು ದೇವೇಗೌಡರು, ತಾವು ಬರೆದಿದ್ದ ಪತ್ರವನ್ನು ಮಾಧ್ಯಮಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.

13,404 ಎಕರೆಯಷ್ಟು ರೈತರ ಭೂಮಿಯನ್ನು ನೈಸ್‌ನಿಂದ ಸರಕಾರ ಮರು ವಶಪಡಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದೆ, ಈ ಯೋಜನೆಯ ಮೌಲ್ಯ 7 ಸಾವಿರ ಕೋಟಿ ರೂ. ಅಂತ ಸದನ ಸಮಿತಿಯೇ ವರದಿ ಕೊಟ್ಟಿದೆ. ಅಧಿಕಾರಿಗಳೇ ಈ ವರದಿ ಕೊಟ್ಟಿದ್ದಾರೆ. ಹಿಂದೆ ಸೋನಿಯಾ ಗಾಂಧಿ ಅವರ ಬಳಿಯೂ ಈ ಯೋಜನೆಯ ಅಕ್ರಮಗಳ ಚರ್ಚೆ ಆಗಿದೆ. ಧರ್ಮಸಿಂಗ್ ಅವರ ಕಾಲದಲ್ಲಿಯೂ ಚರ್ಚೆ ಆಗಿತ್ತು. ಆಗ ಸೋನಿಯಾಗಾಂಧಿ ಅವರು ಧರ್ಮಸಿಂಗ್ ಅವರಿಗೆ ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಿದ್ದರು ಎಂದು ಮಾಜಿ ಪ್ರಧಾನಿ ಹೇಳಿದರು.

ನಾನು ಜೀವನದಲ್ಲಿ ಒಂದೇ ಒಂದು ತಪ್ಪು ಮಾಡಿದೆ, ಒಳ್ಳೆಯ ರಸ್ತೆ ಆಗುತ್ತದೆ ಅಂತ ಮಹತ್ವಾಕಾಂಕ್ಷೆಯಿಂದ ಸಹಿ ಮಾಡಿದೆ. ಮೈಸೂರಿಗೆ ಒಂದು ಗಂಟೆಯಲ್ಲಿ ಹೋಗಬಹುದು ಅಂತ ಇದನ್ನು ಮಾಡಿದೆ. ಆದರೆ ದೊಡ್ಡ ಪೆಟ್ಟು ಕೊಟ್ಟರು ಮಹಾನುಭಾವರು. ಸಿದ್ದರಾಮಯ್ಯ ಅವರು ಇದನ್ನು ಸರಿ ಮಾಡಲಿ ಎಂದರು. ನಮ್ಮ ಪಕ್ಷ ನೈಸ್ ವಿಷಯದಲ್ಲಿ ರಾಜೀ ಮಾಡಿಕೊಳ್ಳುವ ಪ್ರಶ್ನೆ ಇಲ್ಲ. ನಾನು ನಮ್ಮ ಪಕ್ಷ, ರೈತರು, ಬಡವರ ಪರ ಹೋರಾಟ ಮಾಡುತ್ತೇವೆ.

ಬಿ.ಎಸ್.ಯಡಿಯೂರಪ್ಪ ಅವರ ಅವಧಿಯಲ್ಲಿ ಹೆಚ್ಚುವರಿ ಭೂಮಿ ಕೊಡಲು ಆಗುವುದಿಲ್ಲ ಎಂದು ಅಫಿಡವಿಟ್ ಸಲ್ಲಿಸಲಾಗಿತ್ತು. ನೈಸ್ ಯೋಜನೆಗೆ ಹೆಚ್ಚುವರಿ ಭೂಮಿ ಕೊಡಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್‌ಗೆ ಯಡಿಯೂರಪ್ಪ ಅವರ ಸರಕಾರ ಪ್ರಮಾಣಪತ್ರ (ಅಫಿಡವಿಟ್) ಸಲ್ಲಿಸಿತು. ಈ ಯೋಜನೆ ದೊಡ್ಡ ವಂಚನೆ ಎಂದು ಯಡಿಯೂರಪ್ಪ ಅವರೇ ಅಫಿಡವಿಟ್ ಹಾಕಿದ್ದರು. ಕುಮಾರಸ್ವಾಮಿ ಈಗಾಗಲೇ ಬಿಜೆಪಿ ಜತೆ ಚರ್ಚೆ ಮಾಡಿದ್ದಾರೆ. ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡುತ್ತಾರೆ ಎಂದು ದೇವೇಗೌಡ ವಿವರಿಸಿದರು.

ಪ್ರತಿ 15 ದಿನಕೊಮ್ಮೆ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ ನಡೆಸಲು ಡಿಸಿ ಸೂಚನೆ

ಮಂಡ್ಯ, ಜ.5–ಮಳೆ ಕೊರತೆಯಿಂದ ಜಿಲ್ಲೆಯ ಎಲ್ಲಾ ತಾಲೂಕು ಬರಪೀಡಿತ ಎಂದು ಘೋಷಣೆಯಾಗಿದ್ದು, ತಹಶೀಲ್ದಾರ್‌ಗಳು ಆಯಾ ತಾಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ಕುಡಿಯುವ ನೀರು, ಮೇವು ಸೇರಿದಂತೆ ಇನ್ನಿತರ ಪರಿಸ್ಥಿತಿಗಳ ಕುರಿತು ಸಭೆ ನಡೆಸಿ ವರದಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.



ಮಂಡ್ಯ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿದರು. ಉಪವಿಭಾಗಾಧಿಕಾರಿ ಶಿವಮೂರ್ತಿ, ಎಸ್ಪಿ ಎನ್.ಯತೀಶ್, ಜಿಪಂ ಉಪಕಾರ್ಯದರ್ಶಿ ಆನಂದ್ ಮತ್ತಿತರರು ಇದ್ದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುವ ಮುನ್ನ ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್ ಮೂಲಕ ನೀರು ದೊರಕುವುದಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಟ್ಯಾಂಕರ್ ಮೂಲಕ ನೀರು ಪಡೆಯಲು ಟೆಂಡರ್ ಕರೆದು ನಿಗದಿಪಡಿಸಿದ ದರಕ್ಕೆ ಪಡೆಯಬೇಕು. ಟ್ಯಾಂಕರ್ ಆ್ಯಪ್ ಮೂಲಕ ಅದರ ವಿವರ ಅಪ್‌ಲೋಡ್ ಮಾಡಿ ನಂತರ ಸರಬರಾಜು ಮಾಡಬೇಕು ಎಂದು ತಿಳಿಸಿದರು.

ಬರ ನಿರ್ವಹಣೆ ಸಂಬಂಧಿಸಿದಂತೆ ಎಲ್ಲಾ ತಾಲೂಕುಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ನೋಡಲ್ ಅಧಿಕಾರಿಗಳು ತಪ್ಪದೇ ವಾರಕೊಮ್ಮೆ ಆಯಾ ತಾಲೂಕಿಗೆ ಭೇಟಿ ನೀಡಿ ವರದಿ ನೀಡಬೇಕು. ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಾಗಮಂಗಲ ತಾಲೂಕಿನಲ್ಲಿ ಎ.ಶಾನಬೋಗನಹಳ್ಳಿ, ಮುದ್ದನಹಳ್ಳಿ ಹಾಗೂ ಒಣಕೆರೆ ಗ್ರಾಮಗಳಿಗೆ ಮಳವಳ್ಳಿ ತಾಲೂಕಿನಲ್ಲಿ ಬಸವನಹಳ್ಳಿ ಗ್ರಾಮಕ್ಕೆ ಖಾಸಗಿ ಬೋರ್‌ವೆಲ್ ಮೂಲಕ ನೀರು ಒದಗಿಸಲಾಗುತ್ತಿದೆ ಎಂದರು.

ಕೆ.ಆರ್.ಪೇಟೆಯಲ್ಲಿ ಕೂಟಗಳ್ಳಿ ಟ್ಯಾಂಕರ್ ಮೂಲಕ ಕುಡಿಯುವ ನೀರು ನೀಡಲಾಗುತ್ತಿದೆ. ನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲ ಎಂದು ಸಂಬಂಧಿಸಿದ ತಹಶೀಲ್ದಾರ್ ಸಭೆಗೆ ಮಾಹಿತಿ ನೀಡಿದರು.

ನಂತರ ಡಿಸಿ ಕುಮಾರ್ ಮಾತನಾಡಿ, ಟ್ಯಾಂಕರ್‌ಗಳ ಮೂಲಕ ನೀರು ನೀಡುವಾಗ ನೀರು ಪಡೆಯುವ ಮೂಲ, ಟ್ಯಾಂಕರ್‌ಗಳ ಸ್ವಚ್ಛತೆ ಹಾಗೂ ಕುಡಿಯುವ ನೀರಿನ ಗುಣಮಟ್ಟವನ್ನು ಪರಿಶೀಲಿಸಿ ದೃಢೀಕರಣ ಪಡೆದ ನಂತರ ಸರಬರಾಜು ಮಾಡಬೇಕು ಎಂದು ಹೇಳಿದರು. ಜಿಲ್ಲೆಯಲ್ಲಿ ವಿಸಿ ಫಾರಂ ಅಧೀನದಲ್ಲಿರುವ 15 ಎಕರೆಯನ್ನು ಒಪ್ಪಂದ ಮಾಡಿಕೊಂಡು ಮೇವು ಬೆಳೆಯಲು ಯೋಜನೆ ಸಿದ್ಧಪಡಿಸಿದ್ದು, ಅನುಮೋದನೆ ಕೋರಿ ಸರ್ಕಾರಕ್ಕೆ ಸಲ್ಲಿಸಲಾಗುವುದು. ಸರ್ಕಾರ ಒಪ್ಪಿಗೆ ನೀಡಿದರೆ ವಿಸಿ ಫಾರಂ ವಿಜ್ಞಾನಿಗಳ ಸಹಕಾರ ಪಡೆದು ಇಲ್ಲಿ 750 ಟನ್ ಮೇವು ಬೆಳೆಯಬಹುದು ಎಂದು ಅಂದಾಜಿಸಲಾಗಿದೆ. ನೀರಾವರಿ ಹಾಗೂ ಫೆನ್ಸಿಂಗ್ ಇರುವ ತೋಟಗಾರಿಕೆ ಇಲಾಖೆಯ ಅಧೀನದ ಎರಡು ಎಕರೆ ಭೂಮಿಯನ್ನು ತಾಲೂಕುವಾರು ಗುರುತಿಸಿ ಮೇವು ಬೆಳೆಯಲು ಸಹ ಯೋಜನೆಯಲ್ಲಿ ಸೇರಿಸಲಾಗಿದೆ. ಬರ ಹಾಗೂ ಬೇಸಿಗೆಯಲ್ಲಿ ಸಾಮಾನ್ಯವಾಗಿ ಬೇಕಿರುವ ಔಷಧಗಳು, ಫ್ಲೂಯಿಡ್‌ಗಳು ಸೇರಿದಂತೆ ಆರೋಗ್ಯ ಇಲಾಖೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಎಸ್ಪಿ ಎನ್.ಯತೀಶ್, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಆನಂದ್, ಉಪವಿಭಾಗಾಧಿಕಾರಿ ಶಿವಮೂರ್ತಿ, ನಂದೀಶ್, ಪಶುವೈದ್ಯಾಧಿಕಾರಿ ಡಾ. ಸುರೇಶ್, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕಿ ಎಂ.ವಿ. ತುಷಾರಮಣಿ, ತಹಶೀಲ್ದಾರ್ ಶಿವಕುಮಾರ್ ಬಿರಾದರ್ ಇನ್ನಿತರಿದ್ದರು.

ಗ್ರಾಪಂ ಸದಸ್ಯರು, ಕಂದಾಯ ಅಧಿಕಾರಿಗಳ ಮಾತಿನ ಚಕಮಕಿ

ಕ್ರೀಡಾಂಗಣ ವಶಕ್ಕೆ ಪಡೆಯಲು ಬಂದ ಅಧಿಕಾರಿಗಳು ಬರಿಗೈಯಲ್ಲಿ ವಾಪಸ್

ಶ್ರೀರಂಗಪಟ್ಟಣ, ಜ.5–ಕೃಷ್ಣರಾಜಸಾಗರ ಗ್ರಾಮ ಪಂಚಾಯಿತಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣವನ್ನು ವಶಕ್ಕೆ ಪಡೆಯಲು ಬಂದ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಕ್ತ ದಾಖಲೆ ನೀಡುವಂತೆ ಆಗ್ರಹಿಸಿ ಗ್ರಾಪಂ ಸದಸ್ಯರು ಮಾತಿನ ಚಕಮಕಿ ನಡೆಸಿದರು. ಪರಿಣಾಮ ಅಧಿಕಾರಿಗಳು ಬರಿಗೈಯಲ್ಲಿ ವಾಪಸಾದರು.



ಕ್ರೀಡಾಂಗಣ ವಶಕ್ಕೆ ಪಡೆಯಲು ಬಂದ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಕೆಆರ್‌ಎಸ್ ಗ್ರಾಪಂ ಸದಸ್ಯರು ನಡುವೆ ಮಾತಿನ ಚಕಮಕಿ ನಡೆಯಿತು.

ಗ್ರಾಪಂನ ಅಮೃತ ಯೋಜನೆಯಡಿ ಅಂದಿನ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರ ಅನುದಾನ, 15ನೇ ಹಣಕಾಸು, ವರ್ಗ–1 ಹಾಗೂ ನರೇಗಾ ಯೋಜನೆಯಡಿ 40 ಲಕ್ಷ ರೂ. ವೆಚ್ಚದಲ್ಲಿ ಸ್ಥಳೀಯ ಗ್ರಾಪಂ ಸಾರ್ವಜನಿಕರ ಉದ್ದೇಶಕ್ಕಾಗಿ ಕೆಆರ್‌ಎಸ್‌ನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಿತ್ತು. ಆದರೆ, ಕಂದಾಯ ಇಲಾಖೆ ಜಾಗದಲ್ಲಿ ಅನಧಿಕೃತವಾಗಿ ಕ್ರೀಡಾಂಗಣ ನಿರ್ಮಿಸಲಾಗಿದೆ ಎಂದು ಉಪತಹಶೀಲ್ದಾರ್ ಸಾಕಮ್ಮ ನೇತೃತ್ವದಲ್ಲಿ ಗ್ರಾಮಕ್ಕೆ ಆಗಮಿಸಿದ ರಾಜಸ್ವ ನಿರೀಕ್ಷಕ ಬಸವರಾಜು, ಗ್ರಾಮಲೆಕ್ಕಿಗ ರಘು ಕ್ರೀಡಾಂಗಣದ ಕೀ ಪಡೆಯಲು ಮುಂದಾದರು. ಈ ವೇಳೆ ಅಧಿಕಾರಿಗಳು ಮತ್ತು ಗ್ರಾಪಂ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

ಉಪವಿಭಾಗಾಧಿಕಾರಿ ಮೌಖಿಕ ಆದೇಶದಂತೆ ಕಂದಾಯ ಇಲಾಖೆಯ ಜಾಗದಲ್ಲಿನ ನಿರ್ಮಿಸಿರುವ ಈ ಒಳಾಂಗಣ ಕ್ರೀಡಾಂಗಣ ಪರಿಶೀಲನೆ ಮಾಡಿ ಕೀ ಪಡೆಯಲು ಬಂದಿದ್ದು, ಪಿಡಿಓಗೂ ಮಾಹಿತಿ ನೀಡಿದ್ದೇವೆ. ನಾವು ಹಿರಿಯ ಅಧಿಕಾರಿಗಳ ಆದೇಶ ಪಾಲಿಸುತ್ತಿದ್ದು, ದಾಖಲೆಯ ಪ್ರಕಾರ ಕಂದಾಯ ಇಲಾಖೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣವಾಗಿರುವುದು ಕಂಡುಬಂದಿದೆ ಎಂದು ಕಂದಾಯ ಅಧಿಕಾರಿಗಳು ತಿಳಿಸಿದರು.

ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಗ್ರಾಪಂ ಸದಸ್ಯರು, ಕೆ.ಆರ್.ಸಾಗರ ಸೇರಿದಂತೆ ಸುತ್ತಮುತ್ತಲಿನ ಜನರ ಉಪಯೋಗಕ್ಕಾಗಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದೆ. ಇದನ್ನು ಕಾನೂನು ಚೌಕಟ್ಟಿನಲ್ಲಿ ನಿರ್ಮಿಸಲಾಗಿದೆ. ಖುದ್ದು ಜಿಲ್ಲಾಧಿಕಾರಿ ಬಂದು ದಾಖಲೆ ಪರಿಶೀಲಿಸಲಿ. ಯಾರೋ ದೂರು ನೀಡಿದರು ಎಂದು ಕ್ರೀಡಾಂಗಣ ವಶಕ್ಕೆ ಪಡೆಯುವುದು ಎಷ್ಟು ಸೂಕ್ತ? ಎಂದು ಗ್ರಾಪಂ ಮಾಜಿ ಅಧ್ಯಕ್ಷ ನರಸಿಂಹ ಆಕ್ರೋಶ ವ್ಯಕ್ತ ಪಡಿಸಿದರು. ಇದಕ್ಕೆ ಸದಸ್ಯರು ಧ್ವನಿಗೂಡಿಸಿದರು. ಈ ವೇಳೆ ಮಾತಿನ ಚಕಮಕಿ ನಡೆದ ಪರಿಣಾಮ ಅಧಿಕಾರಿಗಳು ಬರಿಗೈಯಲ್ಲಿ ವಾಪಸಾದರು. ಗ್ರಾಪಂ ಮಾಜಿ ಅಧ್ಯಕ್ಷ ನಾಗೇಂದ್ರಕುಮಾರ್, ಸದಸ್ಯ ಕೆ.ರಾಜು, ಮಾಜಿ ಸದಸ್ಯ ಶ್ರೀ ನಿವಾಸ್, ಪಿಡಿಓ ಬಸವರಾಜು, ಗ್ರಾಮಸ್ಥರು ಇದ್ದರು.

> ಸಾರ್ವಜನಿಕ ಸಭೆಯಲ್ಲಿ ಬಂದ ದೂರಿನ ಮೇರೆಗೆ ಸ್ಥಳ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿ, ಕೆ.ಆರ್. ಸಾಗರದ ಕಂದಾಯ ಇಲಾಖೆ ಜಾಗದಲ್ಲಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣವನ್ನು ಕಂದಾಯ ಇಲಾಖೆ ವಶಕ್ಕೆ ಪಡೆಯಲು ತಿಳಿಸಿದ್ದರು. ಅದರಂತೆ ಉಪತಹಶೀಲ್ದಾರ್ ನೇತೃತ್ವದಲ್ಲಿ ಅಧಿಕಾರಿಗಳು ಸ್ಥಳಕ್ಕೆ ಹೋಗಿದ್ದು, ಅಲ್ಲಿ ನಡೆದ ಘಟನೆ ಬಗ್ಗೆ ನನಗೆ ಮಾಹಿತಿ ನೀಡಿದ್ದಾರೆ. ಇದನ್ನು ಜಿಲ್ಲಾಧಿಕಾರಿಗೆ ತಿಳಿಸುತ್ತೇನೆ. ಅವರ ಆದೇಶದಂತೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. -ನಂದೀಶ್, ಉಪವಿಭಾಗಾಧಿಕಾರಿ, ಪಾಂಡವಪುರ

ಕಡವೆ ಮಾಂಸ ಮಾರಾಟಕ್ಕೆ ಯತ್ನಿಸಿದ್ದವನ ಬಂಧನ



ಕಡವೆ ಬೇಟೆಯಾಡಿದ್ದ ಆರೋಪಿಯನ್ನು ಬಂಧಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳು

ಹಲಗೂರು, ಜ.5–ಬಸವನಬೆಟ್ಟ ಅರಣ್ಯ ಪ್ರದೇಶದಲ್ಲಿ ಭೇಟೆಯಾಡಿದ್ದ ಕಡವೆ ಚರ್ಮ ಹಾಗೂ ಮಾಂಸ ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಶುಕ್ರವಾರ ಬಂಧಿಸಿದ್ದಾರೆ.

ಮಳವಳ್ಳಿ ತಾಲೂಕಿನ ಬಸವನಹಳ್ಳಿ ಗ್ರಾಮದ ಪ್ರಕಾಶ್ ಬಂಧಿತ ಆರೋಪಿ. ಗಸ್ತಿನಲ್ಲಿದ್ದ ವನ್ಯಜೀವಿ ಪಾಲಕರು, ಟಿವಿಎಸ್ ವಾಹನದಲ್ಲಿ ಅನುಮಾನಾಸ್ಪದವಾಗಿ ಬರುತ್ತಿದ್ದ ಈತನನ್ನು ತಡೆದು ತಪಾಸಣೆ ನಡೆಸಿದಾಗ ಕಡವೆ ಮಾಂಸ ಹಾಗೂ ಚರ್ಮ ಪತ್ತೆಯಾಗಿದೆ. ನಂತರ ಈತನನ್ನು ಬಂಧಿಸಿ, ಮಾಂಸ ಹಾಗೂ ಚರ್ಮವನ್ನು ವಶಕ್ಕೆ ಪಡೆದಿದ್ದಾರೆ.

ತನೊಂದಿಗೆ ಇನ್ನೂ ನಾಲ್ವರು ಕಡವೆ ಬೇಟೆಯಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ ಎಂದು ಕನಕಪುರ ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗೇಂದ್ರಪ್ರಸಾದ್ ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ರವಿ ಬುರ್ಜಿ, ಅರಣ್ಯ ಇಲಾಖೆಯ ಪ್ರವೀಣ್ ಕುಮಾರ್, ಪ್ರಕಾಶ್, ಸಿದ್ದರಾಮ ಪೂಜಾರಿ, ಮೌನೇಶ್, ಶ್ರೇಯಸ್, ಬಾಲರಾಜ್, ಮಾದಪ್ಪ ಮಂಜು ಹಾಜರಿದ್ದರು.

172 ದಿನದಲ್ಲಿ 5.73 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆದ ಪಿಎಸ್‌ಎಸ್‌ಕೆ



ಪಾಂಡವಪುರ ಪಿಎಸ್‌ಎಸ್‌ಕೆ ಕಾರ್ಖಾನೆಯ ಕಬ್ಬಿನ ಯಾರ್ಡ್‌ನಲ್ಲಿ ಎಂಆರ್‌ಎನ್ ಶುಗರ್ಸ್ ಕಂಪನಿ ವತಿಯಿಂದ ಕಬ್ಬಿನ ಗಾಡಿಗೆ ಪೂಜೆ ಸಲ್ಲಿಸಲಾಯಿತು.

ಪಾಂಡವಪುರ, ಜ.5–ಇಲ್ಲಿನ ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಯಲ್ಲಿ ಪ್ರಸಕ್ತ ಹಂಗಾಮಿನಲ್ಲಿ ಕೇವಲ 172 ದಿನಗಳಲ್ಲಿ 5.73 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆಯುವ ಮೂಲಕ ರೈತರ ಮೆಚ್ಚುಗೆ ಗಳಿಸಿದೆ.

ಶುಕ್ರವಾರ ಕಾರ್ಖಾನೆಯ ಕಬ್ಬಿನ ಯಾರ್ಡ್‌ನಲ್ಲಿ ಏರ್ಪಡಿಸಿದ್ದ ಪ್ರಸಕ್ತ ಹಂಗಾಮಿನ ಮುಕ್ತಾಯ ಸಮಾರಂಭದಲ್ಲಿ ಕಾರ್ಖಾನೆಯನ್ನು ಗುತ್ತಿಗೆಗೆ ಪಡೆದಿರುವ ಎಂಆರ್‌ಎನ್ ಶುಗರ್ಸ್ ಕಂಪನಿಯ ಜಿಎಂ(ಕೇನ್) ರವಿಕುಮಾರ್, ಕೊನೆಯ ಕಬ್ಬಿನ ಗಾಡಿಗೆ ಪೂಜೆ ಸಲ್ಲಿಸಿದರು. ನಂತರ ಮಾತನಾಡಿದ ಅವರು, ಎಂಆರ್‌ಎನ್ ಶುಗರ್ಸ್ ಕಂಪನಿ ಪಿಎಸ್‌ಎಸ್‌ಕೆ ಕಾರ್ಖಾನೆಯನ್ನು ಗುತ್ತಿಗೆಗೆ ಪಡದ ನಂತರದ ನಾಲ್ಕನೇ ಹಂತದ ಕಬ್ಬು ಅರೆಯುವ ಹಂಗಾಮು ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಬರ ಪರಿಸ್ಥಿತಿ ನಡುವೆಯೂ 5.73 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆಯುವ ಮೂಲಕ ಪ್ರಗತಿ ಸಾಧಿಸಿದೆ. 2020–21ನೇ ಹಂಗಾಮಿನಲ್ಲಿ 1.59 ಲಕ್ಷ, 2021–22ನೇ ಹಂಗಾಮಿನಲ್ಲಿ 4.59 ಲಕ್ಷ ಹಾಗೂ 2022–23ನೇ ಹಂಗಾಮಿನಲ್ಲಿ 5.79 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆಯಲಾಗಿದೆ ಎಂದು ತಿಳಿಸಿದರು.

ಎಂಆರ್‌ಎನ್ ಸಂಸ್ಥೆಯು ಈ ಭಾಗದ ರೈತರಿಗೆ ಸಕಾಲದಲ್ಲಿ ಕಬ್ಬು ಕಟಾವು ಹಾಗೂ ಬಿಲ್ ಪಾವತಿ ಮೂಲಕ ಉತ್ತಮ ಸೇವೆ ನೀಡುತ್ತಿದ್ದು, ಈಗಾಗಲೇ ಜ.31ರವರೆಗಿನ ಕಟಾವು ಹಾಗೂ ಸಾಗಾಣಿಕೆದಾರರ ಎಲ್ಲಾ ಬಿಲ್‌ಗಳನ್ನು ಪಾವತಿಸಲಾಗಿದೆ ಎಂದರು.

ಇದೇ ವೇಳೆ ಕೊನೆಯ ಎತ್ತಿನ ಗಾಡಿಯಲ್ಲಿ ಕಬ್ಬು ಸಾಗಿಸಿದ ರೈತರನ್ನು ಕಾರ್ಖಾನೆ ವತಿಯಿಂದ ಅಭಿನಂದಿಸಲಾಯಿತು. ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್. ಕೆಂಪೂಗೌಡ ಹಾಗೂ ಬೆಳೆಗಾರರು ಇದ್ದರು.

ಆಶಾರಾಣಿ ನಿಧನ



ಕೆ.ಆರ್.ಪೇಟೆ, ಡಿ.5–ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಮುಖಂಡ ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರ ಎ.ಎಸ್.ವಾಸು ಅವರ ಪತ್ನಿ ಆಶಾರಾಣಿ (45) ಅನಾರೋಗ್ಯದಿಂದ ಗುರುವಾರ ರಾತ್ರಿ ನಿಧನರಾದರು.

ಮೃತರು ಪತಿ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಅಗ್ರಹಾರಬಾಚಹಳ್ಳಿಯಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸಂತಾಪ: ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ಮಿತ್ರ ಫೌಂಡೇಷನ್ ಅಧ್ಯಕ್ಷ ವಿಜಯ್‌ರಾಮೇಗೌಡ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ. ಅಶೋಕ್, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

2024ರ ಟಿ20 ವಿಶ್ವಕಪ್ ವೇಳಾಪಟ್ಟಿ ಪ್ರಕಟ

ಜೂ.9ಕ್ಕೆ ಇಂಡೋ-ಪಾಕ್ ನಡುವೆ ಹೈವೋಲ್ಟೇಜ್ ಕದನ

ದೆಹಲಿ, ಜ.5– ಮುಂಬರುವ ಜೂನ್‌ನಲ್ಲಿ ನಡೆಯಲಿರುವ ಬಹುನಿರೀಕ್ಷಿತ 2024ರ ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿಗೆ ದಿನಗಣನೆ ಆರಂಭವಾಗಿದ್ದು, ಶುಕ್ರವಾರ ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್(ಐಸಿಸಿ) ವೇಳಾಪಟ್ಟಿ ಪ್ರಕಟಿಸಿದೆ.



ಗುಂಪುಗಳ ವಿವರ
ಗುಂಪು 'ಎ'– ಭಾರತ, ಪಾಕಿಸ್ತಾನ, ಐರ್ಲೆಂಡ್, ಕೆನಡಾ, ಯುಎಸ್‌ಎ.
ಗುಂಪು 'ಬಿ'– ಇಂಗ್ಲೆಂಡ್, ಆಸ್ಟ್ರೇಲಿಯಾ, ನಮೀಬಿಯಾ, ಸ್ಕಾಟ್ಲೆಂಡ್, ಓಮನ್.
ಗುಂಪು 'ಸಿ'– ನ್ಯೂಜಿಲೆಂಡ್, ಅಫ್ಘಾನಿಸ್ತಾನ, ವೆಸ್ಟ್ ಇಂಡೀಸ್, ಉಗಾಂಡಾ, ಪಿಎನ್‌ಜಿ.
ಗುಂಪು 'ಡಿ'– ದಕ್ಷಿಣ ಆಫ್ರಿಕಾ, ಬಾಂಗ್ಲಾದೇಶ, ನೆದರ್ಲ್ಯಾಂಡ್ಸ್, ಶ್ರೀಲಂಕಾ, ನೇಪಾಳ.

ಟಿ20 ವಿಶ್ವಕಪ್ ಟೂರ್ನಿ ವೆಸ್ಟ್ ಇಂಡೀಸ್ ಮತ್ತು ಅಮೆರಿಕದ ಆತಿಥ್ಯದಲ್ಲಿ ಜೂ.1 ರಿಂದ ಜೂ.29ರವರೆಗೆ ನಡೆಯಲಿದೆ. ಈ ಬಾರಿ 16 ರಿಂದ 20ಕ್ಕೆ ತಂಡಗಳ ಸಂಖ್ಯೆ ಹೆಚ್ಚಿಸಿದ್ದು, ಒಟ್ಟು 4 ಗುಂಪುಗಳಾಗಿ ವಿಂಗಡಿಸಲಾಗಿದೆ. ಸೂಪರ್–12 ಹಂತವನ್ನು ಸೂಪರ್–8ಗೆ ಇಳಿಸಲಾಗಿದ್ದು, ಅಗ್ರಸ್ಥಾನ ಪಡೆದ 4 ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ.

ಜೂ.1 ರಂದು ಯುಎಸ್‌ಎ ಮತ್ತು ಕೆನಾಡ ತಂಡಗಳು ಸೆಣಸುವ ಮೂಲಕ ಟೂರ್ನಿ ಅಧಿಕೃತವಾಗಿ ಆರಂಭವಾಗಲಿದ್ದು, ಜೂ.5 ರಂದು ಐರ್ಲೆಂಡ್ ವಿರುದ್ಧ ಆಡುವ ಮೂಲಕ ಭಾರತ ತನ್ನ ಅಭಿಯಾನ ಆರಂಭಿಸಲಿದೆ. ಬಹುನಿರೀಕ್ಷಿತ ಹೈವೋಲ್ಟೇಜ್ ಕದನದಲ್ಲಿ ಜೂ.9 ರಂದು ಪಾಕಿಸ್ತಾನ ವಿರುದ್ಧ ನ್ಯೂಯಾರ್ಕ್‌ನ ಅಂಗಳದಲ್ಲಿ ಭಾರತ ಸೆಣಸಲಿದೆ.

ಅಮೆರಿಕದಲ್ಲಿ ಒಟ್ಟು 3 ಹಾಗೂ ವೆಸ್ಟ್ ಇಂಡೀಸ್‌ನಲ್ಲಿ ಒಟ್ಟು 6 ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿದೆ. 20 ತಂಡಗಳ ಪೈಕಿ ಹತ್ತು ತಂಡಗಳು ಯುಎಸ್‌ಎನಲ್ಲಿ ತಮ್ಮ ಮೊದಲ ಪಂದ್ಯವನ್ನು ಆಡಲಿವೆ.

ವೆಸ್ಟ್ ಇಂಡೀಸ್‌ನಲ್ಲಿ 41, ಅಮೆರಿಕದಲ್ಲಿ 14 ಪಂದ್ಯಗಳು: ವೆಸ್ಟ್ ಇಂಡೀಸ್‌ನ 6 ನಗರಗಳಲ್ಲಿ ಒಟ್ಟು 41 ಪಂದ್ಯಗಳು ನಡೆಯಲಿದ್ದು, ಮೂರು ನಾಕೌಟ್ ಪಂದ್ಯಗಳು ನಡೆಯಲಿದೆ. ಇನ್ನುಳಿದ 14 ಪಂದ್ಯಗಳು ನ್ಯೂಯಾರ್ಕ್, ಫ್ಲೋರಿಡಾ ಮತ್ತು ಅಮೆರಿಕದ ಡಲ್ಲಾಸ್ ನಗರಗಳಲ್ಲಿ ನಡೆಯಲಿದೆ. ವೆಸ್ಟ್ ಇಂಡೀಸ್‌ನ ಟ್ರಿನಿಡಾಡ್, ಗಯಾನಾ, ಬಾರ್ಬಡೋಸ್, ಆಂಟಿಗುವಾ, ಸೇಂಟ್ ವಿನ್ಸೆಂಟ್ ಮತ್ತು ಸೇಂಟ್ ಲೂಸಿಯಾದಲ್ಲಿ ಪಂದ್ಯಗಳು ನಡೆಯಲಿದೆ.

ಪಂದ್ಯಾವಳಿ ಸ್ವರೂಪ: ಟೂರ್ನಿಯಲ್ಲಿ ಎಲ್ಲಾ ತಂಡಗಳು ಗುಂಪು ಹಂತದಲ್ಲಿ ತಲಾ 4 ಪಂದ್ಯಗಳನ್ನು ಆಡಲಿವೆ. ನಂತರ ಪ್ರತಿ ಗುಂಪಿನ ಅಗ್ರ 2 ತಂಡಗಳು ಕ್ವಾರ್ಟರ್ ಫೈನಲ್‌ಗೆ ತಲುಪುತ್ತವೆ. ಸೂಪರ್ 8ರ ನಾಕೌಟ್ ಹಂತದ ನಂತರ, 4 ತಂಡಗಳು ಸೆಮಿಫೈನಲ್ ಪ್ರವೇಶಿಸುತ್ತವೆ. ನಂತರ ಸೆಮಿಫೈನಲ್‌ನಲ್ಲಿ ಗೆದ್ದ 2 ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಟೂರ್ನಿಯಲ್ಲಿ ಒಟ್ಟು 55 ಪಂದ್ಯಗಳು ನಡೆಯಲಿವೆ. ಜೂ.1 ರಿಂದ 18ರವರೆಗೆ ಗುಂಪು ಹಂತದಲ್ಲಿ 40 ಪಂದ್ಯಗಳು ನಡೆಯಲಿವೆ. ಜೂ.19 ರಿಂದ 24 ರವರೆಗೆ ಸೂಪರ್ 8 ಪಂದ್ಯಗಳು ನಡೆಯಲಿವೆ. ಸೆಮಿಫೈನಲ್ ಪಂದ್ಯಗಳು ಜೂ.26 ಮತ್ತು 27 ರಂದು ನಡೆಯಲಿವೆ. ಜೂ.29 ರಂದು ಫೈನಲ್ ಪಂದ್ಯ ನಡೆಯಲಿದೆ

ಐಸಿಸಿ ಪುರುಷರ ಟಿ20 ವಿಶ್ವಕಪ್ ಸಂಪೂರ್ಣ ವೇಳಾಪಟ್ಟಿ

ಜೂ.1 – ಯುಎಸ್‌ಎ VS ಕೆನಡಾ, ದಲ್ಲಾಸ್
ಜೂ.2 – ವೆಸ್ಟ್ ಇಂಡೀಸ್ VS ಪಪುವಾ ನ್ಯೂ ಗಿನಿಯಾ, ಗಯಾನಾ
ಜೂ.2 – ನಮೀಬಿಯಾ VS ಒಮನ್, ಬಾರ್ಬಡೋಸ್
ಜೂ.3 – ಶ್ರೀಲಂಕಾ VS ದಕ್ಷಿಣ ಆಫ್ರಿಕಾ, ನ್ಯೂಯಾರ್ಕ್
ಜೂ.3 – ಅಫ್ಘಾನಿಸ್ತಾನ್ VS ಉಗಾಂಡಾ, ಗಯಾನಾ
ಜೂ.4 – ಇಂಗ್ಲೆಂಡ್ VS ಸ್ಕಾಟ್ಲೆಂಡ್, ಬಾರ್ಬಡೋಸ್
ಜೂ.4 – ನೆದರ್ಲೆಂಡ್ಸ್ VS ನೇಪಾಳ, ದಲ್ಲಾಸ್
ಜೂ.5 – ಭಾರತ VS ಐರ್ಲೆಂಡ್, ನ್ಯೂಯಾರ್ಕ್
ಜೂ.5 – ಪಪುವಾ ನ್ಯೂ ಗಿನಿಯಾ VS ಉಗಾಂಡಾ, ಗಯಾನಾ
ಜೂ.5 – ಆಸ್ಟ್ರೇಲಿಯಾ VS ಒಮನ್, ಬಾರ್ಬಡೋಸ್
ಜೂ.6 – ಯುಎಸ್‌ಎ VS ಪಾಕಿಸ್ತಾನ, ದಲ್ಲಾಸ್
ಜೂ.6 – ನಮೀಬಿಯಾ VS ಸ್ಕಾಟ್ಲೆಂಡ್, ಬಾರ್ಬಡೋಸ್
ಜೂ.7 – ಕೆನಡಾ VS ಐರ್ಲೆಂಡ್, ನ್ಯೂಯಾರ್ಕ್
ಜೂ.7 – ನ್ಯೂಜಿಲೆಂಡ್ VS ಅಫ್ಘಾನಿಸ್ತಾನ್, ಗಯಾನಾ
ಜೂ.7 – ಶ್ರೀಲಂಕಾ VS ಬಾಂಗ್ಲಾದೇಶ, ದಲ್ಲಾಸ್
ಜೂ.8 – ನೆದರ್ಲೆಂಡ್ಸ್ VS ದಕ್ಷಿಣ ಆಫ್ರಿಕಾ, ನ್ಯೂಯಾರ್ಕ್
ಜೂ.8 – ಆಸ್ಟ್ರೇಲಿಯಾ VS ಇಂಗ್ಲೆಂಡ್, ಬಾರ್ಬಡೋಸ್
ಜೂ.8 – ವೆಸ್ಟ್ ಇಂಡೀಸ್ VS ಉಗಾಂಡಾ, ಗಯಾನಾ
ಜೂ.9 – ಭಾರತ VS ಪಾಕಿಸ್ತಾನ, ನ್ಯೂಯಾರ್ಕ್
ಜೂ.9 – ಒಮನ್ VS ಸ್ಕಾಟ್ಲೆಂಡ್, ಆಂಟಿಗುವಾ
ಜೂ.10 – ದಕ್ಷಿಣ ಆಫ್ರಿಕಾ VS ಬಾಂಗ್ಲಾದೇಶ, ನ್ಯೂಯಾರ್ಕ್
ಜೂ.11 – ಪಾಕಿಸ್ತಾನ VS ಕೆನಡಾ, ನ್ಯೂಯಾರ್ಕ್
ಜೂ.11 – ಶ್ರೀಲಂಕಾ VS ನೇಪಾಳ, ಫ್ಲೋರಿಡಾ
ಜೂ.11 – ಆಸ್ಟ್ರೇಲಿಯಾ VS ನಮೀಬಿಯಾ, ಆಂಟಿಗುವಾ
ಜೂ.12 – ಯುಎಸ್‌ಎ VS ಭಾರತ, ನ್ಯೂಯಾರ್ಕ್
ಜೂ.12 – ವೆಸ್ಟ್ ಇಂಡೀಸ್ VS ನ್ಯೂಜಿಲೆಂಡ್, ಟ್ರಿನಿಡಾಡ್
ಜೂ.13 – ಇಂಗ್ಲೆಂಡ್ VS ಒಮನ್, ಆಂಟಿಗುವಾ
ಜೂ.13 – ಬಾಂಗ್ಲಾದೇಶ VS ನೆದರ್ಲೆಂಡ್ಸ್, ಸೇಂಟ್ ವಿನ್ಸೆಂಟ್
ಜೂ.13– ಅಫ್ಘಾನಿಸ್ತಾನ್ VS ಪಪುವಾ ನ್ಯೂ ಗಿನಿಯಾ, ಟ್ರಿನಿಡಾಡ್
ಜೂ.14 – ಯುಎಸ್‌ಎ VS ಐರ್ಲೆಂಡ್, ಫ್ಲೋರಿಡಾ
ಜೂ.14 – ದಕ್ಷಿಣ ಆಫ್ರಿಕಾ VS ನೇಪಾಳ, ಸೇಂಟ್ ವಿನ್ಸೆಂಟ್
ಜೂ.14– ನ್ಯೂಜಿಲೆಂಡ್ VS ಉಗಾಂಡಾ, ಟ್ರಿನಿಡಾಡ್
ಜೂ.15 – ಭಾರತ VS ಕೆನಡಾ, ಫ್ಲೋರಿಡಾ
ಜೂ.15 – ನಮೀಬಿಯಾ VS ಇಂಗ್ಲೆಂಡ್, ಆಂಟಿಗುವಾ
ಜೂ.15 – ಆಸ್ಟ್ರೇಲಿಯಾ VS ಸ್ಕಾಟ್ಲೆಂಡ್, ಸೇಂಟ್ ಲೂಸಿಯಾ
ಜೂ.16 – ಪಾಕಿಸ್ತಾನ VS ಐರ್ಲೆಂಡ್, ಫ್ಲೋರಿಡಾ
ಜೂ.16 – ಬಾಂಗ್ಲಾದೇಶ VS ನೇಪಾಳ, ಸೇಂಟ್ ವಿನ್ಸೆಂಟ್
ಜೂ.16 – ಶ್ರೀಲಂಕಾ VS ನೆದರ್ಲೆಂಡ್ಸ್, ಸೇಂಟ್ ಲೂಸಿಯಾ
ಜೂ.17 – ನ್ಯೂಜಿಲೆಂಡ್ VS ಪಪುವಾ ನ್ಯೂ ಗಿನಿಯಾ, ಟ್ರಿನಿಡಾಡ್
ಜೂ.17 – ವೆಸ್ಟ್ ಇಂಡೀಸ್ VS ಅಫ್ಘಾನಿಸ್ತಾನ್, ಸೇಂಟ್ ಲೂಸಿಯಾ
ಜೂ.19 – ಎ2 VS ಡಿ1, ಆಂಟಿಗುವಾ
ಜೂ.19 – ಬಿ1 VS ಸಿ2, ಸೇಂಟ್ ಲೂಸಿಯಾ
ಜೂ.20 – ಸಿ1 VS ಎ1, ಬಾರ್ಬಡೋಸ್
ಜೂ.20 – ಬಿ2 VS ಡಿ2, ಆಂಟಿಗುವಾ
ಜೂ.21 – ಬಿ1 VS ಡಿ1, ಸೇಂಟ್ ಲೂಸಿಯಾ
ಜೂ.21 – ಎ2 VS ಸಿ2, ಬಾರ್ಬಡೋಸ್
ಜೂ.22 – ಎ1 VS ಡಿ2, ಆಂಟಿಗುವಾ
ಜೂ.22 – ಸಿ1 VS ಬಿ2, ಸೇಂಟ್ ವಿನ್ಸೆಂಟ್
ಜೂ.23 – ಎ2 VS ಬಿ1, ಬಾರ್ಬಡೋಸ್
ಜೂ.23 – ಸಿ2 VS ಡಿ1, ಆಂಟಿಗುವಾ
ಜೂ.24 – ಬಿ2 VS ಎ1, ಸೇಂಟ್ ಲೂಸಿಯಾ
ಜೂ.24 – ಸಿ1 VS ಡಿ2, ಸೇಂಟ್ ವಿನ್ಸೆಂಟ್
ಜೂ.26 – ಸೆಮಿಫೈನಲ್ 1, ಗಯಾನಾ
ಜೂ.27 – ಸೆಮಿಫೈನಲ್ 2, ಟ್ರಿನಿಡಾಡ್
ಜೂ.29 – ಫೈನಲ್, ಬಾರ್ಬಡೋಸ್

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣದ ಔಚಿತ್ಯ: ಸೂಲಿಬೆಲೆ ಭಾಷಣ

ಮೈಸೂರು, ಜ.5– ಮೈಸೂರಿನ ಉತ್ತನಹಳ್ಳಿ ವಿಜಯಗಿರಿಯ ಭಾರತೀ ಯೋಗಧಾಮ ಸಂಸ್ಥೆಯ ಅರ್ಧ ಮಂಡಲೋತ್ಸವದ ಅಂಗವಾಗಿ ಶನಿವಾರ ಸಂಜೆ 6 ಗಂಟೆಗೆ ಸಂಸ್ಥೆಯ ಆವರಣದಲ್ಲಿ ವಿಶೇಷ ಉಪನ್ಯಾಸ ಏರ್ಪಡಿಸಿದ್ದು, ಯುವಾ ಬ್ರಿಗೇಡ್ ಸಂಸ್ಥಾಪಕ, ಚಿಂತಕ ಚಕ್ರವರ್ತಿ ಸೂಲಿಬೆಲೆ 'ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣದ ಔಚಿತ್ಯ' ಕುರಿತು ಮಾತನಾಡಲಿದ್ದಾರೆ. ಇದೇ ವೇಳೆ ವಿದ್ಯಾನಂದಿನೀ ಗುರುಕುಲದ ವೆಬ್‌ಸೈಟ್ ಲೋಕಾರ್ಪಣೆಗೊಳ್ಳಲಿದೆ. ಭಾರತೀ ಯೋಗಧಾಮದ ಸಂಸ್ಥಾಪಕ ಡಾ.ಕೆ.ಎಲ್. ಶಂಕರನಾರಾಯಣ ಜೋಯಿಸ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಕೋಳಿ ತೂಕದಲ್ಲಿ ವ್ಯತ್ಯಾಸ ಪ್ರಕರಣ ಸುಖಾಂತ್ಯ



ಪಾಂಡವಪುರ, ಜ.5– ತಾಲೂಕಿನ ಚಿಕ್ಕಬ್ಯಾಡರಹಳ್ಳಿಯ ಕೋಳಿ ಫಾರಂನಲ್ಲಿ ಕೋಳಿ ತುಂಬಲು ಬಂದಿದ್ದ ಖಾಸಗಿ ಚಿಕನ್ ಕಂಪನಿಯವರು ತೂಕದಲ್ಲಿ ಮೋಸ ಮಾಡಿದ್ದರೆನ್ನಲಾದ ಪ್ರಕರಣ ರಾಜೀ ಮೂಲಕ ಸುಖಾಂತ್ಯಗೊಂಡಿದೆ.

ತೂಕದ ಯಂತ್ರದಲ್ಲಿನ ತಾಂತ್ರಿಕ ದೋಷದಿಂದಾಗಿ ಕೋಳಿ ತೂಕದಲ್ಲಿ ವ್ಯತ್ಯಾಸವಾಗಿದೆ ಎಂದು ಪಾಂಡವಪುರ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪರಸ್ಪರ ಒಪ್ಪಿ, ರಾಜೀ ಮಾಡಿಕೊಳ್ಳಲಾಗಿದೆ.

ಚಿಕ್ಕಬ್ಯಾಡರಹಳ್ಳಿ ಗ್ರಾಮದ ಹನುಮಂತೇಗೌಡರು ತಮ್ಮ ಫಾರಂನ ಕೋಳಿಗಳನ್ನು ಮೈಸೂರಿನ ಖಾಸಗಿ ಚಿಕನ್ ಕಂಪನಿಗೆ ಮಾರಾಟ ಮಾಡುತ್ತಿದ್ದರು. ಎಂದಿನಂತೆ ಜ.1ರಂದು ಕಂಪನಿಯವರು ಕೋಳಿ ತುಂಬುತ್ತಿದ್ದಾಗ ತೂಕದಲ್ಲಿ ವ್ಯತ್ಯಾಸವಾಗಿದೆ ಎಂದು ಫಾರಂ ಮಾಲೀಕರು ಸಿಟ್ಟಿನಲ್ಲಿ ಕೋಳಿ ತುಂಬಲು ಬಂದಿದ್ದ ಸುನಿ ಹಾಗೂ ಸಿದ್ದು ಎಂಬುವವರನ್ನು ಮರಕ್ಕೆ ಕಟ್ಟಿ ಹಾಕಿದ್ದರು. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.

ಇದರಿಂದ ಮನನೊಂದ ಚಿಕನ್ ಕಂಪನಿ ನೌಕರರು, ಕೋಳಿ ಫಾರಂ ಮಾಲೀಕ ಹನುಮಂತೇಗೌಡರ ವಿರುದ್ಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಬಳಿಕ ಹನುಮಂತೇಗೌಡರೂ ಚಿಕನ್ ಕಂಪನಿ ವಿರುದ್ಧ ಪ್ರತಿದೂರು ದಾಖಲಿಸಿದ್ದರು. ನಂತರದಲ್ಲಿ ಎರಡೂ ಕಡೆಯವರು ಮಾತುಕತೆ ನಡೆಸಿದ ಸಂದರ್ಭದಲ್ಲಿ ತೂಕದ ಯಂತ್ರದಲ್ಲಿನ ತಾಂತ್ರಿಕ ದೋಷದಿಂದ ತೂಕದಲ್ಲಿ ವ್ಯತ್ಯಾಸವಾಗಿದೆ ಎಂದು ಪರಸ್ಪರ ಒಪ್ಪಿ ರಾಜೀ ಮಾಡಿಕೊಂಡಿದ್ದಾರೆ.



ಮೈಸೂರು ಜಿಲ್ಲಾ ಗಾಣಿಗರ ಸಂಘದ 2024ರ ಕ್ಯಾಲೆಂಡರ್ ಅನ್ನು ಶಾಸಕರಾದ ಜಿ.ಟಿ. ದೇವೇಗೌಡರು ಇತ್ತೀಚೆಗೆ ಬಿಡುಗಡೆ ಮಾಡಿದರು. ಈ ವೇಳೆ ಸಂಘದ ಅಧ್ಯಕ್ಷರಾದ ಎನ್.ಸಿ.ಉಮೇಶ, ಮುಖಂಡರಾದ ಬೆಲವತ್ತ ಶಿವಕುಮಾರ್, ಪ್ರಕಾಶ್, ಹೇಮಂತ್ ಕುಮಾರ್, ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಇತ್ತೀಚೆಗೆ ನಂಜನಗೂಡಿನ ಶ್ರೀವಿದ್ಯಾ ಸಂಗೀತ ಮತ್ತು ನೃತ್ಯ ಶಾಲೆಯ 39ನೇ ವಾರ್ಷಿಕೋತ್ಸವ ಸಂದರ್ಭದ ಅಂಗವಾಗಿ ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಡೆದ ಶ್ರೀ ವಿದ್ಯಾ ಕಲಾ ವೈಭವ ಕಾರ್ಯಕ್ರಮದಲ್ಲಿ ವಿಧೂಷಿ ಆರ್. ಶ್ರೀವಿದ್ಯಾ ಅವರು ಭರತನಾಟ್ಯ ಪ್ರದರ್ಶಿಸಿದರು.

ಬನ್ನೂರಲ್ಲಿ ಗೃಹಿಣಿ ಸೇರಿ ಮೂವರ ನಾಪತ್ತೆ



ಮಮತಾ



ಮಹದೇವಿ



ರಾಮಕೃಷ್ಣ

ಬನ್ನೂರು, ಜ.5–ಗೃಹಿಣಿ ಸೇರಿ ಮೂವರು ನಾಪತ್ತೆಯಾಗಿರುವ ಬಗ್ಗೆ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಈ ಠಾಣಾ ವ್ಯಾಪ್ತಿಯ ಗ್ರಾಮವೊಂದರ ಗೃಹಿಣಿ ಮಮತಾ ಎಂಬುವರು 2023ರ ನ.22ರಂದು ಮನೆಯಿಂದ ಹೋದವರು ಮತ್ತೆ ವಾಪಸ್ಸಾಗಿಲ್ಲ. ಇವರಿಗೆ ಅವರದೇ ಗ್ರಾಮದ ತಿಮ್ಮೇಗೌಡ ಎಂಬುವರ ಪುತ್ರ ರಘು ಎಂಬಾತನೊಂದಿಗೆ ಸ್ನೇಹವಿದ್ದು, ಆತನ ಮೇಲೆ ಅನುಮಾನವಿದೆ ಎಂದು ಮಮತಾ ಪತಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಮಮತಾ ಬಲಗೈ ಮೇಲೆ 'ಸಾನ್ವಿಕ್' ಎಂಬ ಹೆಸರಿನ ಹಚ್ಚೆ ಗುರುತು ಇದೆ.

ತಿ.ನರಸೀಪುರ ತಾಲೂಕು ವೀರಪ್ಪ ಒಡೆಯರ ದೊಡ್ಡಿ ಗ್ರಾಮದ ಕೆ.ಪಿ. ಮಹೇಶ್ ಎಂಬುವರ ತೋಟವನ್ನು ನೋಡಿಕೊಳ್ಳುತ್ತಿರುವ ನಾರಾಯಣ ಎಂಬುವರ ಪುತ್ರಿ ಮಹದೇವಿ 2023ರ ನ.26ರಂದು ಮನೆಯಿಂದ ಹೊರ ಹೋದವರು ಮತ್ತೆ ವಾಪಸ್ಸಾಗಿಲ್ಲ. ಈಕೆಗೆ ಯಳಂದೂರಿನ ಇಸ್ಮಾಯಿಲ್ ಎಂಬಾತನ ಜೊತೆ ಸ್ನೇಹವಿದ್ದು, ಅವನ ಮೇಲೆ ಅನುಮಾನವಿರುತ್ತದೆ ಎಂದು ಈಕೆಯ ತಂದೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ದೊಡ್ಡ ಮೂಲಗೂಡು ಗ್ರಾಮದ ನಿವಾಸಿ ಡಿ.ಎನ್. ರಾಮಕೃಷ್ಣ ಎಂಬುವರು 2023ರ ನ.1ರಂದು ಬೆಂಗಳೂರಿಗೆ ಹೋಗುವುದಾಗಿ ತಿಳಿಸಿ ಮನೆಯಿಂದ ಹೋದವರು ಈವರೆಗೂ ವಾಪಸ್ಸಾಗಿಲ್ಲ ಎಂದು ಅವರ ಪತ್ನಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಇರುವವರು ಬನ್ನೂರು ಠಾಣೆ ದೂರವಾಣಿ ಸಂಖ್ಯೆ 0822727562 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ಯುವಕ ನಾಪತ್ತೆ



ಫೈಜಲ್ ಅಹಮ್ಮದ್

ಮೈಸೂರು, ಜ.5–ಮೈಸೂರಿನ ಮಹಮ್ಮದ್ ಶೆಡ್ ಬ್ಲಾಕ್‌ನಲ್ಲಿ ಯುವಕ ನಾಪತ್ತೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಇಲ್ಲಿನ ನಿವಾಸಿ ಫೈಜಲ್ ಅಹಮ್ಮದ್(23) ಎಂಬಾತ ಡಿ.28ರಂದು ಮಧ್ಯಾಹ್ನ 1 ಗಂಟೆ ಸುಮಾರಿನಲ್ಲಿ ನಳ್ಳಿ (ಏಡಿ) ಹಿಡಿಯಲು ಹೋಗುವುದಾಗಿ ಮನೆಯಲ್ಲಿ ತಿಳಿಸಿ ಹೋದವನು ಈವರೆಗೂ ವಾಪಸ್ಸಾಗಿಲ್ಲ. ಈ ಸಂಬಂಧ ಈತನ ತಾಯಿ ನಗೀನಾ ಬಾನು ಜ.4ರಂದು ನೀಡಿದ ಪ್ರಕರಣವನ್ನು ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಈತನ ಎಡ ಮುಂಗೈನಲ್ಲಿ ಸುಟ್ಟ ಗಾಯದ ಗುರುತು ಇದ್ದು, ಈತನ ಬಗ್ಗೆ ಮಾಹಿತಿ ಇರುವವರು ಲಷ್ಕರ್ ಠಾಣೆ ದೂರವಾಣಿ ಸಂಖ್ಯೆ: 0821–2418307 ಅಥವಾ ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ: 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಮೈಸೂರಿನ ಪ್ರಾಚ್ಯವಸ್ತು ಸಂಶೋಧನಾಲಯಕ್ಕೆ ಅಮೇರಿಕಾದ ಕಾನ್ಸುಲ್ ಜನರಲ್ ಕ್ರಿಸ್ಟೋಫರ್ ಹಾಡ್ಜಸ್ ಭೇಟಿ

ಮೈಸೂರು, ಜ.5(ಬಿಎಲ್‌ಯು)– ಮೈಸೂರಿನ ಹೆಸರಾಂತ ಪ್ರಾಚ್ಯವಸ್ತು ಸಂಶೋಧನಾಲಯಕ್ಕೆ ಚೆನ್ನೈನಲ್ಲಿರುವ ಅಮೇರಿಕಾದ ಕಾನ್ಸುಲ್ ಜನರಲ್ ಕ್ರಿಸ್ಟೋಫರ್ ಡಬ್ಲ್ಯೂ ಹಾಡ್ಜಸ್ ಗುರುವಾರ ಭೇಟಿ ನೀಡಿ ನೂರಾರು ವರ್ಷಗಳ ಇತಿಹಾಸವಿರುವ ಪ್ರಾಚೀನ ಕಾಲದ ಹಸ್ತಪ್ರತಿಗಳನ್ನು ವೀಕ್ಷಿಸಿ ಆಶ್ಚರ್ಯ ವ್ಯಕ್ತಪಡಿಸಿದರು.

ನಗರದ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್‌ನಲ್ಲಿರುವ ಜಾನಪದ ವಸ್ತು ಸಂಗ್ರಹಾಲಯದ ಸಂರಕ್ಷಣಾ ಯೋಜನೆಗೆ ಅಮೇರಿಕಾ ಸರ್ಕಾರದ ಅಂಬಾಸಡರ್ಸ್ ಫಂಡ್ ಫಾರ್ ಕಲ್ಚರಲ್ ಪ್ರಿಸರ್ವೇಶನ್ ಅನುದಾನ ನೀಡುತ್ತಿರುವ ಹಿನ್ನೆಲೆ ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಒಪ್ಪಂದ ಮಾಡಿಕೊಂಡ ನಂತರ ಕ್ರಿಸ್ಟೋಫರ್ ಡಬ್ಲ್ಯೂ ಹಾಡ್ಜಸ್ ನೇರವಾಗಿ ಪ್ರಾಚ್ಯವಸ್ತು ಸಂಶೋಧನಾಲಯಕ್ಕೆ ಭೇಟಿ ನೀಡಿದ್ದರು.

ಸುಮಾರು 30 ನಿಮಿಷಗಳ ಕಾಲ ಪ್ರಾಚ್ಯವಸ್ತು ಸಂಶೋಧನಾಲಯದಲ್ಲಿ ಸಮಯ ಕಳೆದ ಕ್ರಿಸ್ಟೋಫರ್ ಹಾಡ್ಜಸ್, ಸಂಸ್ಕೃತ, ಕನ್ನಡ, ತಮಿಳು, ತೆಲುಗು ಸೇರಿದಂತೆ ಇತರೆ ಭಾಷೆಗಳಲ್ಲಿರುವ ಅಪರೂಪದ ಹಸ್ತಪ್ರತಿ, ತಾಳೆಗರಿಗಳನ್ನು ವೀಕ್ಷಿಸಿ ಅವುಗಳ ವೈವಿಧ್ಯಮ ವಿಚಾರಗಳ ಬಗ್ಗೆ ಸಮಗ್ರ ಮಾಹಿತಿ ಪಡೆದರು.





ಮೈಸೂರಿನ ಪ್ರಾಚ್ಯವಸ್ತು ಸಂಶೋಧನಾಲಯಕ್ಕೆ ಚೆನ್ನೈನಲ್ಲಿರುವ ಅಮೇರಿಕಾದ ಕಾನ್ಸುಲ್ ಜನರಲ್ ಕ್ರಿಸ್ಟೋಫರ್ ಡಬ್ಲ್ಯೂ ಹಾಡ್ಜಸ್ ಗುರುವಾರ ಭೇಟಿ ನೀಡಿ ಹಸ್ತಪ್ರತಿಗಳನ್ನು ವೀಕ್ಷಿಸಿದರು. ಪ್ರಾಚ್ಯವಸ್ತು ಸಂಗ್ರಹಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ಅವರನ್ನು ಚಿತ್ರದಲ್ಲಿ ಕಾಣಬಹುದು.

ಪ್ರಾಚ್ಯವಸ್ತು ಸಂಶೋಧನಾಲಯದಲ್ಲಿರುವ ಹಸ್ತಪ್ರತಿ ಹಾಗೂ ತಾಳೆಗರಿಗಳು, ತತ್ವಶಾಸ್ತ್ರ, ಧರ್ಮ, ಸಾಹಿತ್ಯ, ಭಾಷಾಶಾಸ್ತ್ರ, ಜ್ಯೋತಿಷ್ಯ, ಔಷಧ, ಜ್ಞಾನವೃದ್ಧಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತದೆ ಎಂದು ಪ್ರಾಚ್ಯವಸ್ತು ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ಅವರು ಕ್ರಿಸ್ಟೋಫರ್ ಹಾಡ್ಜಸ್ ಅವರಿಗೆ ವಿವರ ನೀಡಿದರು.

ಪ್ರಾಚ್ಯವಸ್ತು ಸಂಶೋಧನಾಲಯದ ಹಸ್ತಪ್ರತಿ, ತಾಳೆಗರಿ ಸೇರಿದಂತೆ ಎಲ್ಲಾ ಬರಹಗಳನ್ನು ಬೆಂಗಳೂರಿನ ಮಿಥಿಕ್ ಸೊಸೈಟ್ ಜೊತೆ ಸೇರಿ ಡಿಜಿಟಲೀಕರಣ ಮಾಡುವ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ರಾಜ್ಯಶಾಸ್ತ್ರ ಹಾಗೂ ಅರ್ಥಶಾಸ್ತ್ರ ವಿಷಯದ ಬಗ್ಗೆ ಕ್ರಿಸ್ಟೋಫರ್ ಹಾಡ್ಜಸ್ ತಮಗಿರುವ ಆಸಕ್ತಿ ಬಗ್ಗೆ ತಿಳಿಸಿದಾಗ ಕೌಟಿಲ್ಯನ ಅರ್ಥಶಾಸ್ತ್ರದ ಬಗ್ಗೆ ಕೂಡ ಈ ವೇಳೆ ವಿವರ ನೀಡಲಾಯಿತು.

ಪ್ರಾಚ್ಯವಸ್ತು ಸಂಶೋಧನಾಲಯದ ಬರಹಗಳನ್ನು ವೀಕ್ಷಣೆ ಮಾಡಿ ಪ್ರಶಂಸೆ ವ್ಯಕ್ತಪಡಿಸಿದ ಕ್ರಿಸ್ಟೋಫರ್ ಹಾಡ್ಜಸ್, ಭಾರತದ ಇತಿಹಾಸ ತಿಳಿದುಕೊಳ್ಳುವ ಅತೀವ ಆಸಕ್ತಿ ವ್ಯಕ್ತಪಡಿಸಿದರು.

ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಬರೆದಿರುವ ಸ್ವಿ ನಿಧಿ ತತ್ವ ನಿಧಿಯ 9 ಸಂಪುಟಗಳಲ್ಲಿ 4ನೇ ಸಂಪುಟವನ್ನು ಕ್ರಿಸ್ಟೋಫರ್ ಹಾಡ್ಜಸ್ ಅವರಿಗೆ ಮೈಸೂರು ಭೇಟಿಯ ನೆನಪಿಗಾಗಿ ನೀಡಲಾಯಿತು. ಕನ್ನಡದಲ್ಲಿರುವ ಈ ಪುಸ್ತಕವನ್ನು ಇಂಗ್ಲಿಷ್‌ಗೆ ಭಾಷಾಂತರಿಸಲಾಗಿದ್ದು, ಇದನ್ನು ಪೂರ್ಣವಾಗಿ ಓದುವುದಾಗಿ ಕ್ರಿಸ್ಟೋಫರ್ ಹಾಡ್ಜೆಸ್ ತಿಳಿಸಿದರು.

ಪ್ರಾಚ್ಯವಸ್ತು ಸಂಶೋಧನಾಲಯದ ಉಪ ನಿರ್ದೇಶಕಿ ಪಾರ್ವತಿ, ಸಂಶೋಧಕ ಡಾ.ರೋಹಿತ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಅಯೋಧ್ಯೆ ಶ್ರೀರಾಮಮಂದಿರಕ್ಕೆ ತಿರುಮಲ ದೇಗುಲದಿಂದ 1 ಲಕ್ಷ ಲಾಡು ಪೂರೈಕೆ



ಅಯೋಧ್ಯೆ: ಇನ್ನು ಕೆಲವೇ ದಿನಗಳಲ್ಲಿ ಉದ್ಘಾಟನೆಯಾಗಲಿರುವ ಅಯೋಧ್ಯೆಯ ಶ್ರೀರಾಮಮಂದಿರಕ್ಕೆ ಜಗತ್ ವಿಖ್ಯಾತ ಪವಿತ್ರ ಯಾತ್ರಾ ತಾಣ ತಿರುಪತಿ ತಿರುಮಲ ದೇಗುಲದಿಂದ ಸುಮಾರು 1 ಲಕ್ಷ ಲಾಡು ಪ್ರಸಾದ ವಿತರಣೆ ಮಾಡಲಾಗುತ್ತಿದೆ.

ತಿರುಪತಿಯ ಶ್ರೀ ವೆಂಕಟೇಶ್ವರ ದೇವಸ್ಥಾನದ ಅಧಿಕೃತ ಪಾಲಕರಾದ ತಿರುಮಲ ತಿರುಪತಿ ದೇವಸ್ಥಾನಮ್ (ಟಿಟಿಡಿ) ಜನವರಿ 22 ರಂದು ಅಯೋಧ್ಯೆಯಲ್ಲಿ ರಾಮ ಮಂದಿರದ ಪ್ರತಿಷ್ಠಾಪನೆಗೆ ಒಂದು ಲಕ್ಷ ಲಡ್ಡುಗಳನ್ನು ಪೂರೈಸಲಿದೆ ಎಂದು ಶುಕ್ರವಾರ ಇಲ್ಲಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಯೋಧ್ಯೆಗೆ ಪೂರೈಕೆಯಾಗಲಿರುವ ಲಾಡು ತಲಾ 25 ಗ್ರಾಂ ತೂಕವಿರಲಿದ್ದು, ಕಾರ್ಯಕ್ರಮಕ್ಕೆ ಆಗಮಿಸಲಿರುವ ಭಕ್ತರಿಗೆ ವಿತರಿಸಲು ಉದ್ದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆಯುವ ಶ್ರೀರಾಮ ಪ್ರಾಣ ಪ್ರತಿಷ್ಠಾ ಸಮಾರಂಭದಲ್ಲಿ ಪ್ರವಾಸಿಗರಿಗೆ ವಿತರಿಸಲು ತಲಾ 25 ಗ್ರಾಂ ತೂಕದ ಒಂದು ಲಕ್ಷ ಲಡ್ಡುಗಳನ್ನು ನೀಡಲು ಟಿಟಿಡಿ ಒಪ್ಪಿಗೆ ನೀಡಿದೆ ಎಂದು ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಎ ವಿ ಧರ್ಮಾ ರೆಡ್ಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಯನಿರ್ವಾಹಕ ಅಧಿಕಾರಿ ಭಕ್ತರೊಂದಿಗೆ 'ಡಯಲ್ ಯುವರ್ ಇಒ' ಸಂವಾದ ಕಾರ್ಯಕ್ರಮದಲ್ಲಿ ಅವರು ಈ ಘೋಷಣೆ ಮಾಡಿದರು. ಇದೇ ವೇಳೆ ದೇವಾಲಯಕ್ಕೆ ಭೇಟಿ ನೀಡುವಾಗ ಅರ್ಜಿತ ಸೇವೆಗಳು, ದೇಣಿಗೆಗಳು, ದರ್ಶನ ಮತ್ತು ಕೊಠಡಿಗಳನ್ನು ಕಾಯ್ದಿರಿಸಲು ttdevasthanams.ap.gov.in ಅನ್ನು ಮಾತ್ರ ಬಳಸಬೇಕೆಂದು ಅವರು ಭಕ್ತರಿಗೆ ತಿಳಿಸಿದರು.

ನಟನದಲ್ಲಿ ಮತ್ತೆ 'ಮಹಾಮಾಯಿ'

ಮೈಸೂರು, ಜ.5–ಮೈಸೂರಿನ ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ತನ್ನ ಚಟುವಟಿಕೆಯ ಭಾಗವಾಗಿ, ಜ.7ರಂದು ಸಂಜೆ 6.30ಕ್ಕೆ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ 2023–24ನೇ ಸಾಲಿನ ರಂಗಭೂಮಿ ಡಿಪ್ಲೋಮಾ ವಿದ್ಯಾರ್ಥಿಗಳ ಮೊದಲ ಅಭ್ಯಾಸಿ ಪ್ರಯೋಗವಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಚಂದ್ರಶೇಖರ ಕಂಬಾರ ಅವರ 'ಮಹಾಮಾಯಿ' ನಾಟಕವು ಪ್ರದರ್ಶನಗೊಳ್ಳಲಿದೆ. ನಾಟಕದ ಸಂಗೀತ, ವಿನ್ಯಾಸ ಮತ್ತು ನಿರ್ದೇಶನ ನಟನ ರಂಗಶಾಲೆಯ ಪ್ರಾಂಶುಪಾಲರಾದ ಮೇಘ ಸಮೀರ ಅವರದ್ದು. ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದಲ್ಲಿ ನಾಟಕವು ಪ್ರದರ್ಶನಗೊಳ್ಳಲಿದೆ. ಮಾಹಿತಿಗಾಗಿ 72595 37777, 9480468327, 98455 95505 ಸಂಪರ್ಕಿಸಬಹುದು.

ಕಿಯೋಸ್ಕ್ ಕಬ್ಬಿಣದ ಪೆಟ್ಟಿಗೆ ದುರುಪಯೋಗ: ಶಿಸ್ತು ಕ್ರಮ

ಮೈಸೂರು, ಜ.5– ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ, ಆಧಾರ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವಿನೊಂದಿಗೆ ಕಿಯೋಸ್ಕ್ ಕಬ್ಬಿಣದ ಪೆಟ್ಟಿಗೆಗಳನ್ನು ವಿತರಿಸಲಾಗಿರುತ್ತದೆ. ಪೆಟ್ಟಿಗೆಗಳ ಮೇಲೆ ಇಲಾಖೆಯ ಹೆಸರು ಮತ್ತು ಪಡೆದ ವರ್ಷವನ್ನು ನಮೂದಿಸುವುದು ಖಡ್ಡಾಯವಾಗಿರುತ್ತದೆ. ವಿಕಲಚೇತನರಲ್ಲದ ಸಾಮಾನ್ಯ ಸಾರ್ವಜನಿಕರು ಇಲಾಖೆಯಿಂದ ಪಡೆಯದೆ ಇರುವ ಪೆಟ್ಟಿಗೆಗಳನ್ನು ಸ್ವಯಂ ತಯಾರಿಸಿಕೊಂಡು ಇಲಾಖೆಯ ಹೆಸರಿನಲ್ಲಿ ಎಲ್ಲೆಂದರಲ್ಲಿ ಪೆಟ್ಟಿಗೆಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದು ಕಂಡು ಬಂದಿದ್ದು, ಇದು ಕಾನೂನು ಬಾಹಿರವಾಗಿರುತ್ತದೆ. ಆದ್ದರಿಂದ ಇಲಾಖೆಯ ಹೆಸರಿನಲ್ಲಿ ವಿಕಲಚೇತನರಲ್ಲದ ಸಾಮಾನ್ಯ ಸಾರ್ವಜನಿಕರು ಪೆಟ್ಟಿಗೆಗಳನ್ನು ಇಟ್ಟುಕೊಂಡಿರುವರಿಗೆ ಕಾನೂನು ರೀತ್ಯ ಶಿಸ್ತು ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಡಾ.ಪರಮೇಶ್ವರ್‌ಗೆ ಮುಖ್ಯಮಂತ್ರಿ ಗದ್ದುಗೆ

ನಿವಾಸದಲ್ಲಿ ನಿನ್ನೆ ರಾತ್ರಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಸಚಿವರು ಸಭೆ ನಡೆಸಿ ಇದು ಸೇರಿದಂತೆ ಕೆಲವು ನಿರ್ಣಯಗಳನ್ನು ಕೈಗೊಂಡಿದ್ದಾರೆ. ಜಾರಕಿಹೊಳಿ ಅವರು ಕರೆದಿದ್ದ ಸಭೆಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಮಹದೇವಪ್ಪ, ಸಹಕಾರಿ ಸಚಿವ ರಾಜಣ್ಣ ಸೇರಿದಂತೆ ಇನ್ನು ಕೆಲವು ಸಚಿವರು ಭಾಗವಹಿಸಿದ್ದರು. ತದನಂತರ ಶಾಸಕರು ಪಂಚತಾರಾ ಹೋಟೆಲ್‌ನಲ್ಲಿ ನಡೆದ ಔತಣಕೂಟದಲ್ಲಿ ಪಾಲ್ಗೊಂಡಿದ್ದರು. ಬೆಳಗಾವಿ ಜಿಲ್ಲೆ ಪೊಲೀಸ್ ವರಿಷ್ಠಾಧಿಕಾರಿ ಬದಲಾವಣೆ, ಅಲ್ಲಿನ ಡಿಸಿಸಿ ಬ್ಯಾಂಕ್ ವಿಚಾರ ಸೇರಿದಂತೆ ರಾಜ್ಯದ ವಿವಿಧೆಡೆ ಶಿವಕುಮಾರ್ ಹಸ್ತಕ್ಷೇಪ ಮಾಡುತ್ತಿರುವ ಬಗ್ಗೆಯೂ ಪ್ರಸ್ತಾಪಗೊಂಡಿತು. ಶಿವಕುಮಾರ್ ಓಟಕ್ಕೆ ಕಡಿವಾಣ ಹಾಕಲು ಲೋಕಸಭಾ ಚುನಾವಣೆಗೂ ಮುನ್ನ ವೀರಶೈವ, ಪರಿಶಿಷ್ಟ ಜಾತಿ ಹಾಗೂ ವರ್ಗಕ್ಕೆ ಸೇರಿದ ಹಿರಿಯ ಸಚಿವರಿಗೆ ಬಡ್ತಿ ನೀಡಿ ಮೂವರು ಉಪ ಮುಖ್ಯಮಂತ್ರಿ ಸ್ಥಾನ ಕಲ್ಪಿಸಬೇಕು. ಈ ಸಮುದಾಯಕ್ಕೆ ಸೇರಿದವರನ್ನು ಉಪಮುಖ್ಯಮಂತ್ರಿ ಮಾಡುವುದರಿಂದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚು ಸ್ಥಾನ ಗಳಿಸಲು ಸಾಧ್ಯವಾಗುತ್ತದೆ. ಇದನ್ನು ವರಿಷ್ಠರಿಗೆ ಮನವರಿಕೆ ಮಾಡಿಕೊಡಲು, ದೆಹಲಿಗೆ ಹೋಗಲು ಸಭೆ ತೀರ್ಮಾನಿಸಿದೆ. ಅಲ್ಲದೆ, ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಬಿಂಬಿಸಲು ಈಗಿನಿಂದಲೇ ಕಸರತ್ತು ಆರಂಭಿಸಲು ನಿರ್ಧಾರ ಕೈಗೊಳ್ಳಲಾಗಿದೆ.

ಮೂವರು ಡಿಸಿಎಂ ಮಾಡುವ ಪ್ರಸ್ತಾಪ ಮಂಡಿಸ್ತೇವೆ!

ಎಸ್‌ಟಿ ಸಮುದಾಯಕ್ಕೆ ಸೇರಿದ ಸಚಿವರು ಮತ್ತು ಶಾಸಕರು ಊಟಕ್ಕೆ ಸೇರಿದ್ದೆವು, ಅಲ್ಲಿ ರಾಜಕೀಯವೂ ಚರ್ಚೆ ಆಯಿತು. ಕೆಲವು ಹೇಳುವಂತಹ ವಿಚಾರವೂ ಇವೆ, ಕೆಲವು ಹೇಳಲಾಗದ್ದು ಇವೆ. ಸೂಕ್ತ ಕಾಲದಲ್ಲಿ ಹೇಳಲಾಗದ ರಾಜಕಾರಣ ವಿಚಾರ ತಿಳಿಸುವುದಾಗಿ ಮಾರ್ಮಿಕವಾಗಿ ನುಡಿದರು. ಉಪಮುಖ್ಯಮಂತ್ರಿ ಆಯ್ಕೆಗೆ ವರಿಷ್ಠರನ್ನು ಭೇಟಿ ಮಾಡಿ ನಮ್ಮ ಅಭಿಪ್ರಾಯ ಹೇಳುವ ತೀರ್ಮಾನ ಕೈಗೊಂಡಿದ್ದೇವೆ.

ಡಿಸಿಎಂಗಳ ಸೃಷ್ಟಿಯಿಂದ ಕಾಂಗ್ರೆಸ್‌ಗೆ ಲಾಭ ಆಗುತ್ತದೆ. ಎಸ್‌ಸಿ ಮತ್ತು ಎಸ್‌ಟಿ ಸಮುದಾಯವನ್ನು ನಮ್ಮ ಬಳಿಯೇ ಉಳಿಸಿಕೊಳ್ಳಲು ಈ ಸೂತ್ರ ಅನಿವಾರ್ಯ. ಒಂದೇ ಡಿಸಿಎಂ ಹುದ್ದೆ ಇರಬೇಕು ಎಂಬುದು ಶಿವಕುಮಾರ್ ಅಭಿಪ್ರಾಯ ಇರಬಹುದು, ಆದರೆ, ಎಲ್ಲರ ಅಭಿಪ್ರಾಯ ಪಡೆದುಕೊಂಡು ಮಾಡಬೇಕಾಗುತ್ತದೆ. ಹೆಚ್ಚು ಸ್ಥಾನ ಗೆಲ್ಲಬೇಕು ಎನ್ನುವ ಕಾರಣಕ್ಕೆ ಲೋಕಸಭಾ ಚುನಾವಣೆಗೆ ಸಚಿವರನ್ನು ಕಣಕ್ಕಿಳಿಸುವ ನಿರ್ಧಾರಕ್ಕೆ ವರಿಷ್ಠರು ಬಂದರೆ ಅದಕ್ಕೆ ಎಲ್ಲರೂ ತಲೆಬಾಗಲೇಬೇಕಾಗುತ್ತದೆ ಎಂದರು.

ಕಾಂಗ್ರೆಸ್ ಅಂತ್ಯ ಕಾಣುವುದು ನಿಶ್ಚಿತ

ಅವಮಾನಿಸಿದ್ದೀರಿ. ನಾನು ಇಂದು ನಿಮಗೆ ಹೇಳುತ್ತಿದ್ದೇನೆ, ಕರ್ನಾಟಕದಲ್ಲಿ ಕಾಂಗ್ರೆಸ್ ಅನ್ನು ಸೋಲಿಸಬೇಕು ಮತ್ತು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ ನೇತೃತ್ವದಲ್ಲಿ ಕಾಂಗ್ರೆಸ್ ಯುಗ ಅಂತ್ಯವಾಗಬೇಕು ಎಂದು ತಾವು ನಿರ್ಧರಿಸಿರುವುದಾಗಿ ದೇವೇಗೌಡರು ತಿಳಿಸಿದರು. ಇತ್ತೀಚಿಗೆ ಮುಕ್ತಾಯಗೊಂಡ ಐದು ರಾಜ್ಯಗಳ ಚುನಾವಣೆಗೆ ಅವರು ಎಷ್ಟು ಹಣ ತೆಗೆದುಕೊಂಡು ಹೋಗಿದ್ದಾರೆ? ಡಿಸಿಎಂ ಡಿಕೆ ಶಿವಕುಮಾರ್ ಎಷ್ಟು ಹಣ ಸಾಗಿಸಿದ್ದಾರೆ, ಎಷ್ಟು ಹಣ ಸೀಜ್ ಆಗಿದೆ ಎಂದು ಪ್ರಶ್ನಿಸಿದ ದೇವೇಗೌಡರು, ಈ ಬಗ್ಗೆ ಚುನಾವಣೆ ಆಯೋಗ ಗಮನ ಹರಿಸಿದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಇಡೀ ದೇಶಕ್ಕೆ ಬುದ್ಧಿ ಹೇಳುತ್ತಾರೆ. ಅವರಿಗೆ ಅಕ್ರಮ ತಡೆಯಲು ಶಕ್ತಿ ಇದೆಯಾ? ಟಿಪ್ಪು ಸುಲ್ತಾನ್ ವಿಚಾರ ಬಿಟ್ಟರೆ ಈ ದೇಶದಲ್ಲಿ ಬೇರೇನೂ ಇಲ್ವಾ ಎಂದು ಅವರು ಪ್ರಶ್ನಿಸಿದರು.

ಸಂಸದ ಪ್ರತಾಪ್ ಸಿಂಹ ಪರ ಬ್ಯಾಟ್

ಅಮಾನತು ಮಾಡಿದರು. ಅನುಮತಿ ಇಲ್ಲದೆ ಮರ ಕಡಿದಿರುವ ಬಗ್ಗೆ ತಹಸೀಲ್ದಾರರಿಂದ ವರದಿ ಸರ್ಕಾರಕ್ಕೆ ಹೋಗಿತ್ತಾ ಎಂದು ಪ್ರಶ್ನಿಸಿದ ಅವರು, ಮನೆ ನವೀಕರಣ ಸಂದರ್ಭದಲ್ಲಿ ಮರ ಕಡಿದಿರುವ ಬಗ್ಗೆ ವರದಿ ನೀಡಿದ್ದಾರೆ. ಅಲ್ಲಿ ಮರ ಕಡಿದವರು ಜಯಮ್ಮ ಮತ್ತು ರವಿ ಎನ್ನುವವರು, ಅದಕ್ಕೂ ವಿಕ್ರಮ್ ಸಿಂಹಗೂ ಏನೂ ಸಂಬಂಧವಿಲ್ಲ. ಜಯಮ್ಮ, ರವಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಮುಖ್ಯಮಂತ್ರಿ ಹೇಳಿದ ನಂತರ ವಿಕ್ರಮ್ ಸಿಂಹ ವಿರುದ್ಧ ಎ–3 ಪ್ರಕರಣ ದಾಖಲಿಸಿದ್ದಾರೆ. ಜಯಮ್ಮ ಎನ್ನುವವರು ತಮ್ಮ ಮನೆಯನ್ನು ವಿಕ್ರಮ್ ಸಿಂಹ ಅವರಿಗೆ 2027ರವರೆಗೆ ಲೀಸ್ ಮಾಡಿಕೊಟ್ಟಿದ್ದಾರೆ. ಭೂಮಿ ಮತ್ತು ಮನೆಯ ಒಡೆತನ ಜಯಮ್ಮಗೆ ಸೇರಿದ್ದು, ಅಲ್ಲಿ ವಿಕ್ರಮ್‌ಗೆ ಯಾವುದೇ ಹಕ್ಕು ಇರುವುದಿಲ್ಲ, ಅಲ್ಲಿನ ಅಧಿಕಾರಿಗಳು ಮುಖ್ಯಮಂತ್ರಿ ಅವರಿಗೆ ತಪ್ಪು ವರದಿ ನೀಡಿ ಬಲಿಯಾಗಿಸಿದ್ದಾರೆ. ಮುಖ್ಯಮಂತ್ರಿ ಅವರನ್ನು ಓಲೈಸಿಕೊಳ್ಳಲು ಅಧಿಕಾರಿಗಳು ಮಾಡಿದ ತಪ್ಪಿಗೆ ನ್ಯಾಯಾಲಯದಲ್ಲೂ ಅವರಿಗೆ ಛೀಮಾರಿ ಆಗಿದೆ. ಮಂಡ್ಯದಲ್ಲಿ ಆಡಳಿತ ಪಕ್ಷದ ವಿಧಾನ ಪರಿಷತ್ ಸದಸ್ಯರು ತಾವೇ ನಿಂತು ಮರ ಕಡಿಸಿದರೂ ಅವರ ವಿರುದ್ಧ ಪ್ರಕರಣ ದಾಖಲಾಗಲಿಲ್ಲ. ಪ್ರತಾಪ್ ಸಿಂಹ ಅವರನ್ನು ಪ್ರಕರಣದಲ್ಲಿ ಸಿಲುಕಿಸಲು ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಂಡಿದೆ ಎಂದು ದೂರಿದರು.

ರೂ. 105 ಕೋಟಿ ಬಿಡುಗಡೆ

ಪಾವತಿಸಲಾಗುತ್ತದೆ. ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಕಡ್ಡಾಯ ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಲಾಗಿದೆ. ರಾಜ್ಯದಲ್ಲಿ ಒಟ್ಟು 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. 18171.44 ಕೋಟಿ ಪರಿಹಾರ ನೆರವು ನೀಡುವಂತೆ ಕೇಂದ್ರಕ್ಕೆ ಮನವಿ ಮಾಡಲಾಗಿತ್ತು. ಈಗಾಗಲೇ ಕೇಂದ್ರ ತಂಡ ರಾಜ್ಯದಲ್ಲಿ ಪ್ರವಾಸ ಕೈಗೊಂಡು ಬರ ಸಮೀಕ್ಷೆ ನಡೆಸಿತ್ತು. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ತೆರಳಿ ಪ್ರಧಾನಿ ಯವರನ್ನು ಭೇಟಿ ಮಾಡಿ, ಪರಿಹಾರ ಕಲ್ಪಿಸುವಂತೆ ಮನವಿ ಮಾಡಿದ್ದರು.

ಜ.12ಕ್ಕೆ ಗ್ರೀನ್ ಬರ್ಡ್ಸ್ ಸಂಸ್ಥೆ ಆಸ್ತಿ ಹರಾಜು

ರೈತ ಮುಖಂಡ ಕುರುಬೂರು ಶಾಂತಕುಮಾರ್



ಮೈಸೂರಿನ ಕುವೆಂಪು ಉದ್ಯಾನವನದಲ್ಲಿ ಏರ್ಪಡಿಸಿದ್ದ ಗ್ರೀನ್ ಬರ್ಡ್ಸ್ ಠೇವಣಿದಾರರ ಸಭೆಯಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿದರು

ಮೈಸೂರು, ಜ.5(ಜಿಎ)–ಗ್ರೀನ್ ಬರ್ಡ್ಸ್ ಠೇವಣಿದಾರರ ಹೋರಾಟ ಯಶಸ್ವಿಯಾಗಿದ್ದು, ಜ.12ರಂದು ಹರಾಜು ಪ್ರಕ್ರಿಯೆ ನಡೆಯಲಿದೆ. ಠೇವಣಿದಾರರು ಹೆಚ್ಚು ಜನ ಹರಾಜು ಖರೀದಿಯಲ್ಲಿ ಪಾಲ್ಗೊಳ್ಳಲು ಜಾಗೃತಿ ಮೂಡಿಸಬೇಕು ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಕರೆ ನೀಡಿದರು.

ನಗರದ ಕುವೆಂಪು ಉದ್ಯಾನವನದಲ್ಲಿ ಏರ್ಪಡಿಸಿದ್ದ ಗ್ರೀನ್ ಬರ್ಡ್ಸ್ ಠೇವಣಿದಾರರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಲಕ್ಷಾಂತರ ಕೂಲಿ ಕಾರ್ಮಿಕರು, ಬಡವರು, ರೈತರು ಹಣ ಹೂಡಿಕೆ ಮಾಡಿದ್ದ ಗ್ರೀನ್ ಬರ್ಡ್ಸ್ ಆಗ್ರೋ ಕಂಪನಿ ವಂಚನೆ ಪ್ರಕರಣ ಸಂಬಂಧ ಕಳೆದ ಹತ್ತು ವರ್ಷಗಳಿಂದ ಹೋರಾಟ ಮಾಡಿದ ಪರಿಣಾಮ ಸುಮಾರು 150 ಕೋಟಿ ರೂ. ಗ್ರೀನ್ ಬರ್ಡ್ಸ್ ಸಂಸ್ಥೆಯ ಆಸ್ತಿಗಳ ಹರಾಜಿಗೆ ರಾಜ್ಯ ಸರ್ಕಾರ ನೇಮಕ ಮಾಡಿದ ವಿಶೇಷ ಪ್ರಾಧಿಕಾರದ ಮುಖ್ಯಸ್ಥ ಆದಿತ್ಯ ಬಿಸ್ವಾಸ್ ಆಸ್ತಿ ಹರಾಜಿಗೆ ಬಹಿರಂಗ ಪ್ರಕಟಣೆ ಹೊರಡಿಸಿದ್ದಾರೆ ಎಂದರು.

ಆಸ್ತಿಗಳ ಮೌಲ್ಯ ಇಂದು ದುಪ್ಪಟ್ಟು ಏರಿಕೆಯಾಗಿದೆ. ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಸ್ಪರ್ಧಾತ್ಮಕವಾಗಿ ಖರೀದಿ ಮಾಡಿದರೆ ಸುಮಾರು 1,60,000 ಠೇವಣಿದಾರರಿಗೆ ಹೂಡಿಕೆ ಮಾಡಿರುವ ಠೇವಣಿ ಹಣ ಖಚಿತವಾಗಿ ಸಿಗುತ್ತದೆ. ಹರಾಜಾಗುತ್ತಿರುವ ಆಸ್ತಿಗಳು ಫಲವತ್ತಾದ ಭೂಮಿಯಾಗಿದ್ದು ವ್ಯವಸಾಯಕ್ಕೆ ಯೋಗ್ಯ ವಾಗಿದೆ. ಈ ಬಗ್ಗೆ ಠೇವಣಿದಾರರು ಚಿಂತನೆ ನಡೆಸಿ ಹೆಚ್ಚು ಜನ ಹರಾಜಿನಲ್ಲಿ ಪಾಲ್ಗೊಳ್ಳಲು ಜಾಗೃತಿ ಮೂಡಿಸಬೇಕು. ನಿರಂತರ ಹೋರಾಟದ ಫಲದಿಂದ ವಂಚನೆಗೆ ಒಳಗಾಗಿದ್ದ ಒಂದು ಲಕ್ಷ ಅರವತ್ತು ಸಾವಿರ ಗ್ರಾಮೀಣ ಬಡಜನರಿಗೆ, ಮಹಿಳೆಯರಿಗೆ, ಠೇವಣಿ ಹಣ ವಾಪಸ್ ಬರುವ ಸೂಚನೆಗಳು ಕಂಡುಬರುತ್ತಿವೆ ಎಂದು ತಿಳಿಸಿದರು.

ಜ.12 ರಂದು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕು ಹುಲ್ಲಹಳ್ಳಿ ಹುರ ಮುಖ್ಯರಸ್ತೆಯಲ್ಲಿರುವ ಮಾದಾಪುರ ಗ್ರಾಮದ ತೆಂಗು, ಅಡಿಕೆ ತೋಟ ಹಾಗೂ ನಂಜನಗೂಡು, ಚಾಮರಾಜನಗರ ಮುಖ್ಯರಸ್ತೆಯಲ್ಲಿರುವ ದೊಡ್ಡಕೌಲಂದೆ ಗ್ರಾಮದಲ್ಲಿ ಸುಮಾರು 6 ಎಕರೆ ತೆಂಗಿನ ತೋಟ ಫಲವತ್ತಾದ ಭೂಮಿಯನ್ನು ಹರಾಜು ಮಾಡುತ್ತಿದ್ದು ಆನ್‌ಲೈನ್‌ನಲ್ಲಿ ಅರ್ಜಿ ಹಾಕಿಕೊಂಡು ಸದುಪಯೋಗವನ್ನು ಪಡೆಸಿಕೊಳಿ ಎಂದರು.

ಸಭೆಯಲ್ಲಿ ಬರಡನಪುರ ನಾಗರಾಜ್, ಪುಷ್ಪ ಪ್ರಸಾದ್, ರೂಪ, ಅತ್ತಹಳ್ಳಿ ದೇವರಾಜ್, ಕಿರಗಸೂರಶಂಕರ ನೂರಾರು ಠೇವಣಿದಾರರು ಭಾಗವಹಿಸಿದ್ದರು.

ಲೋಕಸಭಾ ಚುನಾವಣೆಯಲ್ಲಿ ಪ್ರಮೋದ್ ಮಧ್ವರಾಜ್‌ಗೆ ಬಿಜೆಪಿ ಟಿಕೆಟ್ ನೀಡಲು ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಗಂಗಾಮತಸ್ಥರ ಸಂಘದ ಅಧ್ಯಕ್ಷೆ ಪ್ರೊಹೆಚ್.ಎಂ.ವಸಂತಮ್ಮ ಮಾತನಾಡಿದರು. ಚಿತ್ರದಲ್ಲಿ ಸಂಘದ ಪದಾಧಿಕಾರಿಗಳಾದ ಗೋಪಾಲ, ದೇವರಾಜ್ ಹಾಗೂ ಇನ್ನಿತರರನ್ನು ಕಾಣಬಹುದು.

ಮೈಸೂರು,ಜ.5(ಎಂಟಿವೈ)– ಚಿಕ್ಕಮಗಳೂರು ಅಥವಾ ಉಡುಪಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಪ್ರಮೋದ್ ಮಧ್ವರಾಜ್ ಅವರಿಗೆ ಟಿಕೆಟ್ ನೀಡುವಂತೆ ಜಿಲ್ಲಾ ಗಂಗಾಮತಸ್ಥರ ಸಂಘದ ಅಧ್ಯಕ್ಷೆ ಪ್ರೊ.ಹೆಚ್.ಎಂ. ವಸಂತಮ್ಮ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಮೋದ್ ಮಧ್ವರಾಜ್ ಅವರು ರಾಜಕೀಯದಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಉಡುಪಿ ಕ್ಷೇತ್ರದಿಂದ ವಿಧಾನಸಭಾ ಸದಸ್ಯರಾಗಿ ಮತ್ತು ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಗಂಗಾಮತ ಮತ್ತು ಮೊಗವೀರ ಸಮುದಾಯಗಳ ಕಲ್ಯಾಣಕ್ಕೆ ಶ್ರಮಿಸಿದ್ದಾರೆ. ಮೂಲ ಸೌಕರ್ಯ, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಕಲ್ಯಾಣದ ಮೇಲೆ ಕೇಂದ್ರೀಕೃತ ಅನೇಕ ಯೋಜನೆ ಅನುಷ್ಠಾನಗೊಳಿಸಿ ಸಮುದಾಯದ ಅಭಿವೃದ್ಧಿಗೆ ಕೆಲಸ ಮಾಡಿದ್ದಾರೆ. ಇತರೆ ಸಮುದಾಯಗಳೊಂದಿಗೂ ಉತ್ತಮ ಬಾಂಧವ್ಯ ಹೊಂದಿರುವ ಕಾರಣ ಇವರಿಗೆ ಪಕ್ಷ ಟಿಕೆಟ್ ನೀಡಿದಲ್ಲಿ ಗೆಲುವು ಸಾಧಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಗಂಗಾ ಮತಸ್ಥರ ಸಂಘದ ಪದಾಧಿಕಾರಿಗಳಾದ ಗೋಪಾಲ, ದೇವರಾಜ್ ಹಾಗೂ ಇನ್ನಿತರರು ಇದ್ದರು.

ನಾಳೆ ವಾಸವಿ ಮಹಿಳಾ ಸಮಾಜದ ಬೆಳ್ಳಿ ಹಬ್ಬ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಾಸವಿ ಮಹಿಳಾ ಸಮಾಜದ ಅಧ್ಯಕ್ಷೆ ಲಕ್ಷ್ಮಿ ದಿನೇಶ್ ಮಾತನಾಡಿದರು. ಚಿತ್ರದಲ್ಲಿ ಸಂಘದ ಪದಾಧಿಕಾರಿಗಳಾದ ರಾಧಗೋಪಿನಾಥ್, ಖಜಾಂಚಿ ಸಿ.ಎಸ್. ಅನಿತಾ, ಧನಲಕ್ಷ್ಮೀ, ಡಾ. ಶೋಭಾ, ಸಾಧನಾ ಅವರನ್ನು ಕಾಣಬಹುದು.

ಮೈಸೂರು,ಜ.5(ಎಂಟಿವೈ)– ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಜ.7ರಂದು ಸಂಜೆ 4 ಗಂಟೆಗೆ ವಾಸವಿ ಮಹಿಳಾ ಸಮಾಜದ ಬೆಳ್ಳಿ ಹಬ್ಬದ ಸಂಭ್ರಮಾಚರಣೆ ಹಾಗೂ ಕೃತಕ ಕಾಲು ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಾಸವಿ ಮಹಿಳಾ ಸಮಾಜದ ಅಧ್ಯಕ್ಷೆ ಲಕ್ಷ್ಮಿ ದಿನೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ಧಾರ್ಥ ನಗರದ ವಾಸವಿ ಮಹಿಳಾ ಸಮಾಜ ಬೆಳ್ಳಿ ಹಬ್ಬದ ಸಂಭ್ರಮದಲ್ಲಿದ್ದು, ಈಗಾಗಲೇ ಹಲವು ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಜ.7ರಂದು ಸಂಜೆ 4ಕ್ಕೆ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮವನ್ನು ಕನ್ಯಕಾ ಪರಮೇಶ್ವರಿ ದೇವಾಲಯದ ಅಧ್ಯಕ್ಷ ಎಸ್.ಕೆ. ದಿನೇಶ್ ಉದ್ಘಾಟಿಸಲಿದ್ದು, ನಟಿ ತಾರಾ ಅನುರಾದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಕನ್ಯಕಾ ಪರಮೇಶ್ವರಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಹೆಚ್.ಎಂ. ಸಂದೀಪ್ ಬಹುಮಾನ ವಿತರಿಸಲಿದ್ದಾರೆ. ಅಧ್ಯಕ್ಷತೆಯನ್ನು ವಾಸವಿ ಮಹಿಳಾ ಸಮಾಜದ ಅಧ್ಯಕ್ಷೆ ಲಕ್ಷ್ಮೀ ದಿನೇಶ್ ವಹಿಸಲಿದ್ದಾರೆ ಎಂದು ತಿಳಿಸಿದರು.

ವಾಸವಿ ಮಹಿಳಾ ಸಮಾಜ ಸ್ವಯಂ ಉದ್ಯೋಗಕ್ಕೆ ಒತ್ತು ನೀಡಿ, ತರಬೇತಿ ನೀಡುತ್ತಿದೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡುತ್ತಿದ್ದೇವೆ. ಆರ್ಥಿಕವಾಗಿ ಸಂಕಷ್ಟದ ಸ್ಥಿತಿಯಲ್ಲಿರುವ ವಿದ್ಯಾರ್ಥಿನಿಯರಿಗೆ ಶಾಲಾ–ಕಾಲೇಜು ಶುಲ್ಕ ಕಟ್ಟುವ ಸೇವಾ ಕಾರ್ಯಕ್ರಮ ನಡೆಸಲಾಗುತ್ತದೆ. ಕಾರ್ಯಕ್ರಮದಲ್ಲಿ ಅರ್ಹರಿಗೆ ಕೃತಕ ಕಾಲು ವಿತರಿಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ರಾಧ ಗೋಪಿನಾಥ್, ಖಜಾಂಚಿ ಸಿ.ಎಸ್. ಅನಿತಾ, ಧನಲಕ್ಷ್ಮೀ, ಡಾ. ಶೋಭಾ, ಸಾಧನಾ ಇದ್ದರು.

ಕರ್ನಾಟಕ ಶಿವಾರ್ಚಕ ಪ್ರಗತಿಪರ ಸಂಘ ಅಸ್ತಿತ್ವಕ್ಕೆ



ಸುವರ್ಣ ಕರ್ನಾಟಕ ಶಿವಾರ್ಚಕ ಪ್ರಗತಿಪರ ಸಂಘ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಸಂಘದ ಅಧ್ಯಕ್ಷ ಬನ್ನೂರು ನಾಗರಾಜು ಬಿಡುಗಡೆ ಮಾಡಿದರು. ಚಿತ್ರದಲ್ಲಿ ಸಂಘದ ಪದಾಧಿಕಾರಿಗಳಾದ ಸಿದ್ದರಾಜು, ಗುರುಸ್ವಾಮಿ, ನವೀನ್ ಸುತ್ತೂರು, ಗಣೇಶ್ ಕುಪ್ಯ ಅವರನ್ನು ಕಾಣಬಹುದು.

ಮೈಸೂರು,ಜ.5(ಎಂಟಿವೈ)– ಶಿವಾರ್ಚಕರ ಸಂಘ ಸಂಸ್ಥೆಗಳಲ್ಲಿ ಸಮನ್ವಯತೆ ಸಾಧಿಸುವ ಉದ್ದೇಶದಿಂದ ಸುವರ್ಣ ಕರ್ನಾಟಕ ಶಿವಾರ್ಚಕ ಪ್ರಗತಿಪರ ಸಂಘ ಅಸ್ತಿತ್ವಕ್ಕೆ ತರಲಾಗಿದೆ ಎಂದು ಸಂಘದ ಅಧ್ಯಕ್ಷ ಬನ್ನೂರು ನಾಗರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ನೂತನ ಸಂಘದ ಮೂಲಕ ಶಿವಾರ್ಚಕ ಸಮುದಾಯ ಏಳಿಗೆಗೆ ಶ್ರಮಿಸಲಾಗುತ್ತದೆ. ಶಿವಾರ್ಚಕರ ಅಭಿವೃದ್ಧಿ ಸಂಘದ ಉದ್ದೇಶವಾಗಿದೆ. ಸಮುದಾಯಕ್ಕಾಗಿ ಅನೇಕ ಕೆಲಸ ಕಾರ್ಯ ನಡೆಸಲು ಉದ್ದೇಶಿಸಲಾಗಿದೆ. ನೂತನ ಸಂಘದ ಆಶ್ರಯದಲ್ಲಿ ಫೆ.10ರಂದು ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ. ಅಂದಿನ ಸಮಾರಂಭದಲ್ಲಿ ನಿವೃತ್ತ ಸೈನಿಕರಿಗೆ ಸನ್ಮಾನ, ವೀರಗಾಸೆ ಕಲಾವಿದರು, ವೈದ್ಯರು ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆಯ್ದ ಕೆಲವರಿಗೆ ಗೌರವ ಸಮರ್ಪಿಸಲಾಗುತ್ತದೆ ಎಂದರು.

ಇದೇ ವೇಳೆ ನೂತನ ಸಂಘದ ವತಿಯಿಂದ ಪ್ರಕಟಿಸಿರುವ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸ ಲಾಯಿತು. ಸುದ್ದಿಗೋಷ್ಠಿಯಲ್ಲಿ ಸುವರ್ಣ ಕರ್ನಾಟಕ ಶಿವಾರ್ಚಕ ಪ್ರಗತಿಪರ ಸಂಘ ಪದಾಧಿಕಾರಿಗಳಾದ ಸಿದ್ದರಾಜು, ಗುರುಸ್ವಾಮಿ, ನವೀನ್ ಸುತ್ತೂರು, ಗಣೇಶ್ ಕುಪ್ಯ ಇದ್ದರು.

ಜ.11ರಂದು ಮೈಸೂರು ಮಕ್ಕಳ ಸಾಹಿತ್ಯ ಸಂಭ್ರಮ

ಮೈಸೂರು,ಜ.5(ಎಂಟಿವೈ)– ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಹೋಟೆಲ್ ಸದರನ್ ಸ್ಟಾರ್ ಆವರಣದಲ್ಲಿ ಜ.11ರಂದು ಸಂಜೆ 4ರಿಂದ 7.30ರವರೆಗೆ 8ನೇ ಆವೃತ್ತಿಯ ಮೈಸೂರು ಮಕ್ಕಳ ಸಾಹಿತ್ಯ ಸಂಭ್ರಮ ಆಯೋಜಿಸಲಾಗಿದೆ ಎಂದು ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗು ಮೈಸೂರು ಬುಕ್ ಕ್ಲಬ್ಸ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ತಿಳಿಸಿದ್ದಾರೆ.

ಮಕ್ಕಳಲ್ಲಿರುವ ಸೃಜನಶೀಲತೆಯನ್ನು ಗುರುತಿಸಿ, ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ಸಾಹಿತ್ಯ ಸಂಭ್ರಮವನ್ನು ನಾಲ್ಕು ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗಾಗಿ ಆಯೋಜಿಸಲಾಗಿದೆ. ಮಕ್ಕಳ ಮನರಂಜನೆ ಮತ್ತು ಮನೋವಿಕಾಸಕ್ಕಾಗಿ ಮೂರು ಕಾರ್ಯಕ್ರಮಗಳು ಒಂದೇ ಸಮಯದಲ್ಲಿ ನಡೆಯುತ್ತವೆ ಎಂದು ತಿಳಿಸಿದ್ದಾರೆ. ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಲೇಖಕಿ, ಇನ್ಫೋಸಿಸ್ ಫೌಂಡೇಷನ್ ಮುಖ್ಯಸ್ಥೆ ಡಾ.ಸುಧಾ ಮೂರ್ತಿ ಸಮಾರೋಪ ಭಾಷಣ ಮಾಡಲಿದ್ದಾರೆ. ಸುಮಾ ರಾಜಕುಮಾರ್ ಅವರಿಂದ 'ಮಾತಾಡುವ ಗೊಂಬೆ', ರೂಪ ಶಿವಪ್ರಕಾಶ್ ಅವರು ಒಂದು ಪುಸ್ತಕವನ್ನು ನೃತ್ಯ ಸಂಗೀತ ರೂಪಕದಂತೆ ಪ್ರಸ್ತುತ ಪಡಿಸಲಿದ್ದಾರೆ. ಅನ್ನಾ ಚೆರಿಯನ್ ಮತ್ತು ಅಂಕಿತ ರಾಮನ್ ಅವರು ಪುಸ್ತಕಕ್ಕೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆ ನಡೆಸಿಕೊಡಲಿದ್ದಾರೆ. ಡಾ. ದೀಪಿಕಾ ಪೊನ್ನಪ್ಪ ಅವರಿಂದ ಕಥೆಗಳ ನಿರೂಪಣೆ, ಕೊಳ್ಳೇಗಾಲ ಶರ್ಮ ಅವರಿಂದ ವಿಜ್ಞಾನ ಕತೆಗಳು, ಹೆಸರಾಂತ ಕಥಾ ನಿರೂಪಕಿ ಸೀಮಾ ಕಾರಂತರಿಂದ ಕತೆ ಹೇಳುವಿಕೆ, ಸೂರಜ್ ರಾವ್ ಪವಾರ್ ಅವರಿಂದ ಸಂಗೀತ ಮೇಳ ಕಾರ್ಯಕ್ರಮ ನಮ್ಮ ಸಾಹಿತ್ಯ ಸಂಭ್ರಮದಲ್ಲಿ ಜರುಗಲಿದೆ. ಹೆಚ್ಚಿನ ಮಾಹಿತಿಗಾಗಿ 9980250114 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಿದ್ದಾರೆ.

15 ದಿನ ದಸರಾ ವಸ್ತು ಪ್ರದರ್ಶನ ವಿಸ್ತರಣೆಗೆ 30 ಲಕ್ಷ ರೂ ವೆಚ್ಚ

ಸರ್ಕಾರಕ್ಕೆ ಪ್ರಾಧಿಕಾರದಿಂದ ವರದಿ



ವಸ್ತು ಪ್ರದರ್ಶನ ಮೈದಾನದ ಆವರಣದಲ್ಲಿ ಜನ ಜಂಗುಳಿಯಿಂದ ಕೂಡಿರುವುದು

ಮೈಸೂರು, ಜ.5(ಜಿಎ)–ಮೈಸೂರು ದಸರಾ ವಸ್ತು ಪ್ರದರ್ಶನವನ್ನು 15 ದಿನ ವಿಸ್ತರಿಸಲು ಹೆಚ್ಚುವರಿಯಾಗಿ 30 ಲಕ್ಷ ರೂ. ಅಗತ್ಯವಿದೆ ಎಂದು ಸರ್ಕಾರಕ್ಕೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿದೆ. ಈ ಬಾರಿ ದಸರಾ ವಸ್ತುಪ್ರದರ್ಶನ ಉತ್ತಮ ಪ್ರತಿಕ್ರಿಯೆ ವ್ಯಕ್ತಿವಾಗಿದ್ದ ಹಿನ್ನೆಲೆಯಲ್ಲಿ ಟೆಂಡರ್‌ದಾರರು ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ ಹೆಚ್ಚುವರಿಯಾಗಿ 15 ದಿನ ವಿಸ್ತರಿಸಲು ಮನವಿ ಸಲ್ಲಿಸಿದರು. ಅದರಂತೆ ಪ್ರಾಧಿಕಾರವು ಸರ್ಕಾರಕ್ಕೆ ಈ ಮನವಿ ಕುರಿತು ಪತ್ರ ಬರೆದಿತ್ತು. ಆದರೆ, 15 ದಿನಕ್ಕೆ ಹೆಚ್ಚುವರಿಯಾಗಿ ಎಷ್ಟು ವೆಚ್ಚ ತಗುಲಲ್ಲಿದೆ ಎಂದು ವರದಿ ನೀಡುವಂತೆ ಈಗ ಸರ್ಕಾರದಿಂದ ಪತ್ರಕ್ಕೆ ಉತ್ತರ ಬಂದಿದೆ. ಸರ್ಕಾರ ನೀಡಿರುವ ನಿರ್ದೇಶನದಂತೆ ಪ್ರಾಧಿಕಾರವೂ 15 ದಿನಗಳು ವಸ್ತು ಪ್ರದರ್ಶನ ವಿಸ್ತರಿಸಲು ಹೆಚ್ಚುವರಿಯಾಗಿ 30 ಲಕ್ಷ ರೂ. ತಗುಲಲಿದೆ ಎಂದು ವರದಿ ಸಿದ್ಧಪಡಿಸಲಾಗಿದೆ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ.ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಳೆದ ಬಾರಿ ಬೆಂಗಳೂರಿನ ಫನ್ ವರ್ಲ್ಡ್ ಇಂಡಿಯಾ ರೆಸಾರ್ಟ್ ಪ್ರೈ.ಲಿ. 8.08 ಕೋಟಿ ರೂ. ಗೆ ಟೆಂಡರ್ ಪಡೆದುಕೊಂಡಿತ್ತು. ಈ ಬಾರಿಯೂ ಫನ್ ವರ್ಲ್ಡ್ 11.52 ಕೋಟಿ ರೂ.ಗೆ ಟೆಂಡರ್ ಪಡೆದುಕೊಂಡಿದೆ. ಕಳೆದ ಬಾರಿಗಿಂತಲೂ ಈ ಬಾರಿ 3.44 ಕೋಟಿ ರೂ. ಅಧಿಕ ಟೆಂಡರ್ ಪಡೆದುಕೊಂಡಿದ್ದರು. ಈಗ ವಿಸ್ತರಣೆಗೆ ಹೆಚ್ಚುವರಿಯಾಗಿ ಹಣ ಪಾವತಿ ಮಾಡಲು ಟೆಂಡರ್‌ದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದರು. ರಾಜ್ಯ ಸರ್ಕಾರ ಈ ಬಾರಿ ಅದ್ದೂರಿ ದಸರಾ ಮಾಡುತ್ತೇವೆ ಎಂದು ಘೋಷಿಸಿದ ಹಿನ್ನೆಲೆಯಲ್ಲಿ ಕಳೆದ ಬಾರಿಗಿಂತಲೂ ಅಧಿಕ ಬಿಡ್ ಮಾಡಲಾಗಿತು. ಆದರೆ, ನಂತರ ಸರಳ ದಸರಾ ಆಚರಿಸಲಾಗಿದೆ. ಮತ್ತೊಂದೆಡೆ ಮಳೆಯಿಂದಲ್ಲೂ ವಸ್ತುಪ್ರದರ್ಶನಕ್ಕೆ ಅಡ್ಡಿಯಾಗಿರುವುದರಿಂದ ಉಚಿತವಾಗಿ 15 ದಿನ ವಿಸ್ತರಣೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಅಂತಿಮವಾಗಿ ಸರ್ಕಾರ ವಿಸ್ತರಣೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ತಿಳಿಸಿದರು.

ಕಾರ್ಮಿಕರಿಗಾಗಿ ಬೆಳೆಗಾರರ ಹರಸಾಹಸ



ಕಾರ್ಮಿಕರ ಕೂಲಿ ದರ ಫಲಕ ಹಿಡಿದು ರಸ್ತೆ ನಡುವೆ ನಿಂತಿರುವ ಬೆಳೆಗಾರ

ಮಡಿಕೇರಿ, ಜ.5– ಕಾಫಿ ಕೊಯ್ಲಿಗೆ ದುಪ್ಪಟ್ಟು ಕೂಲಿ ನೀಡುವುದಾಗಿ ಬೆಳೆಗಾರರು ಕಾರ್ಮಿಕರಿಗಾಗಿ ಹರಸಾಹಸ ಪಡುತ್ತಿದ್ದಾರೆ.

ಸುಂಟಿಕೊಪ್ಪ ಭಾಗದ ಕಾಫಿ ಬೆಳೆಗಾರರು ಕೂಲಿ ಕಾರ್ಮಿಕರು ಸಿಗದೆ ಕಂಗಾಲಾಗಿದ್ದಾರೆ. ಹೌದು, ಬೆಳೆಗಾರರಾದ ಸುಂಟಿಕೊಪ್ಪ ಬೀಟಿಕಾಡಿನವರು, ಕಾಫಿ ಹಣ್ಣು ಕೊಯ್ಲಿಗೆ ಕೂಲಿ ದರ ಫಲಕ ಹಿಡಿದು ರಸ್ತೆ ನಡುವೆ ನಿಂತು ಕಾರ್ಮಿಕರಿಗಾಗಿ ಕಾಯುತ್ತಿರುವ ಫೋಟೋ ಸಾಮಾಜಿಕ ಜಾಲ ತಾಣಗಳಲ್ಲಿ ಸಾಕಷ್ಟು ವೈರಲ್ ಆಗುತ್ತಿದೆ.

ಫಲಕದಲ್ಲಿ ಪುರುಷರಿಗೆ 615 ರೂ. ಹಾಗೂ ಮಹಿಳಾ ಕಾರ್ಮಿಕರಿಗೆ 415 ರೂ. ಕೂಲಿ ಮತ್ತು ಒಟಿ ನಿಗದಿಪಡಿಸಿ ನಡು ರಸ್ತೆಯಲ್ಲಿ ನಿಂತು ಕಾದರೂ ಇವರಿಗೆ ಕಾರ್ಮಿಕರು ಸಿಗಲಿಲ್ಲ ಎನ್ನಲಾಗಿದೆ. ಬೆಳೆಗಾರರು ಹೆಚ್ಚು ಹಣ ವೆಚ್ಚ ಮಾಡಿ, ಕಾಫಿ ಬೆಳೆದರೂ ಕೊಯ್ಲಿಗೆ ಕಾರ್ಮಿಕರು ಸಿಗದೇ ಪರದಾಡುವಂತಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಕಾಫಿ ಕೊಯ್ಲು ವೇಳೆ ಬೆಳೆಗಾರರ ಪಾಡು ಹೇಳತೀರದಾಗಿದೆ. ಕಾರ್ಮಿಕರ ಕೂಲಿ ಜಿಲ್ಲೆಯ ಒಂದೊಂದು ಭಾಗದಲ್ಲಿ ಒಂದೊಂದು ರೀತಿ ಇದ್ದು, ಕಾಫಿ ಹಣ್ಣು ಕೊಯ್ಯುವ ಕಾರ್ಮಿಕನಿಗೆ ಕಳೆದ ಬಾರಿ ಪ್ರತಿ ಕೆಜಿಗೆ 3.50 ರೂ. ನೀಡಲಾಗಿತ್ತು. ಆದರೆ, ಈ ಬಾರಿ ಹೆಚ್ಚು ಕೂಲಿ ನೀಡಿ ಕಾರ್ಮಿಕರ ಹುಡುಕಾಟದಲ್ಲಿ ಬೆಳೆಗಾರರು ಬೇಸತ್ತಿದ್ದಾರೆ.

ವರ್ಷವಿಡೀ ಕಷ್ಟಪಟ್ಟು ಬೆಳೆದ ಕಾಫಿ ಕೊಯ್ಲು ಮಾಡದೆ ಇರುವಂತೆಯೂ ಇಲ್ಲ, ಬಿಡುವಂತೆಯೂ ಇಲ್ಲ ಎನ್ನುವಂತಾಗಿದೆ. ಜಿಲ್ಲೆಯ ಎಲ್ಲಾ ಬೆಳೆಗಾರರು ಒಂದಲ್ಲ ಒಂದು ಸಂದರ್ಭಗಳಲ್ಲಿ ಎದುರಿಸುತ್ತಿರುವ ಜ್ವಲಂತ ಸಮಸ್ಯೆಯಿದು. ಹೊರ ಜಿಲ್ಲೆ, ರಾಜ್ಯಗಳಿಂದ ಸಾಕಷ್ಟು ಕಾರ್ಮಿಕರು ಜಿಲ್ಲೆಗೆ ಬಂದಿದ್ದರೂ ಕಾಫಿ ಕೊಯ್ಲಿನ ಕೂಲಿ ಬೆಳೆಗಾರರನ್ನು ಹೈರಾಣಾಗಿಸುತ್ತಿದೆ.

ಜಿಲ್ಲಾಧಿಕಾರಿ ಕಚೇರಿ ಎದುರು ಸಿಎನ್‌ಸಿ ಧರಣಿ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮನವಿ ಸಲ್ಲಿಕೆ



ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮಡಿಕೇರಿಯ ಜಿಲ್ಲಾಧಿಕಾರಿ ಕಚೇರಿ ಎದುರು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಧರಣಿ ನಡೆಸಲಾಯಿತು.

ಮಡಿಕೇರಿ, ಜ.5– ಪ್ರಾಚೀನ ಆದಿಮ ಸಂಜಾತ ಸೂಕ್ಷ್ಮ ಜನಾಂಗ ಕೊಡವರನ್ನು ವಿಶ್ವಸಂಸ್ಥೆಯ ನಿರ್ಣಯ 217ಎ (111)ರನ್ವಯ ಮಾನ್ಯತೆ ನೀಡಿ ಕೊಡವರ ಸ್ವಯಂ–ನಿರ್ಣಯದ ಹಕ್ಕುಗಳನ್ನು ಅಂತಾರಾಷ್ಟ್ರೀಯ ಕಾನೂನಿನಡಿ ಗೌರವಿಸಬೇಕು ಮತ್ತು ಖಾತರಿಪಡಿಸಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಶುಕ್ರವಾರ ನಗರದಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ನಗರದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಹಾಗೂ ಪ್ರಮುಖರು, ಅಂತಾರಾಷ್ಟ್ರೀಯ ಕಾನೂನಿನಡಿ ಕೊಡವರಿಗೆ ಮಾನ್ಯತೆ, ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತೆ ಮತ್ತು ಕೊಡವರಿಗೆ ಎಸ್‌ಟಿ ಟ್ಯಾಗ್ ನೀಡಬೇಕೆಂದು ಒತ್ತಾಯಿಸಿದರು.

ಸಂವಿಧಾನದ ಆರ್ಟಿಕಲ್ 244 ಆರ್/ಡಬ್ಲ್ಯೂ 6ನೇ ಮತ್ತು 8ನೇ ಶೆಡ್ಯೂಲ್ ಪ್ರಕಾರ, ಕೊಡವರು ಸ್ಥಳೀಯ ಕೊಡವ ಜನರ ಸಾಂಪ್ರದಾಯಿಕ ಮತ್ತು ಅವಿಭಾಜ್ಯತಾಯ್ನಾಡಿನ ಹಕ್ಕನ್ನು ಹೊಂದಿದ್ದಾರೆ. ಇದು ಸ್ವಯಂ ಆಳ್ವಿಕೆಯೊಂದಿಗೆ ಕೊಡವ ಲ್ಯಾಂಡ್ ಜಿಯೋ– ರಾಜಕೀಯ ಸ್ವಾಯತ್ತ ಪ್ರದೇಶವನ್ನು ಸ್ಥಾಪಿಸಬೇಕೆಂಬ ಬೇಡಿಕೆಯನ್ನು ಸಿಎನ್‌ಸಿ ರೂಪಿಸಿದೆ ಎಂದು ನಾಚಪ್ಪ ಹೇಳಿದರು.

ಈ ಹಕ್ಕೊತ್ತಾಯಗಳ ಪರ ಪ್ರತಿಪಾದಿಸಿರುವ ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರದ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಸಿಎನ್‌ಸಿ ಬೇಡಿಕೆಗೆ ಪೂರಕವಾಗಿ ಹೈಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸುತ್ತಿದ್ದು, ಕೆಲವೇ ದಿನಗಳಲ್ಲಿ ತೀರ್ಪು

> 6 ಸಂವಿಧಾನದ ಪರಿಚ್ಛೇದ 340–342 ಅಡಿಯಲ್ಲಿ ಕೊಡವ ಸಮುದಾಯಕ್ಕೆ ಎಸ್‌ಟಿ ಟ್ಯಾಗ್ ನೀಡಬೇಕು. ಕೊಡವರು ಅಳಿವಿನಂಚಿನಲ್ಲಿ ಕ್ಷೀಣಿಸುತ್ತಿರುವ ಸಮುದಾಯವಾಗಿರುವುದರಿಂದ ಸಂವಿಧಾನದಡಿ ರಕ್ಷಣೆ ನೀಡಬೇಕು. ಸಿಎನ್‌ಸಿ ಸಲ್ಲಿಸಿದ ರಿಟ್ ಅರ್ಜಿಯನ್ನು ಪರಿಗಣಿಸಿ ಹೈಕೋರ್ಟ್ ನೀಡಿದ ಆದೇಶದ ಪ್ರಕಾರ ಕೊಡವರನ್ನು ಪರಿಶಿಷ್ಟ ಪಟ್ಟಿಯಲ್ಲಿ ಸೇರಿಸಲು ಅನುಕೂಲವಾಗುವಂತೆ ಸಮಗ್ರ ಜನಾಂಗೀಯ ಕುಲಶಾಸ್ತ್ರ ಅಧ್ಯಯನ ನಡೆಸಲು ತಕ್ಷಣ ಕ್ರಮ ಕೈಗೊಳ್ಳಬೇಕು.
>
> -ಎನ್.ಯು.ನಾಚಪ್ಪ, ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ

ಹೊರ ಬೀಳಲಿದೆ. ಪ್ರಾಚೀನ ಆದಿಮ ಸಂಜಾತ ಅತ್ಯಂತ ಸೂಕ್ಷ್ಮ ಜನಾಂಗ ಕೊಡವರನ್ನು ವಿಶ್ವಸಂಸ್ಥೆಯ ನಿರ್ಣಯ 217ಎ (111)ರನ್ವಯ ಮಾನ್ಯತೆ ನೀಡಿ ಕೊಡವರ ಸ್ವಯಂ–ನಿರ್ಣಯ ಹಕ್ಕುಗಳನ್ನು ಅಂತಾರಾಷ್ಟ್ರೀಯ ಕಾನೂನಿನಡಿ ಗೌರವಿಸಬೇಕು ಮತ್ತು ಖಾತರಿಪಡಿಸಬೇಕು ಎಂದು ಆಗ್ರಹಿಸಿದರು.

ನಂತರ ಕೊಡವ ಲ್ಯಾಂಡ್ ಭೂರಾಜಕೀಯ ಸ್ವಾಯತ್ತೆ ಸೇರಿದಂತೆ ವಿವಿಧ ಬೇಡಿಕೆಗಳ ಮನವಿಯನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಅವರಿಗೆ ಸಲ್ಲಿಸಿದರು. ಸಿಎನ್‌ಸಿ ಪ್ರಮುಖರಾದ ಬೊಳ್ಳಮ್ಮ ನಾಣಯ್ಯ, ಲೆಫ್ಟಿನೆಂಟ್ ಕರ್ನಲ್ ಪಾರ್ವತಿ, ಬೊಟ್ಟಂಗಡ ಸವಿತಾ, ಚೋಳಪಂಡ ಜ್ಯೋತಿ ನಾಣಯ್ಯ, ಅಪ್ಪನೆರವಂಡ ಶಾಂತಿ ಅಚ್ಚಪ್ಪ, ಚೆಪ್ಪುಡಿರ ಜಾನ್ಸಿ ಪೊನ್ನಪ್ಪ, ಜಮ್ಮಡ ಮೋಹನ್, ಕಾಂಡೇರ ಸುರೇಶ್, ಅಜ್ಜಿಕುಟ್ಟೀರ ಲೋಕೇಶ್, ಬೊಟ್ಟಂಗಡ ಗಿರೀಶ್, ಕಿರಿಯಮಾಡ ಶೆರಿನ್, ಚಂಬಂಡ ಜನತ್, ಮಂದಪಂಡ ಮನೋಜ್, ಕಾಟುಮಣಿಯಂಡ ಉಮೇಶ್, ಪಾರ್ವಂಗಡ ನವೀನ್, ಮಣವಟ್ಟಿರ ಚಿಣ್ಣಪ್ಪ, ಪುಟ್ಟಿಚಂಡ ದೇವಯ್ಯ, ಕೂಪದಿರ ಸಾಬು, ನಂದಿನೆರವಂಡ ವಿಜು, ನಂದಿನೆರವಂಡ ಅಪ್ಪಯ್ಯ, ನಂದಿನೆರವಂಡ ಅಯ್ಯಣ್ಣ, ಚೋಳಪಂಡ ನಾಣಯ್ಯ, ಅಜ್ಜಿನಿಕಂಡ ರಾಹುಲ್, ಮಣವಟ್ಟಿರ ನಂದಾ, ಬೊಟ್ಟಂಗಡ ಜಪ್ಪು ಧರಣಿಯಲ್ಲಿ ಭಾಗವಹಿಸಿದ್ದರು.

ಇದೇ ವೇಳೆ ಪ್ರತಿಭಟನಾಕಾರರು, ಗುರು–ಕಾರೋಣ, ಸೂರ್ಯ–ಚಂದ್ರ ಕಾವೇರಿ, ಭೂಮಿತಾಯಿ, ಪ್ರಕೃತಿ ಮಾತೆ ಮತ್ತು ಸಂವಿಧಾನದ ಹೆಸರಿನಲ್ಲಿ ಸಿಎನ್‌ಸಿಯ ರಾಜ್ಯಾಂಗದತ್ತ ಬೇಡಿಕೆಯ ಪರ ಪ್ರಮಾಣ ವಚನ ಸ್ವೀಕರಿಸಿದರು.

ಕೆ.ಡಿ.ರಾಮಣ್ಣ ನಿಧನ

ಗುಡ್ಡೆಹೊಸೂರು, ಜ.5–ಮೂಲತಃ ಸಿದ್ದಾಪುರ ಸಮೀಪದ ಕರಡಿಗೋಡು ಗ್ರಾಮದ ದಿವಂಗತ ಕುಕ್ಕೂನೂರು ದೇವಯ್ಯ ಅವರ ಪುತ್ರ ಹಾಗೂ ನಿವೃತ್ತ ಮುಖ್ಯ ಪೇದೆ ಕೆ.ಡಿ.ರಾಮಣ್ಣ (71) ಅವರು ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಬಂಧು–ಬಳಗವನ್ನು ಅಗಲಿದ್ದಾರೆ. ಕುಶಾಲನಗರದ ಗೌಡ ರುದ್ರಭೂಮಿಯಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿತು.

ಅಮೀನಾ

ನಾಪೋಕ್ಲು, ಜ.5–ಸಮೀಪದ ಹಳೇ ತಾಲೂಕಿನ ನಾಪೋಕ್ಲು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ದಿವಂಗತ



ಎಂ.ಎಂ.ಸಾದುಲಿ ಅವರ ಪತ್ನಿ ಅಮೀನಾ (90) ಬುಧವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಒಬ್ಬ ಪುತ್ರಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಹಳೇ ತಾಲೂಕು ಜುಮಾ ಮಸಿದಿಯ ಖಬರ್ ಸ್ಥಾನದಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿತು.

ನರಿಯಂದಡ ಗ್ರಾಮದಲ್ಲಿ ಮಂತ್ರಾಕ್ಷತೆ ಅಭಿಯಾನ



ನಾಪೋಕ್ಲು ಸಮೀಪದ ನರಿಯಂದಡ ಗ್ರಾಮದ ಭಗವತಿ ದೇವಾಲಯದಲ್ಲಿ ಅಯೋಧ್ಯ ರಾಮಮಂದಿರದ ಮಂತ್ರಾಕ್ಷತೆಗೆ ರಾಮಭಕ್ತ ಸಮಿತಿಯ ಸದಸ್ಯರು ಪೂಜೆ ಸಲ್ಲಿಸಿದರು.

ನಾಪೋಕ್ಲು, ಜ.5–ಸಮೀಪದ ನರಿಯಂದಡ ಗ್ರಾಮದಲ್ಲಿ ಅಯೋಧ್ಯ ರಾಮಮಂದಿರದ ಮಂತ್ರಾಕ್ಷತೆಯನ್ನು ರಾಮಭಕ್ತ ಸಮಿತಿಯ ಸದಸ್ಯರು ಅಭಿಯಾನ ಮೂಲಕ ವಿತರಿಸಿರು.

ಗ್ರಾಮದ ಭಗವತಿ ದೇವಾಲಯದಲ್ಲಿ ಮಂತ್ರಾಕ್ಷತೆಗೆ ಪೂಜೆ ಸಲ್ಲಿಸಿ ಗ್ರಾಮದ ಒಂದು ಹಾಗೂ ಎರಡನೇ ಬ್ಲಾಕಿನ ಮನೆ ಮನೆಗೆ ತೆರಳಿ ವಿತರಿಸಲಾಯಿತು. ಇದೇ ವೇಳೆ ಮಂತ್ರಾಕ್ಷತೆಯ ಉದ್ದೇಶ ಹಾಗೂ ಪಾಲನೆಯ ಬಗ್ಗೆ ವಿವರಿಸಲಾಯಿತು.

ಈ ಸಂದರ್ಭ ಭಗವತಿ ದೇವಸ್ಥಾನದ ಅಧ್ಯಕ್ಷ ಬಟ್ಟಿಯಂಡ ಜಯರಾಂ, ರಾಮ ಭಕ್ತ ಸಮಿತಿಯ ಸದಸ್ಯರಾದ ಕುಕ್ಕೆಮನೆ ನಾರಾಯಣಮೂರ್ತಿ, ಮಕ್ಕಿಮನೆ ಸುದೀರ್, ಚೆಯ್ಯಂಡ ಲವ ಅಪ್ಪಚ್ಚು, ಮುಂಡಿಯೊಳಂಡಿ ದಿನು ಚಂಗಪ್ಪ, ಬೆಳಿಯಂಡ್ರ ಹರಿಪ್ರಸಾದ್, ಶರಣು, ರಾಜಾರಾಮ್, ಬಟ್ಟಿಯಂಡ ಅಶೋಕ್, ಸತೀಶ್, ಸಂಪತ್ ಮತ್ತಿತರರು ಇದ್ದರು.

ಕಸಾಪದಿಂದ ಮಾತೃ ಭಾಷೆ ಉಳಿವು ಸಾಧ್ಯ



ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸೋಮೆಯಂಡ ಕೌಶಲ್ಯ ಸತೀಶ್ ಅವರನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ, ಜ.5– ಮಾತೃ ಭಾಷೆ ಉಳಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದು ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಜೆ.ಸಿ.ಜಯಂತಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮೀಪದ ಕೊಂಡಂಗೇರಿ ಸರ್ಕಾರಿ ಪ್ರೌಢಶಾಲಾ ಸಭಾಂಗಣದಲ್ಲಿ ವಿರಾಜಪೇಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಡೆದ ವಿಜಯ ವಿಷ್ಣುಭಟ್ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಅಭಿವೃದ್ಧಿಗೆ ಹಲವು ಕಾರ್ಯಕ್ರಮಗಳ ಅಗತ್ಯವಿದೆ. ಈ ನಿಟ್ಟಿನಲ್ಲಿ ಕಸಾಪ ಉತ್ತಮ ಕಾರ್ಯಕ್ರಮವನ್ನು ನಡೆಸುತ್ತಿದೆ. ಪ್ರತಿಯೊಬ್ಬರು ಸಾಹಿತ್ಯದ ಅಭಿರುಚಿ ಮೂಡಿಸಿಕೊಂಡು ಸಾಹಿತ್ಯವನ್ನು ಉಳಿಸಬೇಕು ಎಂದರು.

'ಕೊಡಗಿನ ಮಹಿಳಾ ಸಾಹಿತಿಗಳು' ಕುರಿತು ಉಪನ್ಯಾಸ ನೀಡಿದ ಸೋಮೆಯಂಡ ಕೌಶಲ್ಯ ಸತೀಶ್, ಶತಮಾನ ಗಳಿಂದಲೂ ನಮ್ಮ ಕವಿಗಳು ಕನ್ನಡ ಭಾಷೆಯನ್ನು ಅತ್ಯಂತ ಕಳಜಿಯಿಂದ ಕಾಪಾಡಿಕೊಂಡು ಬಂದಿದ್ದಾರೆ. ಕವಿಗಳು ಕವಿತೆ ಬರೆಯುವುದು ಮಾತ್ರವಲ್ಲದೇ, ತಮ್ಮ ನಾಡು–ನುಡಿಯನ್ನು ಕಾಪಾಡುವ ಕಾರ್ಯ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಮಹಿಳೆಯರ ಪ್ರತಿಭೆ ಅನಾವರಣಗೊಳ್ಳಲು ಪುರುಷರ ಸಹಕಾರ ಅತ್ಯಗತ್ಯ. ಮಹಿಳೆ ಕುಟುಂಬದ ಜವಾಬ್ದಾರಿಯುತ ಸ್ಥಾನದಲ್ಲಿದ್ದು, ಮಕ್ಕಳ ಭವಿಷ್ಯವನ್ನು ರೂಪಿಸಿ ಪರಿಪೂರ್ಣ ವ್ಯಕ್ತಿತ್ವ ಬೆಳೆಸಲು ಮಹಿಳೆಯರ ಪಾತ್ರ ಶಿಕ್ಷಣದಲ್ಲಿ ಉತ್ತಮ ಸ್ಥಾನ ಪಡೆದಿದೆ. ಜೊತೆಗೆ ವೈದ್ಯಕೀಯ, ಸೈನಿಕ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಿದ್ದಾಳೆ. ಮಹಿಳೆಯರ ಸಬಲೀಕರಣಕ್ಕೆ ಶಿಕ್ಷಣವೇ ಬುನಾದಿ. ಮಹಿಳೆ ಸದಾ ಸಾಮಾಜಿಕ ವ್ಯವಸ್ಥೆಯ ಭದ್ರತೆಗೆ ಶ್ರಮಿಸುತ್ತಾಳೆ ಎಂದರು.

ವಿರಾಜಪೇಟೆ ತಾಲೂಕು ಕಸಾಪ ಅಧ್ಯಕ್ಷ ರಾಜೇಶ್ ಪದ್ಮನಾಭ ಮಾತನಾಡಿ, ಸುಲಭ ಹಾಗೂ ಸುಲಲಿತವಾಗಿ ಅರ್ಥವಾಗುವ ಭಾಷೆ ಕನ್ನಡ. ಬದುಕು ರೂಪಿಸಿಕೊಳ್ಳಲು ಹಲವು ಭಾಷೆಯ ಅಗತ್ಯವಿದ್ದರು ಕನ್ನಡ ಭಾಷೆಯನ್ನು ಪ್ರೀತಿಸಿ ಗೌರವಿಸುವ ಕಾರ್ಯವಾಗಬೇಕು. ಇತ್ತೀಚೆಗೆ ಕನ್ನಡದ ಸಂಪತ್ತು ಕಡಿಮೆಯಾಗಿದೆ. ಕನ್ನಡಿಗರು ತಮ್ಮ ಸಂಕುಚಿತ ಮನೋಭಾವನೆ ಬಿಟ್ಟು, ಸಾಂಸ್ಕೃತಿಕ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ಹೇಳಿದರು.

ಇದೇ ವೇಳೆ ಸೋಮೆಯಂಡ ಕೌಶಲ್ಯ ಹಾಗೂ ಕನ್ನಡ ವಿಷಯದಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಸಲ್ಮಾನ್ ಪ್ಯಾರೀಸ್ ಅವರನ್ನು ಸನ್ಮಾನಿಸಲಾಯಿತು. ಕಾಪ ಅಮ್ಮತ್ತಿ ಹೋಬಳಿ ಘಟಕದ ಟಿ.ಹೆಚ್. ಮಂಜುನಾಥ್, ಕಸಾಪ ಗೌರವ ಕಾರ್ಯದರ್ಶಿ ಹೆಚ್.ಜಿ.ಸಾವಿತ್ರಿ, ಸಾಹಿತಿ ರಜಿತಾ ಕಾರ್ಯಪ್ಪ ಶಿಕ್ಷಕಿ ಲವಿನಾ, ಪ್ರೌಢಶಾಲೆ ಆಡಳಿತ ಮಂಡಳಿಯ ಅಧ್ಯಕ್ಷ ಅಬ್ದುಲ್ ಖಾದರ್ ಇದ್ದರು.

ಕೈಮಗ್ಗ ಉತ್ಪನ್ನ ಮಾರಾಟ ಮೇಳಕ್ಕೆ ಚಾಲನೆ

ಮಡಿಕೇರಿ, ಜ.5–ಕೈಮಗ್ಗ ಮತ್ತು ಜವಳಿ ಇಲಾಖೆ ಹಾಗೂ ಜಿಲ್ಲಾಡಳಿತ, ಜಿಪಂ ವತಿಯಿಂದ ನಗರದ ಗಾಂಧಿ ಮೈದಾನದಲ್ಲಿ ಒಂದು ವಾರ (ಜ.12 ವರೆಗೆ) ಹಮ್ಮಿಕೊಂಡಿರುವ 'ಕಾವೇರಿ ವಸ್ತ್ರಸಿರಿ' ಜಿಲ್ಲಾ ಮಟ್ಟದ ಕೈಮಗ್ಗ ಉತ್ಪನ್ನಗಳ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ ಶುಕ್ರವಾರ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಚಾಲನೆ ನೀಡಿದರು.

ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸತೀಶ್, ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕ ಗುರುಸ್ವಾಮಿ ಮಾತನಾಡಿದರು. ಚಿಕ್ಕಬಳ್ಳಾಪುರ, ಬೆಂಗಳೂರು, ತುಮಕೂರು, ಚಾಮರಾಜನಗರ, ಹಾಸನ, ಗುಬ್ಬಿ, ಶಿವಮೊಗ್ಗ, ಬಾಗಲಕೋಟೆ, ಗದಗ ಜಿಲ್ಲೆಯ ಲಕ್ಷ್ಮೇಶ್ವರ, ಕೊಡಗು ಜಿಲ್ಲೆಯ ಕುಶಾಲನಗರ, ಪೊನ್ನಂಪೇಟೆ, ಹೀಗೆ ವಿವಿಧ ಜಿಲ್ಲೆ ಹಾಗೂ ತಾಲೂಕುಗಳಿಂದ ಕೈಮಗ್ಗ ನೇಕಾರರು ಆಗಮಿಸಿ 20ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಿದ್ದಾರೆ. ನಗರಸಭಾ ಸದಸ್ಯ ಅಪ್ಪಣ್ಣ, ಜಿಪಂ ಮುಖ್ಯ ಯೋಜನಾಧಿಕಾರಿ ರಿಝ್ವಲ್‌ಖಾನ್, ಪೊನ್ನಂಪೇಟೆ ನೇಕಾರರ ಸಹಕಾರ ಸಂಘದ ಅಧ್ಯಕ್ಷ ಪಿ.ಕೆ.ದೇವಾನಂದ, ಕುಶಾಲನಗರ ನೇಕಾರರ ಸಹಕಾರ ಸಂಘದ ಕಾರ್ಯದರ್ಶಿ ಸವಿತಾ, ಇತರರು ಇದ್ದರು.

ಆಧಾರ್ ನೋಂದಣಿ ಕಾರ್ಯ ಜವಾಬ್ದಾರಿಯುತ ನಿರ್ವಹಣೆಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಸೂಚನೆ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾಮಟ್ಟದ ಆಧಾರ್ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿದರು.

ಚಾಮರಾಜನಗರ, ಜ.5– ಜನಸಾಮಾನ್ಯರಿಗೆ ಅತ್ಯಾವಶ್ಯಕ ಗುರುತಿನ ದಾಖಲೆಯಾಗಿರುವ ಆಧಾರ್ ನೊಂದಣಿ, ನವೀಕರಣ ಕಾರ್ಯಗಳನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾಮಟ್ಟದ ಆಧಾರ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸರ್ಕಾರದ ಯಾವುದೇ ಸೌಲಭ್ಯ ಪಡೆಯುವುದು, ಸಕಾಲ ಸೇವೆಗಳು ಸೇರಿದಂತೆ ಇತರೆ ಕಾರ್ಯಗಳಿಗೂ ಆಧಾರ್ ಗುರುತಿನ ದಾಖಲೆ ಪ್ರತಿಯೊಬ್ಬರಿಗೂ ಅಗತ್ಯವಾಗಿದೆ. ನಾಗರಿಕರ ಬ್ಯಾಂಕ್ ಖಾತೆಗೆ ಮೊಬೈಲ್ ಸಂಖ್ಯೆಗೆ ಆಧಾರ್ ಸೀಡಿಂಗ್ ಕಡ್ಡಾಯವಾಗಿದೆ. ಈ ನಿಟ್ಟಿನಲ್ಲಿ ಆಧಾರ್ ನೊಂದಣಿ, ತಿದ್ದುಪಡಿ ಹಾಗೂ ನವೀಕರಣ ಕಾರ್ಯಗಳಲ್ಲಿ ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿಯವರು ನಿರ್ದೇಶನ ನೀಡಿದರು.

ಸಾರ್ವಜನಿಕರ ಅನುಕೂಲಕ್ಕಾಗಿ ಜಿಲ್ಲಾಧಿಕಾರಿ ಕಚೇರಿಯ ಸ್ಪಂದನಾ ಕೇಂದ್ರ, ತಾಲೂಕು ಕಚೇರಿ, ನಾಡಕಚೇರಿ, ಗ್ರಾಮ ಒನ್ ಕೇಂದ್ರ, ಗ್ರಾಮ ಪಂಚಾಯಿತಿ ಕಚೇರಿ, ಸಾಮಾನ್ಯ ಸೇವಾ ಕೇಂದ್ರ ಬಿಎಸ್‌ಎನ್‌ಎಲ್ ಕಚೇರಿ, ಅಂಚೆ ಕಚೇರಿ ಹಾಗೂ ಸ್ಟೇಟ್ ಬ್ಯಾಂಕ್ ಮತ್ತು ಇತರೆ ಬ್ಯಾಂಕ್‌ಗಳಲ್ಲಿ ಆಧಾರ್ ನೊಂದಣಿ, ತಿದ್ದುಪಡಿ ಹಾಗೂ ನವೀಕರಣ ಕಾರ್ಯ ನಿರ್ವಹಿಸಲಾಗುತ್ತಿದೆ. ಆಧಾರ್ ನೊಂದಣಿಯಿಂದ ಯಾರು ಕೂಡ ವಂಚಿತರಾಗದಂತೆ ಎಚ್ಚರ ವಹಿಸಲು ಅಧಿಕಾರಿಗಳಿಗೆ ತಿಳಿಸಿದರು.

ಈಗಾಗಲೇ ಆಧಾರ್ ನೊಂದಣಿಯಾಗಿ 10 ವರ್ಷಗಳಿಂದ ಒಂದೇ ವಿಳಾಸದಲ್ಲಿರುವ ನಾಗರಿಕರು ಆಧಾರ್ ನವೀಕರಣ ಮಾಡಿಸಬೇಕು. ಜಿಲ್ಲೆಯಲ್ಲಿ ನೊಂದಣಿಯಾಗಿರುವ 10,96,117ರ ಪೈಕಿ 3,20,656 ಜನರು ನವೀಕರಣ ಮಾಡಿಸಿಕೊಳ್ಳಬೇಕಾಗಿದೆ ಅಲ್ಲದೆ ನೋಂದಣಿಯಾಗಿರುವ 10,96,117ರ ಪೈಕಿ 4,72,147 ಜನರು ಮೊಬೈಲ್ ಸಂಖ್ಯೆಗೆ ಆಧಾರ್ ಸೀಡಿಂಗ್ ಮಾಡಿಸಿಕೊಳ್ಳುವುದು ಬಾಕಿ ಉಳಿದಿದೆ. ಆಧಾರ್ ಸೀಡಿಂಗ್ ಆಗದಿದ್ದರೆ ಸೌಲಭ್ಯಗಳಿಂದ ವಂಚಿತರಾಗುವ ಸಂಭವವಿರುವುದರಿಂದ ಅಧಿಕಾರಿಗಳು ನಾಗರಿಕರೊಂದಿಗೆ ಸಹಕರಿಸಬೇಕೆಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಬೆಂಗಳೂರಿನ ಆಧಾರ್ ಯುಐಡಿಐಎಐ ಉಪನಿರ್ದೇಶಕ ರಾಘವೇಂದ್ರ ಜಿಲ್ಲಾ ಆಧಾರ್ ಸಮಾಲೋಚಕ ಪ್ರಭುಸ್ವಾಮಿ, ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಅಂಚೆ ಕಚೇರಿ ನಿರೀಕ್ಷಕರು ಸಭೆಯಲ್ಲಿ ಇದ್ದರು. ಎಲ್ಲಾ ತಾಲೂಕು ತಹಸೀಲ್ದಾರರು ವರ್ಚುವೆಲ್ ಮೂಲಕ ಭಾಗವಹಿಸಿದ್ದರು.

ವಿವಿಧ ಕಾಮಗಾರಿಗಳಿಗೆ ಶಾಸಕರಿಂದ ಚಾಲನೆ



ಕೊಳ್ಳೇಗಾಲ ತಾಲೂಕಿನ ಚಿಲಕವಾಡಿ ಗ್ರಾಮದಲ್ಲಿ 35 ಲಕ್ಷ ಅಂದಾಜಿನಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ಕೊಳ್ಳೇಗಾಲ, ಜ.5– ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 35 ಲಕ್ಷ ವೆಚ್ಚದಲ್ಲಿ ವಿವಿಧ ಗ್ರಾಮಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಶುಕ್ರವಾರ ಚಾಲನೆ ನೀಡಿದರು.

ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ 35 ಲಕ್ಷ ವೆಚ್ಚದಲ್ಲಿ ಚಿಲಕವಾಡಿ ಬೆಟ್ಟದ ಮುಖ್ಯ ರಸ್ತೆಯಿಂದ ಕರಡಿಮಠದವರೆಗೆ, ಕರಡಿಮಠದಿಂದ ಲೈಬ್ರರಿಗೆ ಹೋಗುವ ರಸ್ತೆ ಮಲ್ಲಹಳ್ಳಿ ಮಾಳದ ಹೊಸ ಬಡಾವಣೆ ರಸ್ತೆ ಅಭಿವೃದ್ಧಿ ಹಾಗೂ ಲಕ್ಕರಸನಪಾಳ್ಯ, ಕುಣಗಳ್ಳಿ ಗ್ರಾಮಗಳ್ಳಿ ಸಿಸಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನಡೆಸಿದರು.

ಬಳಿಕ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಗುಣಮಟ್ಟದ ಕಾಮಗಾರಿ ನಡೆಸಿ ಕ್ಷೇತ್ರದ ಪ್ರಗತಿಗೆ ಕೈ ಜೋಡಿಸಿ ಎಂದರು. ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಇಂದು ಚಾಲನೆ ನೀಡಲಾಗಿದೆ. ಈ ಎಲ್ಲಾ ಕಾಮಗಾರಿಯನ್ನು ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಗುಣಮಟ್ಟದ ರಸ್ತೆಯನ್ನು ನಿರ್ಮಾಣ ಮಾಡುವಂತೆ ಗುತ್ತಿಗೆದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಕುಂತೂರು ಗ್ರಾಪಂ ಅಧ್ಯಕ್ಷೆ ಗಂಗಮ್ಮಣಿ, ಉಪಾಧ್ಯಕ್ಷೆ ನಾಗರತ್ನಮ್ಮ, ಸದಸ್ಯರಾದ ರೂಪ, ರತ್ನಮ್ಮ ಉಷಾ, ಬಿ. ರವಿ, ಶಿವಣ್ಣ, ಪುರುಷೋತ್ತಮ್, ಜಿಪಂ ಎಇಇ ಶಿವಪ್ರಕಾಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಕಾರ್ಯದರ್ಶಿ ಬಸ್ತೀಪುರ ರವಿ, ಗುತ್ತಿಗೆದಾರ ಫೈರೋಜ್, ರಾಜೇಂದ್ರ ಇದ್ದರು.

ಜ.10, ಕೊಳ್ಳೇಗಾಲಕ್ಕೆ ಲೋಕಾಯುಕ್ತ ಅಧಿಕಾರಿಗಳ ಭೇಟಿ

ಚಾಮರಾಜನಗರ, ಜ.5– ಲೋಕಾಯುಕ್ತ ಅಧಿಕಾರಿಗಳು ಜನವರಿ 10ರಂದು ಕೊಳ್ಳೇಗಾಲದ ಪ್ರವಾಸಿಮಂದಿರದಲ್ಲಿ ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ.

ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಭೇಟಿ ನೀಡಲಿದ್ದು, ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕ ಕೆಲಸಗಳಿಗೆ ಲಂಚದ ಬೇಡಿಕೆ, ಯಾವುದೇ ಸರ್ಕಾರಿ ನೌಕರರ ಅಕ್ರಮ ಆಸ್ತಿ ಗಳಿಕೆಯ ಬಗ್ಗೆ ಮಾಹಿತಿ, ಸರ್ಕಾರಿ ಕಚೇರಿ ಕೆಲಸದ ಅನಗತ್ಯ ವಿಳಂಬ, ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ ಹಾಗೂ ನೌಕರರ ವಿರುದ್ಧ ಲೋಕಾಯುಕ್ತ ಕಾಯ್ದೆಯಡಿ ಸಾರ್ವಜನಿಕರು ದೂರುಗಳನ್ನು ನಿಗದಿತ ನಮೂನೆ–1 ಮತ್ತು 2ರಲ್ಲಿ ಭರ್ತಿ ಮಾಡಿ ನೀಡಬಹುದು.

ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೌರಕಾರ್ಮಿಕರಿಗೆ ಬೆಚ್ಚನೆಯ ಉಡುಪು ವಿತರಣೆ



ಡಾ.ಎಸ್.ಪಿ ಬಾಲಸುಬ್ರಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ ಜಿಲ್ಲಾ ಘಟಕದ ವತಿಯಿಂದ ಪೌರಕಾರ್ಮಿಕರಿಗೆ ಬೆಚ್ಚನೆಯ ಉಡುಪು ವಿತರಿಸಲಾಯಿತು.

ಚಾಮರಾಜನಗರ, ಜ.5– ಮಾತೆ ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನದ ಅಂಗವಾಗಿ ಡಾ.ಎಸ್.ಪಿ ಬಾಲಸುಬ್ರಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ ಜಿಲ್ಲಾ ಘಟಕದ ವತಿಯಿಂದ ಪೌರಕಾರ್ಮಿಕರಿಗೆ ಬೆಳಗಿನ ಜಾವ ಬೆಚ್ಚನೆಯ ಉಡುಪು ವಿತರಣೆ ಮಾಡಲಾಯಿತು.

ವೇದಿಕೆಯ ಗೌರವಾಧ್ಯಕ್ಷ ಸುರೇಶ್ ಗೌಡ ಮಾತನಾಡಿ, ಪೌರಕಾರ್ಮಿಕರು ಚಳಿಗಾಲದಲ್ಲಿ ಕೆಲಸಗಳಲ್ಲಿ ತೊಡಗಿರುತ್ತಾರೆ ಇವರಿಗೆ ನಮ್ಮ ಕಲಾವೇದಿಕೆಯಿಂದ ಬೆಚ್ಚನೆಯ ಉಡುಪುಗಳನ್ನು ವಿತರಣೆ ಮಾಡಿ ಗೌರವಿಸಲಾಯಿತು. ಇದೇ ರೀತಿ ನಮ್ಮ ಕಲಾವೇದಿಕೆ ವತಿಯಿಂದ ಅನೇಕ ಕೆಲಸಗಳನ್ನು ಮಾಡುತ್ತಾ ಬಂದಿದ್ದು, ಇದೇ ರೀತಿ ಮುಂದಿನ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡ ಲಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಎಚ್.ಎಂ. ಶಿವಣ್ಣ, ಪ್ರಧಾನ ಕಾರ್ಯದರ್ಶಿ ಡಿ.ರಾಜಣ್ಣ, ಜಂಟಿ ಕಾರ್ಯದರ್ಶಿ ಜೋಸೆಫ್, ಖಜಾಂಚಿ ಸಿ.ಡಿ. ಪ್ರಕಾಶ್, ಸಂಘಟನಾ ಕಾರ್ಯದರ್ಶಿ ದೈಹಿಕ ಶಿಕ್ಷಣ ಶಿಕ್ಷಕ ಜಯರಾಜು, ಸಮಾಜ ಸೇವಕರಾದ ಡಾ.ಪರಮೇಶ್ವರಪ್ಪ, ಸಂಘದ ಸದಸ್ಯರಾದ ಶೇಷಣ್ಣ ನಲ್ಲೂರು, ವಸಂತ, ಬಂಗಾರು, ಮಹೇಶ್‌ಕುಮಾರ್ ಕೆಇಬಿ, ಶಿವಶಂಕರ್ ಹಾಜರಿದ್ದರು.

ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಜ.5– ಎಸ್‌ಬಿಐ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆಯಿಂದ ಉಚಿತವಾಗಿ ಗ್ರಾಮೀಣ ಯುವಕ ಯುವತಿಯರಿಗೆ ಬ್ಯೂಟಿ ಪಾರ್ಲರ್ ಮತ್ತು ಜೂಟ್ ಬ್ಯಾಗ್ ತಯಾರಿಕಾ ತರಬೇತಿಗೆ ಅರ್ಜಿ ಆಹ್ವಾನಿಸಿದೆ. ನಗರದ ಬಿ.ರಾಚಯ್ಯ ಜೋಡಿರಸ್ತೆಯ ಎಸ್‌ಬಿಐ ಗ್ರಾಮೀಣ ತರಬೇತಿ ಸಂಸ್ಥೆಯಲ್ಲಿ ಅರ್ಜಿ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ದೂ: 08226–200214, ಮೊ.9606098878, 8722483393, ಇ–ಮೇಲ್ rsetichamarajanagar.ks @gmail.com ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಇಂದು ಚಾ.ನಗರಕ್ಕೆ ವಿಜಯೇಂದ್ರ ಭೇಟಿ

ಚಾಮರಾಜನಗರ, ಜ.5– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಜಿಲ್ಲಾ ಕೇಂದ್ರವಾದ ಚಾಮರಾಜನಗರಕ್ಕೆ ನಾಳೆ (ಜ.6) ಭೇಟಿ ನೀಡಲಿದ್ದಾರೆ. ಪಕ್ಷದ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡ ನಂತರ ಅವರ ಪ್ರಥಮ ಭೇಟಿ ಇದಾಗಿದೆ. ಇದರಿಂದ ಪಕ್ಷದ ಮುಖಂಡರು, ಕಾರ್ಯಕರ್ತರಲ್ಲಿ ಹಾಗೂ ವಿಜಯೇಂದ್ರ ಅಭಿಮಾನಿಗಳಲ್ಲಿ ಹುರುಪು ತಂದಿದೆ.



ಶನಿವಾರ ಬೆಳಗ್ಗೆ 11.30ಕ್ಕೆ ನಗರಕ್ಕೆ ಆಗಮಿಸಲಿರುವ ವಿಜಯೇಂದ್ರ ಅವರನ್ನು ಸಿಂಹ ಮೂವೀ ಪ್ಯಾರಡೈಸ್ ಚಿತ್ರ ಮಂದಿರದ ಬಳಿ ಅದ್ದೂರಿಯಾಗಿ ಸ್ವಾಗತಿ ಸಲು ಸಿದ್ಧತೆ ಕೈಗೊಳ್ಳಲಾಗಿದೆ. ನಂತರ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡ ನಂತರ ರಾಮಸಮುದ್ರ ದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಿದ್ದಾರೆ. ಬಳಿಕ ಪಕ್ಷದ ಜಿಲ್ಲಾ ಕಚೇರಿಗೆ ಭೇಟಿ ನೀಡು ವರು ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ರೈತ ಸಂಘ, ಹಸಿರು ಸೇನೆ ಗ್ರಾಮ ಘಟಕ ಉದ್ಘಾಟನೆ



ಬೇಗೂರು ಸಮೀಪದ ಯಡವನಹಳ್ಳಿ ಗ್ರಾಮದಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗ್ರಾಮ ಘಟಕ ಉದ್ಘಾಟನೆ ಮಾಡಲಾಯಿತು.

ಬೇಗೂರು(ಗುಂಡ್ಲುಪೇಟೆ), ಜ.5– ಸಮೀಪದ ಯಡವನಹಳ್ಳಿ ಗ್ರಾಮದಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗ್ರಾಮ ಘಟಕವನ್ನು ಕರ್ನಾಟಕ ರಾಜ್ಯ ರೈತ ಸಂಘ ಜಿಲ್ಲಾಧ್ಯಕ್ಷ ಹೊನ್ನೂರ್ ಪ್ರಕಾಶ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದು 76 ವರ್ಷಗಳು ಕಳೆದರೂ ಇಲ್ಲಿನ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳು ಮರೀಚಿಕೆಯಾಗಿವೆ. ದಿನ ಬೆಳಗಾದರೆ ರೈತರಿಗೆ ಆನೆಗಳ ಮತ್ತು ಕಾಡುಪ್ರಾಣಿಗಳ ಕಾಟ, ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಬೇಗೂರಿನ ಐಟಿಐ ಕಾಲೇಜು ವಿದ್ಯಾರ್ಥಿಗಳಿಗೆ ಬಸ್ಸಿನ ವ್ಯವಸ್ಥೆ ಇಲ್ಲದಿರುವುದು ಹಾಗೂ ತಾಲೂಕು ಕಚೇರಿ ಮತ್ತು ಬೇಗೂರು ನಾಡಕಚೇರಿಗಳಲ್ಲಿ ರೈತರು ದಿನ ಅಲೆಯುವ ಪರಿಸ್ಥಿತಿ ಇದೆ.

ಜೊತೆಗೆ ಗ್ರಾಮಗಳ ಸಮಸ್ಯೆಗಳನ್ನು ಇಲ್ಲಿನ ಜನಪ್ರತಿನಿಧಿ, ಅಧಿಕಾರಿಗಳ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ತರುವ ಮೂಲಕ ಬೇಗೂರು ಭಾಗದಲ್ಲಿ ಉಗ್ರ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುತ್ತದೆ ಎಂದರು

ಕಾರ್ಯಕ್ರಮದಲ್ಲಿ ರೈತ ಮುಖಂಡ ಹಂಬಳೆ ಕುಮಾರ, ಮಂಚಹಳ್ಳಿ ಎಂ.ಎನ್ ಮಣಿಕಂಠ, ನಾಯಕ್, ಬೆಟ್ಟೇಗೌಡ, ಬೆಟ್ಟದ ಮಾದಹಳ್ಳಿ ಷಣ್ಮುಗ ಸ್ವಾಮಿ, ಶ್ರೀನಿವಾಸ್, ಮಂಜುನಾಥ್, ಬಿ.ಎಮ್‌ಮಹದೇವ್, ಬಸವಲಿಂಗ, ಸ್ವಾಮಿ, ನಾಗಪ್ಪ, ಬೆಳ್ಳಶೆಟ್ಟಿ, ಮಹೇಶ್, ಪುಟ್ಟಸ್ವಾಮಿ, ಶ್ರೀರಾಮುಲು, ಮರಿಶೆಟ್ಟಿ, ಇನ್ನಿತರ ರೈತ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಹೆಚ್. ರಂಗದಾಸಯ್ಯ ನಿಧನ



ಬೇಗೂರು(ಗುಂಡ್ಲುಪೇಟೆ), ಜ.5– ಸಮೀಪದ ಸೋಮಹಳ್ಳಿ ಗ್ರಾಮದ ನಿವಾಸಿ ಹೆಚ್.ರಂಗದಾಸಯ್ಯ (85) ಶುಕ್ರವಾರ ಮಧ್ಯಾಹ್ನ ನಿಧನರಾಗಿದ್ದಾರೆ. ಇವರು ಉಪ ಅರಣ್ಯ ಸಂರಕ್ಷಣಾ ಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದರು. ಮೃತರು ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಸ್ವಗ್ರಾಮ ಸೋಮಹಳ್ಳಿಯ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿರುತ್ತಾರೆ.

ಗೃಹ ಸಚಿವ ಡಾ. ಜಿ. ಪರಮೇಶ್ವರ್ ವಿರುದ್ಧ ಬಿಜೆಪಿ ಪಿತೂರಿ

ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಆರೋಪ

ಮೈಸೂರು,ಜ.5(ಎಂಟಿವೈ)– ರಾಜ್ಯದಲ್ಲಿ ಸಣ್ಣ ಸಣ್ಣ ಘಟನೆಗಳನ್ನು ದೊಡ್ಡದಾಗಿ ವೈಭವೀಕರಿಸುತ್ತಿರುವ ಬಿಜೆಪಿ ನಾಯಕರು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಪಿತೂರಿ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಕಿಡಿಕಾರಿದರು.



ಹೆಚ್. ಎ.ವೆಂಕಟೇಶ್

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹಿರಿಯ ಮುತ್ಸದ್ದಿ ನಾಯಕರು ಹಾಗೂ ಉತ್ತಮ ರಾಜಕಾರಣಿ. ಹತ್ತಾರು ಖಾತೆಗಳನ್ನು ನಿರ್ವಹಿಸಿ ಆ ಖಾತೆಗಳಿಗೆ ಶಕ್ತಿಯನ್ನು ತುಂಬಿದ್ದಾರೆ. ಗೃಹ ಮಂತ್ರಿಯಾಗಿ ಪರಮೇಶ್ವರ್ ಪೊಲೀಸ್ ಇಲಾಖೆಯಲ್ಲಿ ನೀಡಿದಷ್ಟು ಬಡ್ತಿಗಳನ್ನು ಇದುವರೆಗೂ ಯಾರೂ ಕೊಟ್ಟಿಲ್ಲ. ಪೊಲೀಸರ ರಕ್ಷಣೆ ಮತ್ತು ಅವರನ್ನು ಹೆಚ್ಚು ಕ್ರಿಯಾಶೀಲರನ್ನಾಗಿ ಮಾಡುವ ಕೆಲಸವನ್ನು ಪರಮೇಶ್ವರ್ ಮಾಡುತ್ತಿದ್ದಾರೆ ಎಂದರು.

ಪ್ರಸ್ತುತ ಹಳೆ ಪ್ರಕರಣವೊಂದನ್ನು ಕುರಿತಂತೆ ಪರಮೇಶ್ವರ್ ಅವರ ವಿರುದ್ಧ ಆರೋಪ ಮಾಡಲಾಗುತ್ತಿದೆ. ಹೈಕೋರ್ಟ್ ಆದೇಶಕ್ಕೆ ಅನುಗುಣವಾಗಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಉನ್ನತ ನ್ಯಾಯಾಲಯಗಳು, ಕೇಂದ್ರ ಸರ್ಕಾರದ ಆದೇಶವೂ ಇದೆ. ಹಲವು ಪ್ರಕರಣ ಬಾಕಿ ಉಳಿದಿವೆ. ಶೀಘ್ರವೇ ವಿಚಾರಣೆ ಮಾಡಿ ಮುಗಿಸಿ ಎಂಬ ನಿಯಮವಿದೆ ಆ ಆದೇಶವನ್ನು ಸರ್ಕಾರ ಪಾಲಿಸುತ್ತಿದೆ. ಪೊಲೀಸರ ಆತ್ಮಸ್ಥೈರ್ಯ ಕುಗ್ಗಿಸಬಾರದು. ಕೇವಲ ಟೀಕೆಗೋಸ್ಕರ ಆರೋಪ ಮಾಡುತ್ತಿರುವುದನ್ನು ಪಕ್ಷಗಳು ಕೈಬಿಡಬೇಕು. ರಾಜ್ಯದಲ್ಲಿ ಶಾಂತಿ ನೆಲಸಲು, ಜನರು ನೆಮ್ಮದಿಯಾಗಿರಲು ಬೇಕಾದ ವಾತಾವರಣವನ್ನು ಸರ್ಕಾರ ನಿರ್ಮಿಸುತ್ತಿದೆ ಎಂದು ತಿಳಿಸಿದರು.

ಬೈಕ್‌ನಿಂದ ಬಿದ್ದು ಯುವಕ ಸಾವು

ಕುಶಾಲನಗರ, ಜ. 5– ನಿಯಂತ್ರಣ ತಪ್ಪಿ ಬೈಕ್‌ನಿಂದ ಬಿದ್ದು ಯುವಕ ಸಾವನ್ನಪ್ಪಿದ ಘಟನೆ ಕುಶಾಲನಗರ ಸಮೀಪದ ಚಿಕ್ಕಅಳುವಾರ ಗ್ರಾಮದ ಬಳಿ ಸಂಭವಿಸಿದೆ.

ಇದೇ ಗ್ರಾಮದ ಎ.ಇ. ಚರಣ್(21) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜನವರಿ 3ರಂದು ರಾತ್ರಿ 9.45ರಲ್ಲಿ ಹೆಬ್ಬಾಲೆ ಗ್ರಾಮದಿಂದ ತನ್ನ ಸ್ವಗ್ರಾಮಕ್ಕೆ ಹೀರೋ ಹೋಂಡಾ ಸ್ಪ್ಲೆಂಡರ್ ಬೈಕ್ (ಕೆಎ 11–ವಿ 4150)ನಲ್ಲಿ ತೆರಳುತ್ತಿದ್ದಾಗ, ಚಿಕ್ಕಾಳುವಾರ ಗ್ರಾಮದ ಹಳೇ ದಾಳಿಂಬೆ ತೋಟದ ಮುಂಭಾಗದ ರಸ್ತೆಯಲ್ಲಿ ನಿಯಂತ್ರಣ ತಪ್ಪಿ ಬೈಕ್‌ನಿಂದ ಬಿದ್ದು, ತೀವ್ರವಾಗಿ ಗಾಯಗೊಂಡಿದ್ದಾರೆ. ಅದೇ ರಸ್ತೆಯಲ್ಲಿ ಪಿಕ್‌ಅಪ್ ವಾಹನದಲ್ಲಿ ಬರುತ್ತಿದ್ದ ಸಹೋದರ ಎ.ಇ.ಚೇತನ್, ಗಾಯಗೊಂಡಿದ್ದ ತನ್ನ ಸಹೋದರನನ್ನು ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದೊಯ್ಯುವ ಮಾರ್ಗಮಧ್ಯೆ ಚರಣ್ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್. ರೂಪಾಗೆ ಪಿಎಚ್.ಡಿ ಪದವಿ



ಮೈಸೂರು, ಜ. 5– ಹುಣಸೂರು ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಣಿತಶಾಸ್ತ್ರ ಪ್ರಾಧ್ಯಾಪಕ ಡಾ. ಎಂ.ಆರ್. ರಾಜೇಶ್ ಕಣ್ಣ ಅವರ ಮಾರ್ಗದರ್ಶನದಲ್ಲಿ ಎಸ್. ರೂಪಾ ಅವರು ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ರಾಜಸ್ಥಾನದ ಕೆರಿಯರ್ ಪಾಯಿಂಟ್ ವಿಶ್ವವಿದ್ಯಾನಿಲಯವು ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ. ರೂಪ ಅವರು ಮೂಲತಃ ಪಡುವಾರಹಳ್ಳಿಯ ನಿವಾಸಿ ನಿವೃತ್ತ ಸಹಾಯಕ ತೋಟಗಾರಿಕೆ ಅಧಿಕಾರಿ ಸಿ. ಶಿವಶಂಕರ್ ಮತ್ತು ಶ್ರೀಮತಿ ಪಾರ್ವತಿ ದಂಪತಿ ಪುತ್ರಿ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಟೆಲಿಮಾರ್ಕೆಟಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ:12,000/- ರಿಂದ 15,000/-
ಸಂಪರ್ಕಿಸಿ:
96114 77707
76768 41708

ಸೈಟ್ ಮಾರಾಟಕ್ಕಿದೆ
40x60 S/F
ಸುವರ್ಣ ನಗರ
ಬೋಗಾದಿ
40 ಅಡಿ ರೋಡ್,
ಬೆಲೆ: 48 ಲಕ್ಷ
9741561111

ಉದ್ಯೋಗವಕಾಶ
ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ಹೋಂ ನರ್ಸಿಂಗ್ ಕೆಲಸಕ್ಕೆ ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 7th, SSLC, PUC, Degree, ANM and GNM (Pass or Fail)
ವೇತನ : 15000-20,000 (ಉಚಿತ ತರಬೇತಿ, ಊಟ, ವಸತಿಯೊಂದಿಗೆ)
9606714441, 7349278501
0821-4242351

WANTED
BEAUTICIANS
- Female with minimum 2 years of work experience
- Need allrounder, specially in hair & skin.
7848878739
Mysore

HOME TUTOR
For Grades V to X
CBSE / ICSE / State Syllabus
Subjects: Science, Maths and other
7483161428

ಬೇಕಾಗಿದ್ದಾರೆ
ಸಸ್ಯಾಹಾರಿ ಅಡುಗೆಯವರು ಫಾಸ್ಟ್ ಫುಡ್ ಸೆಂಟರ್, ಬನ್ನಿಮಂಟಪ, ಕೆಎಸ್‌ಆರ್‌ಟಿಸಿ ಡಿಪೋ ಹತ್ತಿರ, ಮೈಸೂರಿನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ದೋಸೆ ಮತ್ತು ರೋಟಿಕರಿ ಮಾಡುವುದರಲ್ಲಿ ಅನುಭವವಿರಬೇಕು.
ಸಮಯ ಸಂಜೆ 4 ಗಂಟೆಯಿಂದ 11.30 ಗಂಟೆಯವರೆಗೆ ಮಾತ್ರ, ಸಂಪರ್ಕಿಸಿ:
Mob: 9986563138

WANTED
ಫರ್ನಿಷಿಂಗ್ ಅಂಗಡಿಯಲ್ಲಿ Billing and Telecaller ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
1 Year Experience
Salary: 10K to 15K
Address: Akbar Road, Near Ashoka Road.
Mob: 9916459786

ಮಂಟಪ ಮನೆ

ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

HOUSE FOR SALE
Vijayanagar 4th Stg.
3 BHK Duplex New House, MUDA, E/F Door, Near Marimallappa School,
20x30 - Price - 82 Lakhs
30x40 - Price - 1.55 Cr.
8660105902

SITES FOR SALE
30x40 - 33 Lakhs
20x40 - 22 Lakhs
Near Gurur Bus Stop, Ramabainagar, Mysore.
DTCP Approved (Corporation limits)
1.5 Kms from JP Nagar Ring Road
Mob: 8660105902

ಸೈಟ್ ಬೇಕಾಗಿದೆ
30x40, 20x30
BSNL Layout
ಹಂಚ್ಯಾ ಸಾತಗಳ್ಳಿ ಹತ್ತಿರ
8050332377

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ ಹುಡುಗಿಯರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ, ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ
ಗಾಂಧಿ ಸರ್ಕಲ್, ಮೈಸೂರು
9980620678
Call after 10:30 am

ತಕ್ಷಣ ಬೇಕಾಗಿದ್ದಾರೆ
ಆಫೀಸ್ ಸ್ಟಾಫ್ ಕಂ–ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಸೇಲ್ಸ್ ಎಕ್ಸಿಕ್ಯೂಟಿವ್: ಮೈಸೂರು ಮತ್ತು ನರಸೀಪುರ, ಭಾಗಗಳಿಗೆ, ಸೇಲ್ಸ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ಆಕರ್ಷಕ ಇನ್ಸೆಂಟೀವ್‌ನೊಂದಿಗೆ
ವಿಳಾಸ: ಶ್ರೀ ಭ್ರಮರಾಂಭ ಟ್ರ್ಯಾಕ್ಟರ್, ಮೈಸೂರು ತಿ.ನರಸೀಪುರ ಮುಖ್ಯರಸ್ತೆ, ಆಲನಹಳ್ಳಿ ಸಿಗ್ನಲ್ ಹತ್ತಿರ, ಮೈಸೂರು
9902721839,7676582019

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

DTCP SITES FOR SALE
DTCP Sites
Rs. 699 per sq.ft., Near Jayapura,
H.D. Kote Road, Mysore.
9590491194,9606783264

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9591815191

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
7619318801, 9035836473

ಹೊಸ ಮನೆ (MUDA) ಮಾರಾಟಕ್ಕಿದೆ
30x40 ಅಳತೆಯ ನೆಲ ಮತ್ತು 1ನೇ ಮಹಡಿಯ ಮನೆ (1950 Sq.Feet) 3ಬಿಎಚ್‌ಕೆ ಅಟ್ಯಾಚ್ ಬಾತ್‌ರೂಂ ಮತ್ತು ಬೋರ್‌ವೆಲ್, ಸೋಲಾರ್ ಮತ್ತಿತರ ಸೌಲಭ್ಯ ಒಳಗೊಂಡಿದೆ ಬೆಲೆ 1.40ಕೋಟಿ ನೆಗೋಷಿಯೆಬಲ್, ವಿಜಯನಗರ 4ನೇ ಹಂತ, 2ನೇ ಘಟ್ಟ, ಮೈಸೂರು, ಸಂಪರ್ಕಿಸಿ:
9342677390

SITE FOR SALE
60X36
South Face
J.P.Nagara
Ring Road
Service Road
9448482474

ಕಾರ್ನರ್ ಸೈಟ್ ಮಾರಾಟಕ್ಕಿದೆ
ಮುಡಾ ಖಾತೆ, ಈಸ್ಟ್ ಫೇಸಿಂಗ್, 1124 ಚದುರಡಿ, ಏರ್‌ಪೋರ್ಟ್ ಹಿಂಭಾಗದ ರಸ್ತೆ, ಡೈರೆಕ್ಟ್ ಓನರ್, ಚದುರಡಿಗೆ 3000 ರೂ.ಗಳು
9342123373

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ,
Mob: 9008711654

ಬೇಕಾಗಿದ್ದಾರೆ
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು, ಹುಡುಗಿಯರು, ಮಹಿಳೆಯರು ಬೇಕಾಗಿದ್ದಾರೆ. ಸಮಯ: ಬೆಳಿಗ್ಗೆ 8.00 ರಿಂದ ಸಂಜೆ 6.00 ವರೆಗೆ, ಸ್ಥಳ : ಅಗ್ರಹಾರ, ಸ್ಥಳೀಯರಿಗೆ ಮಾತ್ರ
ಸಂಬಳ: 9000 ರಿಂದ 10000 ವರೆಗೆ
9986311444
9986322444

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಮನೆ ಮಾರಾಟಕ್ಕಿದೆ
ಕಂದಾಯನಗರ, ಶ್ರೀರಾಂಪುರ, ಮೈಸೂರು, 30x40 ಡ್ಯುಪ್ಲೆಕ್ಸ್ ಮನೆ, ಹೊಸಮನೆ, 4 ಬೆಡ್‌ರೂಮ್, ಸಂಪರ್ಕಿಸಿ
9945615736

WANTED
Qualified teachers with D.Ed., to teach in english medium class 1 to 5th, attend interview an 7.1.2024, Contact
9980913299
Mysore city bus : 235c, 327B
Secretary, patel devegowda School, Gopalapur, Mysore - 08

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಕೈಗಾರಿಕಾ ಪ್ರದೇಶ ಕೂರ್ಗಳ್ಳಿ, ಮೇಟಗಳ್ಳಿ, ದಟ್ಟಗಳ್ಳಿ ಹಾಗೂ (ಅಕ್ಷಯ ಭಂಡಾರ್ Medical Helper ಕೆಲಸ ಮಾಡಲು ಹುಡುಗಿಯರು, Medical Medicine ಸಪ್ಲೈ ಮಾಡಲು ಪುರುಷರು ಸರಸ್ವತಿಪುರಂ) ಸೆಕ್ಯೂರಿಟಿ ಗಾರ್ಡ್, Helper, CNC Machine Operator, Computer Data Entry Operator, Telecaller, ಕೆಲಸ ಮಾಡಲು ವಿದ್ಯಾಭ್ಯಾಸ, 7th, 10th, PUC, Any Degree, ITI, Diploma (ಪಾಸ್ & ಫೇಲ್) ಬೇಕಾಗಿದ್ದಾರೆ. ESI & PF ಸೌಲಭ್ಯವಿದೆ. ವೇತನ 12000 ರಿಂದ 15000 ವರೆಗೆ
9036461347,9108180329

ಬೇಕಾಗಿದ್ದಾರೆ
ಮೈಸೂರಿನ ಆಂದೋಲನ ಸರ್ಕಲ್ ಹತ್ತಿರದ ಹೋಟೆಲ್ ಒಂದರಲ್ಲಿ ಅನುಭವವುಳ್ಳ ಹೌಸ್ ಕೀಪಿಂಗ್ ಹಾಗೂ ಟೇಬಲ್ ಕ್ಲೀನಿಂಗ್ ಮತ್ತು ಪಾತ್ರೆ ತೊಳೆಯುವ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ:
9035050656
9035050652

ಸಾಲ/Loans
1. House/site purchase loan
2. Contruction Loan
3. Mortgage Loan
Loans for Muda, Corporation & Revenue Property
7760598705

ಇಡ್ಲಿ ಮಾಸ್ಟರ್ ಬೇಕಾಗಿದ್ದಾರೆ
ಸಂಪರ್ಕಿಸಿ:
9986306418

ಮನೆಯಿಂದಲೇ ಕೆಲಸ
ಗೃಹಿಣಿಯರಿಗೆ, ವಯಸ್ಸಾದವರಿಗೆ, ವಿದ್ಯಾರ್ಥಿಗಳು ವಯಸ್ಸಿನ ಮಿತಿ ಇಲ್ಲ. ಪೆನ್ಸಿಲ್ ಪ್ಯಾಕಿಂಗ್, ಕವರ್ ಪ್ಯಾಕಿಂಗ್, ಚಾಕೋಲೇಟ್ ಪ್ಯಾಕಿಂಗ್, ಜ್ಯುವೆಲರಿ ಪ್ಯಾಕಿಂಗ್, ಮೆಹಂದಿ ಪ್ಯಾಕಿಂಗ್, ಫ್ಲವರ್ ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಮನೆಯಿಂದಲೇ ಮಾಡಿ ಗಳಿಸಿ ತಿಂಗಳಿಗೆ 25,000 ದಿಂದ 30,000 ವರೆಗೆ. ಸಂಪರ್ಕಿಸಿ:
Mob: 8147197339

WANTED
SALES BOYS
Minimum 1 year experience in any field work in Furnishing Showroom. Salary 15K to 25K.
Timings: 10.30 am - 8.30 pm
Address: Irwin Road & Sharadadevi Nagar, Mysore.
Mob: 80507-44784

MYTHRI TRAVEL
ಶಿರಡಿ ಯಾತ್ರ ವಿಮಾನದಲ್ಲಿ 4 ದಿನಗಳು 24–1–2024. 3 ಜ್ಯೋತಿರ್ಲಿಂಗ, ನಾಸಿಕ್, ಎಲ್ಲೋರ, ಶನಿಸಿಂಗನಾಪುರ, ಪಂಡರಾಪುರ, ಕೊಲ್ಲಾಪುರ. 14–2–24 ಪುರಿ, ಕೋನಾರ್ಕ್, ಭುವನೇಶ್ವರ ರೈಲು ಪ್ರವಾಸ.
Mob: 6360422209

HOUSE FOR SALE
30x40 Duplex at Srirampura
25x40 & 40x60 Ground & First at Ramakrishna Nagar, 40x60 at Kuvempunagar
8792538993
9663136318

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಮತ್ತು ಮೈಸೂರಿನಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ ಕಂಪನಿ ಕೆಲಸಕ್ಕೆ ಆಫೀಸ್ ಕೆಲಸಕ್ಕೆ ಮತ್ತು ವರ್ಕ್ ಫ್ರಂ ಹೋಂ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. ಯಾವುದೇ ಎಜ್ಯುಕೇಷನ್ ಯಾವುದೇ Age ಲಿಮಿಟ್ ಇಲ್ಲ.
Salary (18000 to 38000rs) ಇರುತ್ತದೆ.
ಹೆಚ್ಚಿನ ಮಾಹಿತಿಗೆ ಇಂದೆ ಸಂಪರ್ಕಿಸಿ. H.R. Madam
9886385585
8296278130

Commercial site at Vijayanagar 3rd Stage
60x82
West Facing, MUDA
Site for sale on Ring Road
Price - 4.75 Cr.
Mob: 8660105902

WANTED
Lady Teacher for Home Tuition
in Bannimantap, Near KSRTC Depo for CBSC Syllabus for Maths and Science. Please contact:
9900363161, 8861437181

ಪ್ರತ್ಯಾಬ್ದಿಕಾ ಶ್ರಾದ್ಧ
(ತಿರವಿಧ್ಯಾನ ಮಾಡಲು)
ಯೋಗೀಂದ್ರ ಐಯ್ಯಂಗಾರ್ ಕ್ಯಾಟರಿಂಗ್, ಮೈಸೂರು
Mob: 9481576819

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ (ಪುರುಷರು & ಮಹಿಳೆಯರು) (Gokulam, R.K. Nagar, Hebbal Industrial Area).
2) ಹೌಸ್‌ಕೀಪಿಂಗ್ (ಹುಡುಗರು & ಹುಡುಗಿಯರು) (Kuvempunagar & R.K. Nagar).
ESI, PF ಸೌಲಭ್ಯವಿದೆ. ಸ್ವವಿವರಗಳೊಂದಿಗೆ (ಹೆಬ್ಬಾಳು ಸೂರ್ಯ ಬೇಕರಿ ಸರ್ಕಲ್). ಸಂಪರ್ಕಿಸಿ:
9739199355, 9844235981

House for Lease
Newly built 2 BHK independent house, fuly furnished with solar & UPS. East face @ Lalithadri Nagar, Near Ring Road, Behind Indian Oil Petrol Bunk.
7338330695, 9964414484

ಹೊಸ ಮನೆ ಮಾರಾಟಕ್ಕಿದೆ
20x30 ಉತ್ತರ ದಿಕ್ಕು
GF + FF
ರೈಲ್ವೇ ಲೇಔಟ್
ಜೆ.ಪಿ.ನಗರ, ಮೈಸೂರು
8660108796
9538956060

HOUSE FOR SALE
40x60 house for sale in Vidyaranyapuram 30x40 Site for Sale in Siddalingeshwara Layout 33x40 Corner Site for Sale in Sharada Layout attached Srinagar
9880344263

MUDA App Site at Kamadhenu Layout, Srirampura
30x40
East South Corner Site
Price - 68 Lakhs
Within Ring Road.
Mob: 8660105902



Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಜಮೀನು ಮಾರಾಟಕ್ಕಿದೆ
ನಂಜನಗೂಡು ಚಾಮರಾಜನಗರ ರಸ್ತೆಗೆ 1.14 ಎಕರೆ ಜಮೀನು ಮಾರಾಟಕ್ಕಿದೆ ಸಂಪರ್ಕಿಸಿ
9880059793

ವಧು-ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/ಎಸ್‌ಸಿ ಮತ್ತು ಎಲ್ಲಾ ಜಾತಿ/ಪಂಗಡದ ವಧು-ವರರು ಮತ್ತು ವಿಧುರ/ವಿಚ್ಛೇದಿತ ವಧು-ವರರಿಗಾಗಿ ಸಂಪರ್ಕಿಸಿ
9343175000

FOR SALE
Farm Land with An Area of 27 Acres 16 Guntas
Holenarasipura Taluk, Hassan District
9845073953
9845016564

MUDA & RERE APPROVED 30X40 SITE FOR SALE
North Facing @ 2499/Sqft
West Facing @ 2299/Sqft
Near KIT Eng. College, Next to Lalbahadur Shastri Nagar Off. T-Narsipura Main Road
Immediate Registration & Bank Loan Available.
7337786007,7795609173

WANTED
Experienced Field Officers with Computer Knowledge
1) Security Field Officer
2) Housekeeping Field Officer
9964661119

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಎಂ.ಕೆ.ಸರ್ವಿಸಸ್
ಕೆಲಸದ ಸಮಯ: 9 ರಿಂದ 04–00
ಸಂಬಳ: ರೂ.14000/– ರಿಂದ 20,000/–
ಕೆಲಸ : ಆಫೀಸ್ ಹಾಗೂ ಇತರೇ
ಅರ್ಹತೆ: 10ನೇ ತರಗತಿ, ಪಿಯುಸಿ ಎಲ್ಲಾ ವರ್ಗದ ಯುವಕ/ಯುವತಿಯರಿಗೆ ಸುವರ್ಣ ಅವಕಾಶವನ್ನು ಒದಗಿಸುತ್ತದೆ. ಆಸಕ್ತಿಯುಳ್ಳವರು ಸಂಪರ್ಕಿಸಿ:
6364396269

30X40 SITE FOR SALE
Site No.5378
Near Marimallappa School
Vijayanagar 4th Stage
Owner Meeting
7406351328

ಖಾಲಿ ಜಾಗ
10,000 ಅಡಿ ಬಾಡಿಗೆಗೆ ದೊರೆಯುತ್ತದೆ 1ನೇ ಹಂತ ವಿಜಯನಗರ ವಾಟರ್ ಟ್ಯಾಂಕ್ ಪಕ್ಕ
9448978383

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸ ಗುಡಿಸಲು ಮತ್ತು ಮನೆ ಕೆಲಸಗಳಲ್ಲಿ ಸಹಾಯ ಮಾಡಲು ಮಹಿಳೆ ಬೇಕಾಗಿದ್ದಾರೆ.
ಸಮಯ: ಬೆಳಿಗ್ಗೆ 9 ರಿಂದ ಸಂಜೆ 6–00 ಸಂಬಳ: 300/–
ಪ್ರತಿ ದಿನಕ್ಕೆ ಜ್ಞಾನ ಗಂಗೋತ್ರಿ ಕಾನ್ವೆಂಟ್ ಇಂಗ್ಲಿಷ್ ಮಿಡಿಯಂ, ರಾಜೇಂದ್ರ ನಗರ, ಮೈಸೂರು–570007
9243580672,9113980741

SITE FOR SALE
30X50 site sale
Suvarna nagar (gaddige road)
9880273834

FOR RENT
ROOM AT LAKSHMIPURAM
SUITABLE FOR MEDICAL STUDENTS
PARA MEDICAL, STAFF, DOCTORS ETC.
9448710689

ಬೇಕಾಗಿದ್ದಾರೆ
ಮೈಸೂರಿನ ESSAR ಸೋಲಾರ್ ಕಂಪನಿಗೆ 1. Driver (Ashoka Layland Vehicle), 2.Security Guard, 3. Digital Marketing 4. Marketing Manager ಹುದ್ದೆಗಳಿಗೆ ಬೇಕಾಗಿದ್ದಾರೆ.
ಊಟ ವಸತಿಯೊಂದಿಗೆ ಆಕರ್ಷಕ ವೇತನ ದೊರೆಯುತ್ತದೆ
9980917976,9964832118

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ + ESI+PF ಹಾಗೂ ಕೆಲಸದ ಸಮಯದಲ್ಲಿ ಊಟ+ತಿಂಡಿ ವ್ಯವಸ್ಥೆ ಇರುತ್ತದೆ. ತಕ್ಷಣ ಸಂಪರ್ಕಿಸಿ:
7019378337
9060075860

ಬಾಡಿಗೆಗೆ ದೊರೆಯುತ್ತದೆ
2000–4000 ಚದರ ಅಡಿ
5000 ಚದರ ಅಡಿಯ ಕಟ್ಟಡ ಮಾರಾಟಕ್ಕೆ ಇದೆ
ಶ್ರೀ ಚಾಮುಂಡೇಶ್ವರಿ ಹೋಟೆಲ್ ಕಟ್ಟಡ ಸಿದ್ಧಾರ್ಥನಗರ ಕೆನರಾ ಬ್ಯಾಂಕ್ ಎದುರು, ಮೈಸೂರು
9945891120

SITE FOR SALE
30x40 East Face
MUDA Approved Layout Vijaynagar 4th Stage, Mysore
8217042841

HOTEL FOR LEASE / RENT
Near Vivekananda Circle
Dining Capacity - 50 Nos.
Fully Furnished Interior
Mysore-22
9535601201
6362498234

WANTED
worker who works in Cafe Shop full time or part time job, he / she may be experienced or non experienced Job position-Cheff or Helper Qualifications-10th or PUC. Shop name-Teaday Address- New kantaraj urs road, Kavitha bakery circle, TK layout, Mysore
SANJAY TC:
9718515635

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು, ಆಫೀಸ್ ಬಾಯ್, ಹೋಂನರ್ಸ್ ಮತ್ತು ಆಫೀಸ್ ಅಸಿಸ್ಟೆಂಟ್‌ಗಳು ಬೇಕಾಗಿದ್ದಾರೆ. (ಗಂಡಸರು)
PF & ESI ಸೌಲಭ್ಯವಿರುತ್ತದೆ.
8710040058
9901607889

ಬೇಕಾಗಿದ್ದಾರೆ
ದಟ್ಟಗಳ್ಳಿಯಲ್ಲಿ ಇರುವ ಮನೆಯೊಂದಕ್ಕೆ ಮಾಂಸಾಹಾರಿ ಮತ್ತು ಶಾಖಾಹಾರಿ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ. ಹಾಗೂ ಕಾರ್ ಡ್ರೈವರ್ ಬೇಕಾಗಿದ್ದಾರೆ.
9448188504

For SAFE & SMART INVESTMENT
SPECIAL Monthly Interest Plan for your Hard Earned Money
@ 11.50% P.A (FD & RD)
9591705548
we care for Sr Citizen & Ex-Defence Personnel

ಮುಡಾ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ
ಬ್ರಾಹ್ಮಿನ್ ಲೇಔಟ್ A ಬ್ಲಾಕ್ 60 ಅಡಿ ರಸ್ತೆ, ದ.ಉ–127 ಅಡಿ, ಪೂರ್ವ ಪ 46 ಅಡಿ ವಿಸ್ತೀರ್ಣ 2900 Sqft ಚದರ ಅಡಿಗೆ 1900/-
8618644886
9880280299

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ (ಹೆಬ್ಬಾಳು, ಸಿದ್ಧಾರ್ಥನಗರ, ದಟ್ಟಗಳ್ಳಿ, ಹೂಟಗಳ್ಳಿ, ವಿದ್ಯಾರಣ್ಯಪುರಂ)
2) ಹೆಲ್ಪರ್ಸ್ : (ಹೂಟಗಳ್ಳಿ)
3) ಗಾರ್ಡನ್ (ಕಟ್ಟರ್) (ಮೇಟಗಳ್ಳಿ)
ESI & PF ಸೌಲಭ್ಯವಿರುತ್ತದೆ.
ಊಟದ ವ್ಯವಸ್ಥೆ ಇರುತ್ತದೆ
9739166772

WANTED
Manager for a Facility Management Company Experienced in Security & Housekeeping
Location : Mysore
Mail Id: workatmysore@gmail.com

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್‌ನ 9ನೇ ವಾರ್ಷಿಕ ಸಮ್ಮೇಳನ

ದಿವ್ಯತ್ರಯರ ಸಂದೇಶ ಸಾರಿದ 'ಶೋಭಾಯಾತ್ರೆ'

ಮೈಸೂರು, ಜ.5(ಎಂಕೆ)– 'ನಮಗೆ ಬೇಕಾಗಿರುವುದು ಸ್ವಾಮಿ ವಿವೇಕಾನಂದರ ಶಕ್ತಿಯ ಸಂದೇಶ' ಎಂಬ ಉದ್ಘೋಷದೊಂದಿಗೆ ಯುವ ಮನಸ್ಸುಗಳ ಅಂತರಾತ್ಮ ಎಚ್ಚರಿಸಿದ ಶ್ರೀ ರಾಮಕೃಷ್ಣ ಪರಮಹಂಸ, ಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ 'ಶೋಭಾಯಾತ್ರೆ' ಭಕ್ತಿ-ಭಾವದಿಂದ ನೆರವೇರಿತು.

ಮೈಸೂರಿನ ಕುವೆಂಪುನಗರದಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್‌ನ ಮೂರು ದಿನಗಳ 9ನೇ ವಾರ್ಷಿಕ ಸಮ್ಮೇಳನದ 'ಶೋಭಾಯಾತ್ರೆ' ದಿವ್ಯತ್ರಯರ ಸಂದೇಶಗಳನ್ನು ಪಸರಿಸಿತು. ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ನಿರ್ಮಾಣ ಹಂತದಲ್ಲಿರುವ ವಿವೇಕ ಸ್ಮಾರಕದಿಂದ ಆರಂಭವಾದ 'ಶೋಭಾಯಾತ್ರೆ' ಸದ್ವಿದ್ಯಾ ಶಾಲೆ, ದಿವಾನ್ಸ್ ರಸ್ತೆ ಮಾರ್ಗವಾಗಿ ಶಿವರಾಂಪೇಟೆ, ದೇವರಾಜ ಅರಸು ರಸ್ತೆ ಮುಖಾಂತರ ಮತ್ತೆ ವಿವೇಕ ಸ್ಮಾರಕದವರೆಗೆ ಸಾಗಿತು.

ದಿವ್ಯತ್ರಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಹಸಿರು ಬಾವುಟ ತೋರುವ ಮೂಲಕ 'ಶೋಭಾಯಾತ್ರೆ'ಗೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಚಾಲನೆ ನೀಡಿದರು. ಅವರೊಂದಿಗೆ ಶ್ರೀ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ವೀರೇಶಾನಂದ ಸರಸ್ವತಿ ಅವರೊಂದಿಗೆ ರಾಜ್ಯದ ವಿವಿಧೆಡೆಯಲ್ಲಿರುವ ರಾಮಕೃಷ್ಣ ಆಶ್ರಮಗಳ ಅಧ್ಯಕ್ಷರು ಹೆಜ್ಜೆ ಹಾಕಿದರು.

ಯಾತ್ರೆಯ ಮಾರ್ಗದುದ್ದಕ್ಕೂ 'ನಮಗೆ ಬೇಕಾಗಿರುವುದು ಸ್ವಾಮಿ ವಿವೇಕಾನಂದರ ಶಕ್ತಿಯ ಸಂದೇಶ', 'ಸ್ವಾಮಿ ವಿವೇಕಾನಂದರಿಗೆ ಜಯವಾಗಲಿ' ಎಂಬ ಘೋಷಣೆಗಳು ಮೊಳಗಿದವು. ರಾಮಕೃಷ್ಣ ವಿದ್ಯಾಶಾಲೆಯ ಹಾಗೂ ಸದ್ವಿದ್ಯಾ ಶಾಲೆಯ ವಿದ್ಯಾರ್ಥಿಗಳು 'ಶೋಭಾಯಾತ್ರೆ'ಯಲ್ಲಿ ಭಾಗವಹಿಸಿ ಗಮನ ಸೆಳೆದರು.

ಇದಕ್ಕೂ ಮುನ್ನ ಸದ್ವಿದ್ಯಾ ಶಾಲೆ ಆವರಣದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ, ದೇಶದಲ್ಲಿನ ಯುವ ಮನಸ್ಸುಗಳನ್ನು ಎಚ್ಚರಿಸಬೇಕಾದರೆ ದಿವ್ಯತ್ರಯರ ಸಂದೇಶಗಳನ್ನು ತಿಳಿಸುವ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು.



ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್‌ನ ಮೂರು ದಿನಗಳ 9ನೇ ವಾರ್ಷಿಕ ಸಮ್ಮೇಳನದ ಅಂಗವಾಗಿ ಹಮ್ಮಿಕೊಂಡಿದ್ದ 'ಶೋಭಾಯಾತ್ರೆ'ಗೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಚಾಲನೆ ನೀಡಿದರು. ಅವರೊಂದಿಗೆ ಶ್ರೀ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಮಾಜಿ ಎಂಎಲ್‌ಸಿ ಡಿ. ಮಾದೇಗೌಡ, ಹಿರಿಯ ವಕೀಲ ಅರುಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಜಗತ್ತಿನಲ್ಲಿ ಮನುಷ್ಯರಲ್ಲಿರುವ ನಾಲ್ಕು ವರ್ಗಗಳ ಪೈಕಿ ಜ್ಞಾನ ವರ್ಗದಲ್ಲಿರುವ ಸ್ವಾಮಿ ವಿವೇಕಾನಂದರು, ಇಡೀ ಭರತ ಖಂಡವನ್ನು ಬಡಿದೆಬ್ಬಿಸಿದ ಮಹಾನ್ ಸಂತರಾಗಿದ್ದಾರೆ. ಬದುಕಿದಷ್ಟು ದಿನ ಇತರರ ಕಾಳಜಿ ವಹಿಸುತ್ತಿದ್ದ ಅವರನ್ನು ಪಡೆದದ್ದು ನಮ್ಮ ಸುದೈವ. ಸ್ವಾಮಿ ವಿವೇಕಾನಂದರು ಉಪನ್ಯಾಸ ನೀಡಿದ ಸ್ಥಳದಿಂದ ಇಂದು 'ಶೋಭಾಯಾತ್ರೆ' ನಡೆಸಲಾಗುತ್ತಿದೆ. ವಿವೇಕಾನಂದರ ಸಂದೇಶಗಳನ್ನು ತಿಳಿಸುವ ನಿಟ್ಟಿನಲ್ಲಿ ನಿರ್ಮಾಣವಾಗುತ್ತಿರುವ ವಿವೇಕ ಸ್ಮಾರಕ, ಮುಂದಿನ ದಿನಗಳಲ್ಲಿ ಈ ಸ್ಥಳ ಧಾರ್ಮಿಕ ಯಾತ್ರಾ ಸ್ಥಳವಾಗಲಿದೆ ಎಂದರು.

ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ವೀರೇಶಾನಂದ ಸರಸ್ವತಿ ಮಾತನಾಡಿ, ಅಮೆರಿಕಾ ಜನರಿಗೆ ಚೈತನ್ಯ ಶಕ್ತಿ ತುಂಬಿದ ವಿವೇಕಾನಂದರು, ಯಾವುದೇ ಜಾತಿ-ಮತವೆನ್ನದೆ ಸಮಸ್ತರೊಂದಿಗೆ ಸಂಚರಿಸಿದ ವಿವೇಕಾನಂದರು, ಮೈಸೂರಿನಲ್ಲಿ ಹೇಳಿದಂತೆ ಮಹಾ ಶಿಷ್ಯ ಪರಂಪರೆ ಮುಂದುವರೆಯಲಿದೆ. ಅವರಿಂದ ಉಪನ್ಯಾಸ ಪಡೆದವರು ಪ್ರಪಂಚದ 8 ದಿಕ್ಕುಗಳಲ್ಲಿಯೂ ಸಾಧನೆ ಮಾಡಿದ್ದಾರೆ. ವಿವೇಕ ಸ್ಮಾರಕ ಉದ್ಘಾಟನೆಯು ಚಿಕಾಗೋ ಸಮ್ಮೇಳನವನ್ನು ಮೀರಿಸುವಂತೆ ನಡೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಗುರಿ ಮುಟ್ಟಿದ್ದೇವೆ: ಹಿರಿಯ ವಕೀಲ ಅರುಣ್‌ಕುಮಾರ್ ಮಾತನಾಡಿ, ಸ್ವಾಮಿ ವಿವೇಕಾನಂದರು 'ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂಬ ವಾಣಿಯಂತೆ ಗುರಿ ಮುಟ್ಟಿದ್ದೇವೆ. ಅದರ ಪ್ರತಿಫಲವಾಗಿ 'ವಿವೇಕ ಸ್ಮಾರಕ' ನಿರ್ಮಾಣವಾಗುತ್ತಿದೆ. ಕಾನೂನು ಹೋರಾಟದಲ್ಲಿ ಒಮ್ಮೆ ಮುನ್ನಡೆ, ಮತ್ತೊಮ್ಮೆ ಹಿನ್ನಡೆಯಾದರೂ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಅವರ ಅವಿರತ ಪ್ರಯತ್ನ, ಅತೀವ ಕಾಳಜಿ ಹಾಗೂ ಸಂಘಟಿತ ಹೋರಾಟ ಕಡೆಗೂ ಫಲ ನೀಡಿತು ಎಂದು ವಿವೇಕ ಸ್ಮಾರಕ ನಿರ್ಮಾಣದಲ್ಲಿ ಎದುರಾದ ಕಾನೂನು ಹೋರಾಟ ಸ್ಮರಿಸಿದರು.

ಹಿರಿಯ ಸಾಹಿತಿ ಸಿ.ಪಿ.ಕೃಷ್ಣ ಕುಮಾರ್ (ಸಿಪಿಕೆ), ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ನರಹರಿ ಬಾಬು, ನಗರ ಪಾಲಿಕೆ ಮಾಜಿ ಸದಸ್ಯರಾದ ನಾಗಭೂಷಣ್, ಪ್ರಮೀಳಾ ಭರತ್ ಮತ್ತಿತರರು ಉಪಸ್ಥಿತರಿದ್ದರು.



ಶೋಭಾಯಾತ್ರೆಯಲ್ಲಿ ಸದ್ವಿದ್ಯಾ ಶಾಲೆ, ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳು ಹಾಗೂ ಆಶ್ರಮದ ಅಪಾರ ಭಕ್ತರು ಭಾಗವಹಿಸಿದ್ದರು.

ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರು ನಮ್ಮ ಸಂಸ್ಕಾರ, ಸಂಸ್ಕೃತಿಯ ಘನಿ

ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಸ್ಮರಣೆ



ಮೈಸೂರಿನ ಕುವೆಂಪುನಗರದಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್‌ನ 9ನೇ ವಾರ್ಷಿಕ ಸಮ್ಮೇಳನದ ಭಕ್ತಿ ಸಮ್ಮೇಳನ ವೇದಿಕೆಯನ್ನು ಶುಕ್ರವಾರ ಉದ್ಘಾಟಿಸಲಾಯಿತು.

ಮೈಸೂರು, ಜ.5(ಎಂಕೆ)– ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು ಒಂದು ವಿಚಾರವಲ್ಲ. ಸಹಸ್ರಾರು ವರ್ಷಗಳ ಜ್ಞಾನದ, ಅನುಸರಣೆಯ, ಸಂಸ್ಕಾರದ, ಸಂಸ್ಕೃತಿಯ ಕಲೆಯ ಘನಿ ರೂಪವಾದಂತಹ ಅಭಿವ್ಯಕ್ತಿಯಾಗಿದ್ದಾರೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಸ್ಮರಿಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್‌ನ ಮೂರು ದಿನಗಳ 9ನೇ ವಾರ್ಷಿಕ ಸಮ್ಮೇಳನದ ಭಕ್ತಿ ಸಮ್ಮೇಳನದಲ್ಲಿ ಮಾತನಾಡಿದ ಅವರು, ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು ಯಾವುದೋ ಒಂದು ವಿಚಾರವಲ್ಲ. ಅವರು ಒಂದು ಅನುಭವ. ಯಾವ ರೀತಿಯ ಅನುಭವ ಎಂದರೆ, ವೇದಗಳ ಕಾಲದಿಂದ ಪ್ರಾರಂಭವಾದಂತಹ ಈ ದೇಶದ ಸಹಸ್ರಾರು ವರ್ಷಗಳ ಆ ಎಲ್ಲಾ ಜ್ಞಾನದ, ಆ ಎಲ್ಲಾ ಅನುಸರಣೆಯ, ಆ ಎಲ್ಲಾ ಸಂಸ್ಕಾರದ, ಸಂಸ್ಕೃತಿಯ ಕಲೆಯ ಘನಿ ರೂಪವಾದಂತಹ ಅಭಿವ್ಯಕ್ತಿಯಾಗಿದ್ದಾರೆ ಎಂದರು.

ವೇದಿಕೆಯಲ್ಲಿರುವ ರಾಮಕೃಷ್ಣ ಪರಮಹಂಸರ ಭಾವಚಿತ್ರದ ಮೇಲೆ 'ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯಚ' ಎಂದಿದೆ. ಜಗತ್ತಿನ ಹಿತವನ್ನು ಮಾಡುವುದರ ಮೂಲಕವೇ ಆತ್ಮೋದ್ಧಾರ ಸಾಧ್ಯ. ಜಗತ್ತಿನ ಹಿತವನ್ನು ಕಾಯಬೇಕು. ಜಗತ್ತಿನ ಋಣವನ್ನು ತೀರಿಸಬೇಕು. ಸಮಾಜದ, ದೇಶದ ಋಣವನ್ನು ತೀರಿಸಬೇಕು. ನಮ್ಮ ಗುರುಗಳ ಹಾಗೂ ನಮ್ಮ ಪೂರ್ವಜರ ಋಣವನ್ನು ತೀರಿಸಿದ ನಂತರವೇ ಮೋಕ್ಷಕ್ಕೆ ಅವಕಾಶ ಎಂಬುದಾಗಿದೆ ಎಂದು ತಿಳಿಸಿದರು.

ಋಣ ತೀರಿಸುವುದು ಎಂದರೆ ಜಗದ ಹಿತವನ್ನು ಬಯಸುವುದು. ಹಿತ ಬಯಸುವುದು ಸೇವೆಯಿಂದ ಮಾತ್ರವೇ ಸಾಧ್ಯ ಎಂಬುದನ್ನು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಅದು ಯಾವುದೇ ಫಲಾಪೇಕ್ಷೆ ಇಲ್ಲದೆ ಯಾರಿಗೆ ಯಾವುದರ ಅವಶ್ಯಕತೆ ಇದೆಯೋ ಅದನ್ನು ಪೂರೈಕೆ ಮಾಡುವುದು ಸೇವೆಯಾಗಿದೆ ಎಂದು ಮಾರ್ಗದರ್ಶನ ನೀಡಿದ್ದಾರೆ. ಇದೇ ದಾರಿಯಲ್ಲಿ 126 ವರ್ಷ ಪೂರೈಸಿರುವ ಶ್ರೀ ರಾಮಕೃಷ್ಣ ಆಶ್ರಮದ ಹಿಂದೆ ಸೂರ್ಯ ಶಕ್ತಿ ಅಡಗಿದ್ದು, ಸನಾತನ ಜ್ಞಾನದಿಂದ ಪ್ರಭಾವಿತವಾದ ಬ್ಯಾಟರಿ ಹೊಂದಿದೆ ಎಂದು ಶ್ಲಾಘಿಸಿದರು.

ಗೊಂದಲ ಪದ: ಭಾರತದಲ್ಲಿ ಅತ್ಯಂತ ಗೊಂದಲಕ್ಕೀಡಾಗಿರುವ ಶಬ್ದವೆಂದರೆ 'ಧರ್ಮ'. ಯಾವುದನ್ನು ಧರ್ಮ ಎನ್ನಬೇಕೋ ಗೊತ್ತಿಲ್ಲ. ಧರ್ಮಕ್ಕೆ ಕ್ರೈಸ್ತ, ಇಸ್ಲಾಂ ಎಲ್ಲವನ್ನು ಸೇರಿಸಲಾಗಿದೆ. ಧರ್ಮ ಎಂದರೆ ಪ್ರತಿಯೊಬ್ಬರಲ್ಲಿ, ಪ್ರತಿಯೊಂದು ಕ್ಷಣದಲ್ಲೂ ಇರುವುದೇ ಧರ್ಮವಾಗಿದೆ. ಯಾರಿಗೆ ಕರ್ತವ್ಯ ಜ್ಞಾನ, ಧರ್ಮದ ಜ್ಞಾನವಿಲ್ಲ ಅಂತಹವರು ಪಶುಗಳಂತೆ ಎಂದು ನಮ್ಮ ಹಿರಿಯರು ಹೇಳಿದ್ದಾರೆ ಎಂದು ತಿಳಿಸಿದರು.

ಭಜನೆ: ಭಕ್ತಿ ಸಮ್ಮೇಳನ ಉದ್ಘಾಟನೆಗೂ ಮುನ್ನ ಧರ್ಮ ಧ್ವಜಾರೋಹಣ ನೆರವೇರಿಸಲಾಯಿತು. ನಂತರ ಬೆಂಗಳೂರಿನ ರಾಮಕೃಷ್ಣ ಮಠದ ಸ್ವಾಮಿ ಗಿರಿಜಾತ್ಮಾನಂದಜೀ ಮಹಾರಾಜ್ ನೇತೃತ್ವದಲ್ಲಿ ಆರಾತ್ರಿಕ ಮತ್ತು ಭಜನೆ ನಡೆಯಿತು. ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಸಮ್ಮೇಳದ ಅಧ್ಯಕ್ಷತೆ ವಹಿಸಿದ್ದರು. ದಾವಣಗೆರೆ ರಾಮಕೃಷ್ಣ ಮಿಷನ್ ಅಧ್ಯಕ್ಷರಾದ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್, ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ ಅಧ್ಯಕ್ಷರಾದ ಸ್ವಾಮಿ ಬೋಧಸ್ವರೂಪಾನಂದಜೀ ಮಹಾರಾಜ್, ರಾಣಿಬೆನ್ನೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಪ್ರಕಾಶಾನಂದಜೀ ಮಹಾರಾಜ್, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಮತ್ತಿತರರಿದ್ದರು.

> **ಹಿಂದೂ ಎನ್ನಲು ಪಾಕಿಸ್ತಾನಕ್ಕೆ ಅಳುಕಿಲ್ಲ...!**
>
> ಯಾಕೋ ಹಿಂದೂ ಎನ್ನಲು ನಮ್ಮ ಮನಸ್ಸಿನಲ್ಲಿ ಅಳುಕಿದೆ. ಆದರೆ, ಪಾಕಿಸ್ತಾನದಲ್ಲಿ ಅಳುಕಿಲ್ಲ. ಪಾಕಿಸ್ತಾನದವರು ಕ್ರಿಕೆಟ್ ಕಾಮೆಂಟರಿ ಮಾಡುವಾಗ ಹಿಂದೂಸ್ತಾನ್ ಕೀ ಬಲ್ಲೇಬಾಜ್, ಹಿಂದೂಸ್ತಾನ್ ಕೀ ಕಫ್ತಾನ್, ಹಿಂದೂಸ್ತಾನ್ ಕೀ ಹಾಕಿ ಟೀಂ ಎಂದು ಹೇಳುತ್ತಾರೆ. ಆದರೆ, ನಮಗ್ಯಾಕೆ ಸಂಕೋಚ. ಸ್ವಾಮಿ ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ತಮ್ಮ ಹೆಸರಿನ ಕೆಳಗೆ 'ದ ಹಿಂದೂ ಮಾಂಕ್ ಆಫ್ ಇಂಡಿಯಾ ಎಂದು ಬರೆದಿದ್ದಾರೆ. ವಿವೇಕಾನಂದರೇ ಹಿಂದೂ ಮಾಂಕ್ ಎಂದರೆ ನಾವುಗಳು ಹಿಂದೂ ಮಂಕುಗಳಾದರು ಪರವಾಗಿಲ್ಲ. ಈ ಪವಿತ್ರ ಹಿಂದೂ ಧರ್ಮದಲ್ಲಿ, ಪವಿತ್ರ ಸಂಸ್ಕೃತಿಯಲ್ಲಿ ಹುಟ್ಟಿರುವ ನಮ್ಮ ಮೇಲೆ ಈ ಆಚಾರ-ವಿಚಾರ ತತ್ವ-ಸಿದ್ಧಾಂತವನ್ನು ಮುಂದಿನ ಪೀಳಿಗೆಗೆ ತೆಗೆದುಕೊಂಡು ಹೋಗುವ ಬಹಳ ದೊಡ್ಡ ಜವಾಬ್ದಾರಿ ಇದೆ.
>
> - **ಗೋ.ಮಧುಸೂದನ್**, ವಿಧಾನ ಪರಿಷತ್ ಮಾಜಿ ಸದಸ್ಯ

ದೇಶದಲ್ಲಿ ಶಾಂತಿ ನೆಲೆಸಲು ಯುವ ಜನತೆ ದೃಢ ಸಂಕಲ್ಪ ಮಾಡಬೇಕು

ವಿಶ್ರಾಂತ ಕುಲಪತಿ ಪ್ರೊ. ಪಿ.ವೆಂಕಟರಾಮಯ್ಯ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ. ವೆಂಕಟರಾಮಯ್ಯ ಅಖಿಲ ಕರ್ನಾಟಕ ಡಾ.ಜಿ. ಪರಮೇಶ್ವರ್ ಯುವ ಸೈನ್ಯ ಸಂಘಟನೆ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಚಿತ್ರದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್, ಅಖಿಲ ಕರ್ನಾಟಕ ಡಾ.ಜಿ. ಪರಮೇಶ್ವರ್ ಯುವ ಸೈನ್ಯ ಸಂಘಟನೆ ಅಧ್ಯಕ್ಷ ಮಂಜುನಾಥ್, ಮಹೇಶ್ ಹಾಗೂ ಇನ್ನಿತರರನ್ನು ಕಾಣಬಹುದು.

ಮೈಸೂರು, ಜ.5(ಎಂಟಿವೈ)– ದೇಶದಲ್ಲಿ ಇತ್ತೀಚೆಗೆ ಆತಂಕದ ಬೆಳವಣಿಗೆಗಳು ಹೆಚ್ಚಾಗುತ್ತಿದ್ದು, ದೇಶದಲ್ಲಿ ಶಾಂತಿ ವಾತಾವರಣ ನೆಲೆಸಲು ಯುವಜನತೆ ದೃಢ ಸಂಕಲ್ಪ ಮಾಡಬೇಕು ಎಂದು ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ. ವೆಂಕಟರಾಮಯ್ಯ ಸಲಹೆ ನೀಡಿದ್ದಾರೆ.

ಅಖಿಲ ಕರ್ನಾಟಕ ಡಾ.ಜಿ. ಪರಮೇಶ್ವರ್ ಯುವ ಸೈನ್ಯ ಸಂಘಟನೆ ಶುಕ್ರವಾರ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಘ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಂಸತ್‌ನಿಂದ 149 ಮಂದಿ ಸಂಸದರನ್ನು ಹೊರಗಿಟ್ಟು, 3-4 ಮಸೂದೆ ಅಂಗೀಕರಿಸಿರುವುದು ಖಂಡನೀಯ. ಈ ಹಿಂದೆ ಗುಜರಾತ್‌ನಲ್ಲಿ ವಿರೋಧ ಪಕ್ಷದವರನ್ನು ಹೊರಗಿಟ್ಟು ಪ್ರಮುಖ ಮಸೂದೆ ಅಂಗೀಕರಿಸಲಾಗಿತ್ತು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇಂತಹ ಬೆಳವಣಿಗೆ ಮಾರಕ ಎಂದರು.

ಜಾತಿ ಗಣತಿ ಆಧರಿಸಿ ಸಂಸತ್‌ಗೆ ಸೀಟುಗಳನ್ನು ನಿರ್ಧರಿಸುವುದು ಸಹ ಸರಿಯಲ್ಲ. ಉತ್ತರ ಭಾರತದಲ್ಲಿ ಜನಸಂಖ್ಯೆ ಬೆಳೆಯುತ್ತಿದ್ದರೆ, ದಕ್ಷಿಣ ಭಾರತದ ರಾಜ್ಯಗಳಲ್ಲಿ ಕುಟುಂಬ ಯೋಜನೆ ಕಾರಣದಿಂದಾಗಿ ಜನಸಂಖ್ಯೆ ಹೆಚ್ಚುತ್ತಿಲ್ಲ. ಹೀಗಿರುವಾಗ ಉತ್ತರ ಭಾರತದ ಸಂಸದರ ಸಂಖ್ಯೆ ಹೆಚ್ಚಾಗಿ, ದಕ್ಷಿಣ ಭಾರತ ಸಂಸದರ ಸಂಖ್ಯೆ ಈ ಹಿಂದೆ ಇದ್ದಷ್ಟೇ ಇರುತ್ತದೆ. ಈ ಕಾರಣದಿಂದಾಗಿ ದಕ್ಷಿಣ ಭಾರತದವರು ಸಂಸತ್‌ನಲ್ಲಿ ಧ್ವನಿಯತ್ತದಂತಾಗುತ್ತದೆ ಎಂದು ವಿಷಾದಿಸಿದರು.

ಸಚಿವ ಡಾ.ಜಿ. ಪರಮೇಶ್ವರ್ ಅವರು ಸಜ್ಜನ ರಾಜಕಾರಣಿ. ರಾಜ್ಯದಲ್ಲಿ ಸಚಿವರಾಗಿ ಉತ್ತಮ ಆಡಳಿತ ನೀಡುತ್ತಿದ್ದಾರೆ. ಈ ಹಿಂದೆಯೂ ತಮಗೆ ನೀಡಲಾಗಿದ್ದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಅವರ ಹೆಸರಿನಲ್ಲಿ ಸಂಘಟನೆ ಜನಪರ ಕೆಲಸ ಹಮ್ಮಿಕೊಳ್ಳುತ್ತಿರುವುದು ಸ್ವಾಗತಾರ್ಹ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಈ ವೇಳೆ ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್, ಅಖಿಲ ಕರ್ನಾಟಕ ಡಾ.ಜಿ. ಪರಮೇಶ್ವರ್ ಯುವ ಸೈನ್ಯ ಸಂಘಟನೆ ಅಧ್ಯಕ್ಷ ಮಂಜುನಾಥ್, ಪದಾಧಿಕಾರಿಗಳಾದ ಮಹೇಶ್ ಹಾಗೂ ಇನ್ನಿತರರು ಹಾಜರಿದ್ದರು.

ಡಾ. ಯತೀಂದ್ರ ಹೇಳಿಕೆ ಬಗ್ಗೆ ಬಿಜೆಪಿಯಿಂದ ಗೊಂದಲ ಸೃಷ್ಟಿ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್. ರಾಜೇಶ್ ಮಾತನಾಡಿದರು. ಚಿತ್ರದಲ್ಲಿ ಪದಾಧಿಕಾರಿಗಳಾದ ಕುರುಬಾರಹಳ್ಳಿ ಪ್ರಕಾಶ್, ರವಿ, ಶಿವರುದ್ರ, ಸಿದ್ದರಾಜು ಹಾಗೂ ಹರ್ಷವರ್ಧನ್ ಅವರನ್ನು ಕಾಣಬಹುದು.


ಮೈಸೂರು,ಜ.5(ಎಂಟಿವೈ)– ಧರ್ಮಕ್ಕಾಗಿ ಹೋರಾಡಿದರೆ ನಮ್ಮ ಹಕ್ಕುಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆ ಸಮಂಜಸವಾಗಿದ್ದು, ಸಮಾಜಕ್ಕೆ ಸತ್ಯ ಹೇಳಿರುವುದನ್ನು ಸಹಿಸದೆ ಬಿಜೆಪಿಗರು ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್. ರಾಜೇಶ್ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡಿದರೆ ಶೋಷಿತ ವರ್ಗಗಳು, ಅಲ್ಪಸಂಖ್ಯಾತರು ಉತ್ತಮ ಜೀವನ ನಡೆಸಲು ಅಡ್ಡಿಯುಂಟಾಗುತ್ತದೆ. ಚುನಾವಣೆ ಸಮೀಪಿಸುತ್ತಿದ್ದಂತೆಯೇ ಬಿಜೆಪಿ ನಾಯಕರು ಧರ್ಮ, ದೇವರ ಹೆಸರು ಮುಂದಿಟ್ಟುಕೊಂಡು ರಾಜಕಾರಣ ಮಾಡಲು ಮುಂದಾಗುತ್ತಾರೆ. ಜನರ ಭಾವನೆಯೊಂದಿಗೆ ಚೆಲ್ಲಾಟ ಆಡಿ, ರಾಜಕೀಯ ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದರೆ ಬಿಜೆಪಿಗರ ಸಂಚನ್ನು ಅರಿಯದೇ ಕೆಲವರು ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಪ್ರಚೋದನಾತ್ಮಕ ಮಾತುಗಳಿಗೆ ಒಳಗಾಗಿ ಅಹಿತಕರ ಘಟನೆಗಳಲ್ಲಿ ಪಾಲ್ಗೊಂಡು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ನೀಡಿರುವ ಹೇಳಿಕೆ ಮಹತ್ವದ್ದಾಗಿದೆ ಎಂದರು.

ಮೈಸೂರು ಸಹಕಾರ ಸಂಘಗಳ ಒಕ್ಕೂಟದ ಚುನಾವಣೆ ಮುಂದೂಡಲು ಕಾಂಗ್ರೆಸ್ ತಂತ್ರ ರೂಪಿಸುತ್ತಿದೆ. ತಮ್ಮ ಪುತ್ರ ಶಾಸಕ ಹರೀಶ್‌ಗೌಡರನ್ನು ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯದಂತೆ ನೋಡಿಕೊಳ್ಳುವ ಕ್ರಮ ಇದಾಗಿದೆ ಎಂದು ಶಾಸಕ ಜಿ.ಟಿ. ದೇವೇಗೌಡ ಆರೋಪಿಸಿರುವುದು ಸರಿಯಲ್ಲ. ಈ ಹಿಂದೆ ಹಾಲು ಒಕ್ಕೂಟ ಸಹಕಾರಿಗಳ ಚುನಾವಣೆ ವೇಳೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರೇ ಜಿಟಿಡಿ ವಿರುದ್ಧವಾಗಿ ಪ್ರಚಾರ ಮಾಡಿದ ಉದಾಹರಣೆ ಇದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕುರುಬಾರಹಳ್ಳಿ ಪ್ರಕಾಶ್, ರವಿ, ಶಿವರುದ್ರ, ಸಿದ್ದರಾಜು ಹಾಗೂ ಹರ್ಷವರ್ಧನ್ ಇದ್ದರು.

ಯತಿರಾಜ್ ಭಗವಾನ್(ಪೀಪಿ) ನಿಧನ



ಮೈಸೂರು, ಜ.5– ಮೈಸೂರಿನ ಬೋಗಾದಿ ನಿವಾಸಿ ಯತಿರಾಜ್ ಭಗವಾನ್ (ಪೀಪಿ) ಇಂದು ಮುಂಜಾನೆ ನಿಧನರಾದರು. ಅವರಿಗೆ 68 ವರ್ಷ ವಯಸ್ಸಾಗಿತ್ತು. ಕಾಕತಾಳೀಯವೆಂದರೆ ಇವರು ಜನಿಸಿದ್ದು ಜನವರಿ 5 1956. ಜ.5ರಂದೇ ಇವರು ನಿಧನರಾಗಿದ್ದಾರೆ. ಮೃತರು ಪತ್ನಿ ಡಾ.ಆಶಾ ಯತಿರಾಜ್, ಪುತ್ರಿ ರೋಷಿಣಿ, ಪುತ್ರ ಅಲೋಕ್ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಲ್ಲೇಟ್ಟಿರ ನಂಜಪ್ಪ



ಮೈಸೂರು, ಜ.5– ಮೈಸೂರು ಗೋಕುಲಂ 3ನೇ ಹಂತದ ನಿವಾಸಿ ಮಲ್ಲೇಟ್ಟಿರ ನಂಜಪ್ಪ (ರಘುಪತಿ) ಇಂದು ಬೆಳಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರಿಗೆ 90 ವರ್ಷ ವಯಸ್ಸಾಗಿತ್ತು ನಂಜಪ್ಪನವರು ಮೈಸೂರಿನ ಕೊಡವ ಧೀನಬಂಧು ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಟ್ರಸ್ಟಿಯಾಗಿದ್ದರು. ಮೂಲತಃ ವಿರಾಜಪೇಟೆಯ ಕೂಕ್ಲೂರು ಗ್ರಾಮದ ನಿವಾಸಿಯಾಗಿದ್ದು, ಪತ್ನಿ ಚಿಮ್ಮಿ, ಇಬ್ಬರು ಪುತ್ರರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಶನಿವಾರ) ಮಧ್ಯಾಹ್ನ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇನ್ಫೋಸಿಸ್‌ನಿಂದ ಡಾ.ಸುಧಾಮೂರ್ತಿ ಅವರ ಹೊರಗಿಟ್ಟಿದ್ದು ನನ್ನ ತಪ್ಪು ನಿರ್ಧಾರ

ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಮನದ ಮಾತು ಬಹಿರಂಗ

ನವದೆಹಲಿ,ಜ.5– ಪ್ರತಿಷ್ಠಿತ ಇನ್ಫೋಸಿಸ್ ಸಂಸ್ಥಾಪಕರಲ್ಲೊಬ್ಬರಾದ ಸುಧಾಮೂರ್ತಿಯವರು ಸಂಸ್ಥೆಯಿಂದ ಹೊರಗುಳಿಯಲು ಅವರ ಪತಿ, ಸಂಸ್ಥೆಯ ಸಂಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿಯವರೇ ಕಾರಣ. ಇದನ್ನು ಸ್ವತಃ ನಾರಾಯಣಮೂರ್ತಿಯವರೇ ಬಹಿರಂಗಗೊಳಿಸುವ ಜೊತೆಗೆ ಇದೊಂದು ತಪ್ಪು ನಿರ್ಧಾರ ಎಂದಿದ್ದಾರೆ.

ಸಿಎನ್‌ಬಿಸಿ-ಟಿವಿ 18ಗೆ ನೀಡಿದ ಸಂದರ್ಶನದಲ್ಲಿ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡಿರುವ ಅವರು, ಕುಟುಂಬವನ್ನು ಕಂಪನಿಯೊಳಗೆ ತರಬಾರದು ಎಂಬ ತಪ್ಪು ಆದರ್ಶವನ್ನು ನಂಬಿದ್ದ ನನ್ನಿಂದ ಇದೊಂದು ತಪ್ಪು ಆಗಿದೆ. ನನಗಿಂತ ಸುಧಾ ಹೆಚ್ಚು ಓದಿದ್ದರು. ಇನ್ಫೋಸಿಸ್ ಸಂಸ್ಥಾಪಕರಾದ ಆರು ಜನರಲ್ಲಿ ಇವರೂ ಒಬ್ಬರಾಗಿದ್ದರು. ಹೀಗಿದ್ದರೂ ಅವರನ್ನು ಕಂಪನಿಯಿಂದ ಹೊರಗಿಟ್ಟಿದ್ದು ದೊಡ್ಡ ತಪ್ಪು ಎಂದು ಹೇಳಿದ್ದಾರೆ.

ಕುಟುಂಬವನ್ನು ಕಂಪನಿಯೊಳಗೆ ತಾರದಿರುವುದು ಕಾರ್ಪೊರೇಟ್ ಜಗತ್ತಿನ ಅತ್ಯುತ್ತಮ ಪದ್ಧತಿ ಎಂದು ನಾನು ನಂಬಿದ್ದೆ. ಆ ಕಾಲದಲ್ಲಿ ಮಕ್ಕಳು ಕಂಪನಿಗಳನ್ನು ನಡೆಸಲು ಬರುತ್ತಿದ್ದುದನ್ನು ನಾನು ನೋಡಿದ್ದೆ. ಅವರಿಂದ ಬಹಳಷ್ಟು ಕಾನೂನುಗಳ ಉಲ್ಲಂಘನೆಯಾಗುವುದನ್ನು ತಿಳಿದಿದ್ದೆ. ಆದರೆ ನನ್ನ ನಿರ್ಧಾರದ ಕುರಿತು ಇತ್ತೀಚೆಗೆ ಕೆಲ ತತ್ವಜ್ಞಾನದ ಪ್ರಾಧ್ಯಾಪಕರೊಂದಿಗೆ ಚರ್ಚಿಸಿದೆ. ಆಗ ನನ್ನ ನಿರ್ಧಾರವೇ ತಪ್ಪು ಎಂದರು. ಕುಟುಂಬದಲ್ಲಿ ಪತ್ನಿ, ಪುತ್ರ ಅಥವಾ ಪುತ್ರಿ ವ್ಯವಹಾರ ನಡೆಸುವಷ್ಟು ಸಮರ್ಥರಿದ್ದರೆ, ಚೌಕಟ್ಟಿನೊಳಗೆ ಉತ್ತಮವಾಗಿ ಕಾರ್ಯ ನಿರ್ವಹಿಸುವವರಾದರೆ ಅಂಥವರನ್ನು ತಡೆಯುವ ಯಾವುದೇ ಹಕ್ಕು ನಿಮಗಿಲ್ಲ. ಒಂದೊಮ್ಮೆ ಹಾಗೆ ಮಾಡಿದ್ದೇ ಆದರೆ ನಿಮ್ಮದೇ ಹಕ್ಕುಗಳನ್ನು ನೀವು ಕಸಿದುಕೊಂಡಂತೆ ಎಂದು ಹೇಳಿದರೆಂದು ತಿಳಿಸಿದ್ದಾರೆ.



ಇನ್ಫೋಸಿಸ್ ನಾರಾಯಣಮೂರ್ತಿ ಹಾಗೂ ಸುಧಾಮೂರ್ತಿ ದಂಪತಿ

ಲೇಖಕಿ ಸುಧಾಮೂರ್ತಿ ಅವರು ಇನ್ಫೋಸಿಸ್ ಕಂಪನಿ ಆರಂಭಿಸಲು ಅಗತ್ಯವಿದ್ದ ಹೂಡಿಕೆಗಾಗಿ 10 ಸಾವಿರ ನೀಡಿದವರಲ್ಲಿ ಮೊದಲಿಗರು. ಆದರೆ ಅದೇ 10 ಸಾವಿರ ಶತಕೋಟಿ ಡಾಲರ್ ಆಗಲಿದೆ ಎಂದು ನಾನು ಆಗ ಊಹಿಸಿರಲಿಲ್ಲ ಎಂದು ನಾರಾಯಣ ಮೂರ್ತಿ ಇದೇ ವೇಳೆ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಪತಿಯ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸುಧಾಮೂರ್ತಿ ಅವರು, ಆ ಸಂದರ್ಭದಲ್ಲಿ ಅವರ(ನಾರಾಯಣಮೂರ್ತಿ) ನಿರ್ಧಾರ ನನ್ನ ಮೆದುಳಿಗೆ ಸರಿ ಎನಿಸಿದರೂ, ಹೃದಯ ಒಪ್ಪಿಕೊಳ್ಳಲಿಲ್ಲ. ನನಗೆ ಕೆಲಸ ಮಾಡುವ ಮನಸ್ಸಿತ್ತು. ಆದರೆ ಕುಟುಂಬದ ಹಿತದೃಷ್ಟಿಯಿಂದ ನಾನೇ ಹಿಂದೆ ಸರಿಯಲು ನಿರ್ಧರಿಸಿದೆ. ನಾರಾಯಣಮೂರ್ತಿ ಅವರು ಆಗ ತಮ್ಮ ನಿರ್ಧಾರಕ್ಕೆ ಕಟಿಬದ್ಧರಾಗಿದ್ದರು. ನೀನು ಕಂಪನಿ ಸೇರುವುದೇ ಆದರೆ, ನಾನು ಹಿಂದೆ ಸರಿಯುತ್ತೇನೆ ಎಂದುಬಿಟ್ಟರು. ಅವರು ಒಮ್ಮೆ ನಿರ್ಧಾರ ತೆಗೆದುಕೊಂಡರೆ, ಅದು ಸರಿಯೋ ಅಥವಾ ತಪ್ಪೋ.. ಅದರಿಂದ ಅವರು ಎಂದಿಗೂ ಹಿಂದೆ ಸರಿಯುವ ವ್ಯಕ್ತಿಯಲ್ಲ ಎಂಬ ಅವರ ವ್ಯಕ್ತಿತ್ವ ನನಗೆ ಚೆನ್ನಾಗಿ ಗೊತ್ತಿತ್ತು ಎಂದು ಹೇಳಿದ್ದಾರೆ.

ಇತ್ತೀಚೆಗೆ ತೀವ್ರ ಚರ್ಚೆಗೆ ಕಾರಣವಾದ ವಾರದಲ್ಲಿ 70 ಗಂಟೆ ದುಡಿಮೆ ಕುರಿತು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ನಾರಾಯಣ ಮೂರ್ತಿಯವರು, ರೈತರು, ಕಾರ್ಮಿಕರ ಪರಿಶ್ರಮ ವಿದ್ಯಾವಂತರಿಂದ ಆಗುತ್ತಿಲ್ಲ. ರೈತರು, ಕಾರ್ಖಾನೆ ಕಾರ್ಮಿಕರು ಹಾಗೂ ಭಾರತದಲ್ಲಿರುವ ಇತರ ದುಡಿಯುವ ವರ್ಗ ಅತ್ಯಂತ ಶ್ರಮ ಜೀವಿಗಳಾಗಿದ್ದಾರೆ. ಆದರೆ ಶಿಕ್ಷಣ ಪಡೆದ ದೇಶದ ವಿದ್ಯಾವಂತರೇ ಅಷ್ಟು ಶ್ರಮ ವಹಿಸುತ್ತಿಲ್ಲ. 70 ಗಂಟೆ ದುಡಿಮೆ ಕುರಿತ ನನ್ನ ಹೇಳಿಕೆಗೆ ಸಾಕಷ್ಟು ಟೀಕೆಗಳು ವ್ಯಕ್ತವಾದವು. ಆದರೆ ಅನಿವಾಸಿ ಭಾರತೀಯರು ಸೇರಿದಂತೆ ಬಹಳಷ್ಟು ಜನ ಅದನ್ನು ಒಪ್ಪಿಕೊಂಡಿದ್ದಾರೆ. ರಿಯಾಯಿತಿಯೊಂದಿಗೆ ಶಿಕ್ಷಣ ಪಡೆದ ನಾವು ಸರ್ಕಾರದ ಸೌಕರ್ಯಗಳಿಗೆ ಧನ್ಯವಾದ ಹೇಳಬೇಕು. ಆದರೆ ಈ ಅದೃಷ್ಟ ಸಿಗದ ಬಹಳಷ್ಟು ಜನ ಅತ್ಯಂತ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ ಎಂದಿದ್ದಾರೆ.

ಸಂದರ್ಭಕ್ಕೆ ತಕ್ಕಂತೆ ಪಕ್ಷಿಗಳ ಕೂಗು ಬದಲಾವಣೆ

ರಾಷ್ಟ್ರೀಯ ಪಕ್ಷಿಗಳ ದಿನಾಚರಣೆಯಲ್ಲಿ ಎಸಿಎಫ್ ಮಹದೇವಯ್ಯ

ಹುಣಸೂರು, ಜ.5– ಪಕ್ಷಿಗಳು ಹಸಿವಾದಾಗ, ಖುಷಿಯಾದಾಗ, ಭಯವಾದಾಗ ಬೇರೆ ಬೇರೆ ರೀತಿ ಕೂಗುತ್ತವೆ. ಹೀಗಾಗಿ ಸಂದರ್ಭಕ್ಕೆ ತಕ್ಕಂತೆ ಪಕ್ಷಿಗಳ ಕೂಗು ಬದಲಾಗುವುದರಿಂದ ಅದರ ಬಗ್ಗೆ ನಮಗೆ ಮಾಹಿತಿ ಇದ್ದರೆ ಸ್ಪಷ್ಟವಾಗಿ ತಿಳಿಯುತ್ತದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹದೇವಯ್ಯ ತಿಳಿಸಿದರು.

ರಾಷ್ಟ್ರೀಯ ಪಕ್ಷಿಗಳ ದಿನದ ಅಂಗವಾಗಿ ಹುಣಸೂರು ಪ್ರಾದೇಶಿಕ ವಲಯದಿಂದ ತಾಲೂಕಿನ ಕಲ್ಲಬೆಟ್ಟದ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಶ್ವದಾದ್ಯಂತ ಪ್ರಸ್ತುತ 10 ಸಾವಿರ ಜಾತಿಯ ಪಕ್ಷಿಗಳಿವೆ. ಅದೇ ರೀತಿ ನಮ್ಮ ದೇಶದಲ್ಲಿ 1300 ಜಾತಿಯ ಪಕ್ಷಿಗಳಿದ್ದು, ಕರ್ನಾಟಕದಲ್ಲಿ 500ರಿಂದ 550 ಜಾತಿಯ ಪಕ್ಷಗಳಿವೆ. ಪಕ್ಷಿಗಳು ಹಸಿವಾದಾಗ, ಖುಷಿಯಾದಾಗ, ಭಯವಾದಾಗ ಬೇರೆ ಬೇರೆ ರೀತಿ ಕೂಗುತ್ತವೆ. ಅದರ ಬಗ್ಗೆ ನಮಗೆ ಮಾಹಿತಿ ಇದ್ದರೇ ಅದು ಸ್ಪಷ್ಟವಾಗಿ ತಿಳಿಯುತ್ತದೆ. ಪಕ್ಷಿಗಳು ಹುಳ ಹುಪ್ಪಟೆಗಳನ್ನು ತಿಂದು ತಮ್ಮ ಹಸಿವನ್ನು ನೀಗಿಸಿಕೊಳ್ಳುವ ಜೊತೆಗೆ ರೈತರಿಗೆ ಅನುಕೂಲ ಮಾಡಿ ಕೊಡುತ್ತವೆ. ಪಕ್ಷಿಗಳು ಹಣ್ಣುಗಳನ್ನು ತಿಂದು ಕಾಡಿನಲ್ಲಿ ಬೀಜಗಳನ್ನು ಹಾಕುವುದರಿಂದ ಕಾಡಿನಲ್ಲಿ ಮರಗಳು ಬೆಳೆಯುತ್ತವೆ. ಹೀಗಾಗಿ ಪಕ್ಷಿಗಳನ್ನು ಕಾಡಿನ ರೈತ ಎಂದು ಕರೆಯುತ್ತಾರೆ ಎಂದರು.

ರಂಗನತಿಟ್ಟು ಪಕ್ಷಿಧಾಮದ ವನಪಾಲಕ ಪ್ರವೀಣ್ ಜೇವರ್ಗಿ ಮಾತನಾಡಿ, ಆಸಕ್ತಿ, ತಾಳ್ಮೆ ಇದ್ದರೆ ಪಕ್ಷಿಯನ್ನು ಗುರುತಿಸಲು ಸಾಧ್ಯ ಎಂದ ಅವರು, ರಂಗನತಿಟ್ಟು ಪಕ್ಷಿಧಾಮಕ್ಕೆ ದೇಶ ವಿದೇಶಗಳಿಂದ ಪಕ್ಷಿಗಳು ಆಗಮಿಸುತ್ತವೆ. ಹೀಗಾಗಿ ತಾವೆಲ್ಲಾ ರಂಗನತಿಟ್ಟಿಗೆ ಆಗಮಿಸಿ ಪಕ್ಷಿಗಳನ್ನು ವೀಕ್ಷಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಾಗರಹೊಳೆಯ ನ್ಯಾಚುರಲಿಸ್ಟ್ ಗೋಪಿ ಮಾತನಾಡಿ, ಅನೇಕ ತಳಿಯ ಪಕ್ಷಿಗಳು ವಿನಾಶದ ಅಂಚಿನಲ್ಲಿವೆ. ಅದನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ. ಅಳಿವಿನಂಚಿನಲ್ಲಿದ್ದ ಪಕ್ಷಿಗಳನ್ನು ವಿದ್ಯಾರ್ಥಿಗಳು ಸಂರಕ್ಷಿಸಿರುವ ಉದಾಹರಣೆಗಳಿವೆ. ಆದ್ದರಿಂದ ವಿದ್ಯಾರ್ಥಿಗಳು ಪಕ್ಷಿಗಳನ್ನು ಸಂರಕ್ಷಿಸಲು ಕೈಜೋಡಿಸಬೇಕು ಎಂದರು.

ವಲಯ ಅರಣ್ಯಾಧಿಕಾರಿ ನಂದಕುಮಾರ್ ವಿದ್ಯಾರ್ಥಿಗಳನ್ನು ಸ್ವಾಗತಿಸಿ, ವಿದ್ಯಾರ್ಥಿಗಳನ್ನು ಐದು ತಂಡಗಳನ್ನಾಗಿ ಮಾಡಿ ಪ್ರತಿ ತಂಡಕ್ಕೆ ಓರ್ವ ಗೈಡ್‌ನನ್ನು ನೇಮಿಸಿ ಅವರಿಗೆ ಕ್ಯಾಪ್ ಹಾಗೂ ಪಕ್ಷಿಗಳ ಕೈಪಿಡಿಗಳನ್ನು ವಿತರಿಸಿದರು. ಮತ್ತು ಪಕ್ಷಿಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ ಬೈನಾಕುಲರ್‌ಗಳನ್ನು ನೀಡಿದ್ದರು.

ಶಾಸ್ತ್ರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಮೇಘಲ್ ಮಾತನಾಡಿ, ಇದೇ ಮೊದಲ ಬಾರಿಗೆ ನಾನು ಹಲವು ಪಕ್ಷಿಗಳನ್ನು ವೀಕ್ಷಿಸಿದೆ. ಇದುವರೆಗೂ ಪಕ್ಷಿಗಳನ್ನು ಪುಸ್ತಕದಲ್ಲಿ ನೋಡುತ್ತಿದ್ದೆವು. ಆದರೆ ಇಂದು ಪಕ್ಷಿಗಳ ನೋಡುವುದರ ಜೊತೆಗೆ ಅವುಗಳ ಕೂಗು ಕೇಳುವ ಅವಕಾಶ ದೊರೆತಿದೆ ಎಂದರು.

ಪಕ್ಷಿ ವೀಕ್ಷಣೆ ನಂತರ ವಿದ್ಯಾರ್ಥಿಗಳಿಗೆ ಸ್ಥಳದಲ್ಲೇ ಪಕ್ಷಿಗಳ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಹುಣಸೂರು ಶಾಸ್ತ್ರಿ ವಿದ್ಯಾಸಂಸ್ಥೆ ಪ್ರಥಮ, ಹುಣಸೂರಿನ ಸರ್ಕಾರಿ ಬಾಲಕಿಯರ ಪಿಯು ಕಾಲೇಜು ದ್ವಿತೀಯ, ಪಿರಿಯಾಪಟ್ಟಣದ ತಾಲೂಕಿನ ಬೆಟ್ಟದಪುರ ಐಟಿಐ ಕಾಲೇಜು ಮೂರನೇ ಬಹುಮಾನ ಪಡೆಯಿತು. ವಿಜೇತರಿಗೆ ಸ್ಥಳದಲ್ಲೇ ಬಹುಮಾನ ವಿತರಿಸಲಾಯಿತು.

ಈ ವೇಳೆ ಕಲ್ಲಬೆಟ್ಟ ಡಿಪೋ ಅರಣ್ಯಾಧಿಕಾರಿ ರಮ್ಯಾ, ವ್ಯವಸ್ಥಾಪಕ ಬಸವರಾಜ್, ಹೊನ್ನಾರೆಡ್ಡಿ, ಮಂಜುನಾಥ್, ಮಂಜು, ಡಿಆರ್‌ಎಫ್‌ಒಗಳಾದ ಮಲ್ಲಿಕಾರ್ಜುನ್, ಹರೀಶ್, ಪ್ಯಾರೆಜಾನ್, ವಿನಯ, ಗಸ್ತು ಅರಣ್ಯ ಪಾಲಕರಾದ ರವಿ, ದೇವಯ್ಯ, ಶಿವಣ್ಣ, ಬಸವರಾಜು, ಕುಮಾರ, ಜಯರಾಮ್, ತಮ್ಮೇಗೌಡ, ರವಿ, ಶಿವಲಿಂಗ, ಸುಮಾರು 75 ವಿದ್ಯಾರ್ಥಿಗಳು, ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿ ಹಾಜರಿದ್ದರು.



ಹುಣಸೂರು ತಾಲೂಕಿನ ಕಲ್ಲಬೆಟ್ಟದ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನದಲ್ಲಿ ರಾಷ್ಟ್ರೀಯ ಪಕ್ಷಿಗಳ ದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹದೇವಯ್ಯ, ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರರಿದ್ದಾರೆ.

> ಇಂದು ನನಗೆ ಪಕ್ಷಿ ವೀಕ್ಷಣೆಗೆ ಅವಕಾಶ ದೊರೆತಿರುವುದಕ್ಕೆ ಸಂತೋಷವಾಗಿದೆ. ಕೆಲವು ಪಕ್ಷಿಗಳನ್ನು ನಾವು ಮನೆಯ ಸುತ್ತಮುತ್ತ ವೀಕ್ಷಿಸುತ್ತೇವೆ. ಆದರೆ ಇಲ್ಲಿ ಬೆಳ್ಳಕ್ಕಿ, ನವಿಲು, ಪಾರಿವಾಳ, ಸೊರಕ್ಕಿ ಹೀಗೆ ಇನ್ನೂ ಹೆಚ್ಚಿನ ಪಕ್ಷಿಗಳನ್ನು ವೀಕ್ಷಿಸಲು ಸಾಧ್ಯವಾಯಿತು.
> **–ಮಾಧುರಿ, ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ.**

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಲಾರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್–3 (ಹಿಂ)	4 ಪ್ರದರ್ಶನಗಳು
ಪ್ರಭಾ	
on line ಮದುವೆ off line ಶೋಭನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪ್ರೇಮ ಕಥ (ತೆ): ಬೆ.10.20ಕ್ಕೆ, ಮಾಥಿಮಾರನ್ (ತ): ಮ.1.05ಕ್ಕೆ, ಸಲಾರ್–1 (ತೆ): ಮ.3.40ಕ್ಕೆ, ಕಾಟೇರ (ಕ): ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಮ.12.05ಕ್ಕೆ, ಕಾಟೇರ (ಕ): ಮ.3.50ಕ್ಕೆ, ರಾ.10ಕ್ಕೆ, ಪ್ರೇಮ ಕಥ (ತೆ): ರಾ.7.15ಕ್ಕೆ.
ಸ್ಕ್ರೀನ್ 3	ಒಂಟಿ ಬಂಟಿ ಲವ್ ಸ್ಟೋರಿ (ಕ): ಬೆ.10.20ಕ್ಕೆ, ಡಂಕಿ (ಹಿಂ): ಮ.1.20ಕ್ಕೆ, ರಾ.7.10ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಸಂ.4.30ಕ್ಕೆ, ಆಟಂ (ಮ): ರಾ.10.15ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.50ಕ್ಕೆ, ಮ.1.15ಕ್ಕೆ, ಸಂ.4.45ಕ್ಕೆ, ರಾ.8.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಾಟೇರ (ಕ): ಬೆ.11.30ಕ್ಕೆ, ಮ.3.10ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಾಟೇರ (ಕ): ಬೆ.10.30ಕ್ಕೆ, ಮ.2.10ಕ್ಕೆ, ಸಂ.5.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಸಲಾರ್–1 (ಕ): ಬೆ.11ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ, ಸಲಾರ್ –1 (ಹಿಂ): ಮ.2.35ಕ್ಕೆ.
ಸ್ಕ್ರೀನ್ 4	ಮೈಗ್ರೇಷನ್ (3ಡಿ)(ಇಂ): ಬೆ.10.30ಕ್ಕೆ, ರಾ.7.55ಕ್ಕೆ, ಡಂಕಿ (ಹಿಂ): ಮ.12.35ಕ್ಕೆ, ಸಂ.4.35ಕ್ಕೆ, ಸಲಾರ್–1 (ಹಿಂ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಲೈಂಗಿಕ ಕಿರುಕುಳ ಪ್ರಕರಣ: ಪ್ರಭಾರ ಮುಖ್ಯ ಶಿಕ್ಷಕ ಅಮಾನತು

ನಂಜನಗೂಡು, ಜ.5– ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ತಾಲೂಕಿನ ದಾಸನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪ್ರಭಾರ ಮುಖ್ಯಶಿಕ್ಷಕ ಪಿ.ಪ್ರಕಾಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಡಿಡಿಪಿಐ ಹೆಚ್.ಕೆ.ಪಾಂಡು ಆದೇಶ ಹೊರಡಿಸಿದ್ದಾರೆ.

ವಿದ್ಯಾರ್ಥಿನಿಯರಿಗೆ ಪ್ರಭಾರ ಮುಖ್ಯಶಿಕ್ಷಕ ಪಿ.ಪ್ರಕಾಶ್ ಲೈಂಗಿಕ ಕಿರುಕುಳ ನೀಡುತ್ತಿರುವ ಬಗ್ಗೆ ಆರೋಪ ಕೇಳಿ ಬಂದಿತ್ತು. ಪೋಷಕರು ಶಿಕ್ಷಕನನ್ನು ಸೇವೆಯಿಂದ ಅಮಾನತುಗೊಳಿಸಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ನೀಡಿದ್ದರು. ಈ ಸಂಬಂಧ ಕೌಲಂದೆ ಪೊಲೀಸ್ ಠಾಣೆಯಲ್ಲಿ ಸಿಡಿಪಿಓ ಗೀತಾ ಅವರು ದೂರು ದಾಖಲಿಸಿದ್ದರು. ಪೊಲೀಸರು ಪೋಕ್ಸೋ ಕಾಯ್ದೆಯಡಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ಈ ವೇಳೆ ಪ್ರಭಾರ ಮುಖ್ಯ ಶಿಕ್ಷಕ ಮೇಲ್ನೋಟಕ್ಕೆ ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡಿರುವುದು ದೃಢಪಟ್ಟ ಹಿನ್ನಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಶಿಕ್ಷಕನನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದೆ.

ಸೋಸಲೆ ಪಿಎಸಿಎಸ್ ದಿನದರ್ಶಿಕೆ ಬಿಡುಗಡೆ



ಸೋಸಲೆ ಪಿಎಸಿಎಸ್ ದಿನದರ್ಶಿಕೆಯನ್ನು ಸಂಘದ ಆವರಣದಲ್ಲಿ ಬಿಡುಗಡೆಗೊಳಿಸಲಾಯಿತು.

ತಿ.ನರಸೀಪುರ: ತಾಲೂಕಿನ ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024ನೇ ಸಾಲಿನ ನೂತನ ದಿನದರ್ಶಿಕೆಯನ್ನು ಸಂಘದ ಆವರಣದಲ್ಲಿ ಬಿಡುಗಡೆಗೊಳಿಸಲಾಯಿತು.

ಸಂಘದ ಅಧ್ಯಕ್ಷ ಸೋಸಲೆ ಎಂ.ಪರಶಿವಮೂರ್ತಿ ಮಾತನಾಡಿ, 2023 ಕಳೆದು ನೂತನ ವರ್ಷಕ್ಕೆ ಕಾಲಿಟ್ಟಿದ್ದೇವೆ. ಕಳೆದ ವರ್ಷ ನಮ್ಮ ಸಂಘದ ನಿರ್ದೇಶಕರು, ಕಾರ್ಮಿಕರಿಗೆ ನೀಡಿದ್ದ ಆಶ್ವಾಸನೆಯನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಕಾರ್ಯರೂಪಕ್ಕೆ ತರಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಲಾಗುತ್ತದೆ. ಸಂಘವನ್ನು ತಾಲೂಕಿನಲ್ಲಿ ಹೆಚ್ಚು ಕ್ರಿಯಾಶೀಲ ಸಂಘ ಮಾಡಬೇಕೆನ್ನುವ ಮಹದಾಸೆ ನನ್ನದಾಗಿದೆ. ಸಂಘದ ನಿರ್ದೇಶಕರು ನನ್ನೊಂದಿಗೆ ಕೈ ಜೋಡಿಸಿ ಸಹಕರಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ಸಂಘದ ಉಪಾಧ್ಯಕ್ಷ ಎಂ.ಸೋಮಣ್ಣ, ನಿರ್ದೇಶಕರಾದ ಗದ್ದೆಮೋಳೆ ಹೊನ್ನನಾಯಕ, ಸೋಸಲೆ ಸೈಯದ್ ಮುಸ್ತಾಕ್, ಎಸ್.ಎನ್.ಧರ್ಮರತ್ನಾಕರ್ ಕುಮಾರ್, ಬೆನಕನಹಳ್ಳಿ ಬಿ.ಎಸ್.ಪ್ರಭುಸ್ವಾಮಿ, ವೀರಪ್ಪ ಒಡೆಯರಹುಂಡಿ ಎಸ್.ಕುಮಾರ್, ಚಿಕ್ಕಬೂವಳ್ಳಿ ಎಂ.ನಾಗರಾಜು, ಗದ್ದೆಮೋಳೆ ಜಯಮ್ಮ, ಬೆನಕನಹಳ್ಳಿ ನೀಲಮ್ಮ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ರಾಜಪ್ಪ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಎನ್.ಜಗದೀಶ್ ಮತ್ತಿತರರಿದ್ದರು.



ಕಂಪಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ವೇಳೆ ಅಧ್ಯಕ್ಷ ನಾಗೇಗೌಡ, ಉಪಾಧ್ಯಕ್ಷ ತಮ್ಮಯ್ಯ, ಸಿಇಓ ಕೆ.ಎನ್.ಹರ್ಷ ನಿರ್ದೇಶಕರು ಹಾಗೂ ಸಿಬ್ಬಂದಿ ಹಾಜರಿದ್ದರು.

ಬಿಲ್ ಕಲೆಕ್ಟರ್‌ಗಳು ಜವಾಬ್ದಾರಿ ಅರಿತು ಕಾರ್ಯ ನಿರ್ವಹಿಸಿ

ಜಿಪಂ ಉಪ ಕಾರ್ಯದರ್ಶಿ ಕೃಷ್ಣರಾಜು ಸೂಚನೆ

ನಂಜನಗೂಡು, ಜ.5– ಬಿಲ್ ಕಲೆಕ್ಟರ್‌ಗಳು ಗ್ರಾಪಂಗಳ ಆಧಾರ ಸ್ತಂಭ. ಹೀಗಾಗಿ ನೀವು ನಿಮ್ಮ ಜವಾಬ್ದಾರಿ ಅರಿತು ಕಾರ್ಯ ನಿರ್ವಹಿಸುವ ಮೂಲಕ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಬೇಕು ಎಂದು ಜಿಪಂ ಉಪ ಕಾರ್ಯದರ್ಶಿ ಡಾ.ಎಂ.ಕೃಷ್ಣರಾಜು ಸೂಚಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ಗ್ರಾಪಂ ಬಿಲ್ ಕಲೆಕ್ಟರ್ ನೌಕರರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ದಿನದರ್ಶಿಕೆಗಳು ನಮ್ಮ ದಿನನಿತ್ಯದ ಕರ್ತವ್ಯಗಳನ್ನು ನೆನಪು ಮಾಡುತ್ತವೆ. ಅಂತೆಯೇ ಗ್ರಾಪಂ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಲು ತೆರಿಗೆ ಸಂಗ್ರಹ ಬಹುಮುಖ್ಯ. ಹೀಗಾಗಿ ಬಿಲ್ ಕಲೆಕ್ಟರ್‌ಗಳು ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಹೊಂದುವ ಮೂಲಕ ಸೇವೆ ಒದಗಿಸಬೇಕು. ಆ ಮೂಲಕ ಆರ್ಥಿಕ ವರ್ಷದಲ್ಲಿ ನಿಗದಿಪಡಿಸಿರುವ ತೆರಿಗೆ ಸಂಗ್ರಹಣೆ ಮಾಡಬೇಕು. ನೀವು ನಿಮ್ಮ ಜವಾಬ್ದಾರಿಗಳನ್ನು ಅರಿತು ಕೆಲಸ ನಿರ್ವಹಿಸಿದಲ್ಲಿ ಜೇಷ್ಠತೆಯ ಆಧಾರದ ಮೇಲೆ ಬಡ್ತಿ ಹೊಂದುವ ಅವಕಾಶವಿದೆ ಎಂದರು.

ಈ ವೇಳೆ ತಾಪಂ ಇಓ ಜೆರಾಲ್ಡ್ ರಾಜೇಶ್, ಸಹಾಯಕ ನಿರ್ದೇಶಕ ಶಿವಕುಮಾರ್, ವ್ಯವಸ್ಥಾಪಕ ಮಹದೇವನಾಯಕ, ಲೆಕ್ಕಾಧಿಕಾರಿ ಶ್ರೀಕಂಠನಾಯಕ, ಯೋಜನಾಧಿಕಾರಿ ಚಿತ್ರ, ಬಿಲ್ ಕಲೆಕ್ಟರ್ ನೌಕರರ ಸಂಘದ ಅಧ್ಯಕ್ಷ ಕಾಳಯ್ಯ, ಉಪಾಧ್ಯಕ್ಷ ನಿಂಗರಾಜು, ನಾಗೇಶ್, ಮಂಜುನಾಥ್, ಶಂಕರ್, ಚಂದ್ರಶೇಖರ್, ಮಲ್ಲೇಶ್, ಹೆಚ್.ಸಿ.ಜನಾರ್ಧನ್, ವಿಜಯ್, ಸೋಮಣ್ಣ, ಕುಮಾರ್, ಚೆನ್ನಪ್ಪ, ಸುರೇಶ್, ಶಿವಸ್ವಾಮಿ, ಶಿವರಾಜು, ನಾಗೇಂದ್ರ ಸೇರಿದಂತೆ ಸಂಘದ ಪದಾಧಿಕಾರಿಗಳಿದ್ದರು.



ನಂಜನಗೂಡು ತಾಲೂಕು ಕಚೇರಿಯಲ್ಲಿ ಗ್ರಾಪಂ ಬಿಲ್ ಕಲೆಕ್ಟರ್ ನೌಕರರ ಸಂಘದ ಕ್ಯಾಲೆಂಡರ್ ಅನ್ನು ಜಿಪಂ ಉಪ ಕಾರ್ಯದರ್ಶಿ ಡಾ.ಎಂ.ಕೃಷ್ಣರಾಜು ಬಿಡುಗಡೆಗೊಳಿಸಿದರು.

ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣ ನೀಡಬೇಕು

ಶ್ರೀಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀಸೋಮನಾಥ ಸ್ವಾಮೀಜಿ



ತಿ.ನರಸೀಪುರದ ಶ್ರೀ ಆದಿಚುಂಚನಗಿರಿ ಬಾಲಜಗತ್ ಪೂರ್ವ ಪ್ರಾಥಮಿಕ ಹಿರಿಯ ಪ್ರಾಥಮಿಕ ಪ್ರೌಢಶಾಲೆಯಲ್ಲಿ ನಡೆದ ವಾರ್ಷಿಕೋತ್ಸವವನ್ನು ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಉದ್ಘಾಟಿಸಿದರು.

ತಿ.ನರಸೀಪುರ, ಜ.5– ಗ್ರಾಮೀಣ ಭಾಗದಿಂದ ಆಗಮಿಸುವ ಮಕ್ಕಳು ಹೆಚ್ಚು ಬುದ್ಧಿವಂತರಾಗಿದ್ದು, ಶ್ರೀಬಾಲಗಂಗಾಧರನಾಥ ಸ್ವಾಮೀಜಿಗಳ ದೂರದೃಷ್ಟಿ ಫಲವಾಗಿ ಇಂದು ನಮ್ಮ ಸಂಸ್ಥೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿರುವ ಶ್ರೀ ಆದಿಚುಂಚನಗಿರಿ ಬಾಲಜಗತ್ ಪೂರ್ವ ಪ್ರಾಥಮಿಕ ಹಿರಿಯ ಪ್ರಾಥಮಿಕ ಪ್ರೌಢಶಾಲೆಯಲ್ಲಿ ನಡೆದ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾಸಂಸ್ಥೆಗಳಿಂದ ಮಾತ್ರ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲು ಸಾಧ್ಯ. ಹೀಗಾಗಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಗಮನ ಹರಿಸಬೇಕು ಎಂದು ತಿಳಿಸಿದರು.

ಬಿಇಓ ಜಿ.ಶೋಭಾ ಮಾತನಾಡಿ, ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ದೊಡ್ಡದು. ಆದ್ದರಿಂದ ಪೋಷಕರು ತಮ್ಮ ಮಕ್ಕಳ ಮೇಲೆ ಹೆಚ್ಚು ಗಮನ ಹರಿಸಬೇಕು. ಶಿಕ್ಷಣದಿಂದ ಎಲ್ಲವನ್ನು ಪಡೆಯಲು ಸಾಧ್ಯ. ವಿದ್ಯೆಗೆ ಬೆಲೆ ಸಿಗಬೇಕಾದರೆ ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಈ ವೇಳೆ ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ಸಿಆರ್‌ಪಿ ನವೀನ್, ನಿವೃತ್ತ ಪ್ರಾಂಶುಪಾಲೆ ಇಂದಿರಮ್ಮ, ಉಪನ್ಯಾಸಕ ಕುಮಾರಸ್ವಾಮಿ, ಕಾಂಗ್ರೆಸ್ ಹಿರಿಯ ಮುಖಂಡ ಪಿ.ಸ್ವಾಮಿನಾಥಗೌಡ, ಚನ್ನೇಗೌಡ, ಬಸವರಾಜು, ಬಾಬಣ್ಣ, ವೆಂಕಟೇಶ್, ವ್ಯವಸ್ಥಾಪಕ ಬಸವರಾಜು, ಸೋಮಣ್ಣ, ಮುಖ್ಯ ಶಿಕ್ಷಕಿ ಯುಗಂಬಾ ಹಾಗೂ ಶಾಲೆ ಶಿಕ್ಷಕ ಶಿಕ್ಷಕಿಯರು ಇದ್ದರು.



ತಿ.ನರಸೀಪುರ ತಾಲೂಕಿನ ನೆರೆಗ್ಯಾತನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024ನೇ ಸಾಲಿನ ನೂತನ ಕ್ಯಾಲೆಂಡರ್ ಅನ್ನು ಅಧ್ಯಕ್ಷ ಎನ್.ಎಂ.ಜಂಬಪ್ಪ ಬಿಡುಗಡೆಗೊಳಿಸಿದರು. ಈ ವೇಳೆ ನಿರ್ದೇಶಕರಾದ ಸಿದ್ದರಾಜು, ಸುಂಡಪ್ಪ, ಬಸವರಾಜಪ್ಪ, ನಾಗೇಶ್, ಬಸವರಾಜು, ಎಂ.ಪುಟ್ಟಸ್ವಾಮಿ, ಎಂ.ಶಿವರಾಜು, ಡಿ.ಮಂಟೇಸ್ವಾಮಿ, ಶಿವಕುಮಾರ, ಕೆಂಪಮಣಿ, ಸುಂದರಮ್ಮ, ಮೇಲ್ವಿಚಾರಕ ಎಂ.ರಮೇಶ್, ಸಿಇಓ ಧನಂಜಯ, ಕಂಪ್ಯೂಟರ್ ಆಪರೇಟರ್ ವಸಂತ, ಗುಮಾಸ್ತ ಮನು ಇತರರಿದ್ದರು.

ಪಡಿತರ ಚೀಟಿಗಳ ರದ್ದು: ಜಿಲ್ಲಾಧಿಕಾರಿ ಆದೇಶ

ಮೈಸೂರು, ಜ.5– ಸರ್ಕಾರದಿಂದ ಪ್ರತಿ ತಿಂಗಳು ನ್ಯಾಯಬೆಲೆ ಅಂಗಡಿ ಮೂಲಕ ವಿತರಣೆ ಮಾಡುವ ಆಹಾರ ಧಾನ್ಯಗಳನ್ನು ಪಡಿತರ ಚೀಟಿದಾರರು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಕಂಡು ಬಂದ ಹಿನ್ನೆಲೆ 4 ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ.

ಪಡಿತರ ಚೀಟಿದಾರರು ತಾವು ನ್ಯಾಯಬೆಲೆ ಅಂಗಡಿ ಮೂಲಕ ಪಡೆಯುವ ಆಹಾರ ಧಾನ್ಯಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಬಾರದೆಂದು ಎಚ್ಚರಿಕೆ ನೀಡಿದ್ದು, ಅದಾಗಿಯೂ ನ್ಯಾಯಬೆಲೆ ಅಂಗಡಿ ಮೂಲಕ ಪಡೆಯುವ ಆಹಾರ ಧಾನ್ಯಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದ್ದಲ್ಲಿ ಅಂತಹ ಪಡಿತರ ಚೀಟಿಗಳನ್ನು ರದ್ದು ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿಯಾಗಿ ನೇಮಕ



ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ನೂತನ ರಾಜ್ಯ ಕಾರ್ಯದರ್ಶಿ ಬೈಪಾಸ್ ಮಂಜುನಾಥ್ ಅವರನ್ನು ಶಿಕ್ಷಣ ಸಚಿವ ಮಧು ಬಂಗಾರಪ್ಪ ಸನ್ಮಾನಿಸಿದರು.

ಹೆಚ್.ಡಿ.ಕೋಟೆ, ಜ.5– ತಾಲೂಕಿನ ಚಾಮಲಾಪುರ ಗ್ರಾಮದ ಬೈಪಾಸ್ ಟಿ.ಮಂಜುನಾಥ್ ಅವರನ್ನು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ.

ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆದೇಶದ ಮೇರೆಗೆ ಕೆಪಿಸಿಸಿ ಹಿಂದುಳಿದ ವಿಭಾಗದ ರಾಜ್ಯಾಧ್ಯಕ್ಷ ಎಸ್.ಮಧು ಬಂಗಾರಪ್ಪ ನೇಮಕ ಮಾಡಿದ್ದು, ಪಕ್ಷ ಹಾಗೂ ರಾಜ್ಯ ಕಾಂಗ್ರೆಸ್ ಸಮಿತಿ ಮಾರ್ಗದರ್ಶನ, ಜಿಲ್ಲಾ ಸ್ಥಳೀಯ ನಾಯಕರ ಸಹಯೋಗದಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮಂಜುನಾಥ್ ಅವರಿಗೆ ಸೂಚಿಸಿದ್ದಾರೆ. ಇದೇ ವೇಳೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ನೂತನ ರಾಜ್ಯ ಕಾರ್ಯದರ್ಶಿ ಬೈಪಾಸ್ ಮಂಜುನಾಥ್ ಅವರನ್ನು ಸನ್ಮಾನಿಸಿದರು.

ಈ ವೇಳೆ ಕೆಪಿಸಿಸಿ ರಾಜ್ಯ ಸಂಯೋಜಕ ಶಮಂತ್, ಮೈಸೂರು ವರ್ಗಗಳ ವಿವಿ ಸಿಂಡಿಕೇಟ್ ಸದಸ್ಯ ಡಾ.ಬಸವರಾಜು ಚೆಟ್ಟಿಹುಂಡಿ, ಕೆಇಬಿ ಗುತ್ತಿಗೆದಾರ ಖಂಡೇಗೌಡನಪುರ ಮರಿಸ್ವಾಮಿ, ಮುಖಂಡ ವೈ.ಕೆ. ಮಂಜುನಾಥ್ ಇದ್ದರು.



ಕಂಪಲಾಪುರ ಕೊಪ್ಪಲು ಡೈರಿಯಲ್ಲಿ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಈ ವೇಳೆ ಅಧ್ಯಕ್ಷ ಕೆ.ಎಂ.ಲಕ್ಷ್ಮಣ್, ಉಪಾಧ್ಯಕ್ಷೆ ಪುಟ್ಟಮ್ಮ, ನಿರ್ದೇಶಕರಾದ ಕೆ.ಗೋಪಾಲ್, ಚುದ್ರು, ಸಿದ್ದಪ್ಪ, ಸಿಇಓ ಹೆಚ್.ಲೋಕೇಶ್, ರೇವಣ್ಣ, ದೊಡ್ಡಣ್ಣ ಇತರರಿದ್ದರು.

ಕಾರ್ಯನಿರತ ಕಾರ್ಮಿಕರಿಗೆ ವಿಮಾ ಯೋಜನೆ ಅವಶ್ಯಕ

ಕಾರ್ಮಿಕ ಇಲಾಖೆ ವಿಸ್ತರಣಾಧಿಕಾರಿ ಪರಶಿವಮೂರ್ತಿ



ಹೆಚ್.ಡಿ.ಕೋಟೆ ಪತ್ರಕರ್ತರ ಭವನದಲ್ಲಿ ಕಾರ್ಮಿಕ ಇಲಾಖೆ ಅಧಿಕಾರಿಗಳು ಕಾರ್ಮಿಕರ ವಿಮೆ ಯೋಜನೆ ಬಗ್ಗೆ ವಿವರಿಸಿದರು.

ಹೆಚ್.ಡಿ.ಕೋಟೆ, ಜ.5– ದೇಶದಲ್ಲೇ ಮೊದಲ ಬಾರಿಗೆ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಿಗ್ ಕಾರ್ಮಿಕರಿಗೆ ವಿಮಾ ಯೋಜನೆ ಜಾರಿಗೆ ತರಲಾಗಿದೆ ಎಂದು ಕಾರ್ಮಿಕ ಇಲಾಖೆ ವಿಸ್ತರಣಾಧಿಕಾರಿ ಪರಶಿವಮೂರ್ತಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪತ್ರಿಕಾ ವಿತರಕರಾಗಿ ಸೇವೆ ಸಲ್ಲಿಸುತ್ತಿರುವ ಗಿಗ್ ಕಾರ್ಮಿಕರಿಗೆ ವಿಮಾ ಯೋಜನೆ ಅವಶ್ಯಕ. ಕಾರ್ಮಿಕ ಇಲಾಖೆಯ ಈ ವಿಮಾ ಸೌಲಭ್ಯವು ಕಾರ್ಮಿಕರು ಕರ್ತವ್ಯದಲ್ಲಿರಲೀ ಅಥವಾ ಇಲ್ಲದಿರಲಿ ಸಂಭವಿಸುವ ಅಪಘಾತಗಳಿಗೆ ಅನ್ವಯವಾಗಲಿದೆ. ಈ ಯೋಜನೆ ಸಂಪೂರ್ಣ ಉಚಿತವಾಗಿದ್ದು, ಯಾವುದೇ ಪ್ರೀಮಿಯಂ ಪಾವತಿಸದೇ ಪಡೆಯಬಹುದು ಎಂದರು.

ಸ್ವಿಗಿ, ಜೊಮೆಟೋ ಸಂಸ್ಥೆಗಳಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ನಿರ್ವಹಿಸುವ ಹಾಗೂ ಈ ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಪ್ ಕಾರ್ಟ್, ಪೋಲ್ಡರ್, ಫಾರ್ಮಸಿ, ಬ್ಲಿಂಕಿಟ್, ಬಿಗ್ ಬಾಸ್ಕೆಟ್, ಡಾಮಿನೋಸ್ ಮುಂತಾದ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರು ಈ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ ಎಂದರು.

ಅಪಘಾತದಿಂದ ಮರಣ ಹೊಂದಿದಲ್ಲಿ ವಿಮಾ ಪರಿಹಾರ 2 ಲಕ್ಷ ಹಾಗೂ ಜೀವ ವಿಮಾ 2 ಲಕ್ಷ ಸೇರಿದಂತೆ 4 ಲಕ್ಷಗಳನ್ನು ಈ ವಿಮೆ ಹೊಂದಿದೆ. ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ಎರಡು ಲಕ್ಷವರೆಗೆ ಆಸ್ಪತ್ರೆ ವೆಚ್ಚ, ಜೀವ ವಿಮೆ 2 ಲಕ್ಷಗಳವರೆಗೆ ಸೌಲಭ್ಯವಿದೆ ಎಂದರು.

18 ರಿಂದ 60 ವರ್ಷ ವಯೋಮಾನದವರು ಹಾಗೂ ಆದಾಯ ತೆರಿಗೆ ಪಾವತಿದಾರದಲ್ಲದವರು, ಕರ್ನಾಟಕದಲ್ಲಿ ವೃತ್ತಿ ಕಾರ್ಯ ನಿರ್ವಹಿಸುತ್ತಿರುವವರು ನೋಂದಣಿ ಮಾಡಿಕೊಳ್ಳಬಹುದು ಎಂದರು.

ವಿಮೆ ಮಾಡಿಸಲು ಆಧಾರ್ ಕಾರ್ಡ್, ವೃತ್ತಿ ನಿರ್ವಹಿಸುತ್ತಿರುವ ಸಂಸ್ಥೆಗಳು ವಿತರಿಸಿದ ಗುರುತಿನ ಚೀಟಿ ಅಥವಾ ವೇತನ ಚೀಟಿ, ಇ–ಶ್ರಮ್ ನೋಂದಣಿ ಮಾಡಿಸಿದ್ದಲ್ಲಿ ಇ–ಶ್ರಮ್ ನೋಂದಣಿ ಸಂಖ್ಯೆ ಅವಶ್ಯಕ ಎಂದರು.

ಇದೇ ತಿಂಗಳ 12ರಂದು ಪಟ್ಟಣದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಪತ್ರಿಕಾ ವಿತರಕರಿಗೆ ಈ ಯೋಜನೆ ನೋಂದಣಿ ಹಮ್ಮಿಕೊಂಡಿದ್ದೇವೆ ಎಂದರು.

ಈ ವೇಳೆ ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಉಪಾಧ್ಯಕ್ಷ ಎಡತೊರೆ ಮಹೇಶ್, ಪ್ರಧಾನ ಕಾರ್ಯದರ್ಶಿ ನಾಗರಾಮ, ಖಜಾಂಚಿ ಮಂಜು ಕೋಟೆ, ನಿರ್ದೇಶಕರಾದ ಪುಟ್ಟರಾಜು, ಹಂಪಾಪುರ ನಾಗೇಶ್, ಜಿ.ರವಿಕುಮಾರ್, ರವಿಕುಮಾರ್ ಆರಾಧ್ಯ, ರಂಗರಾಜು, ಸದಸ್ಯರಾದ ಬಸವರಾಜು, ನಿಂಗಣ್ಣ ಕೋಟೆ, ಪುರುಷೋತ್ತಮ್, ವಾಸುಕಿ ನಾಗೇಶ್, ಶ್ರೀನಿಧಿ, ಸುರೇಶ್, ಕನ್ನಡ ಪ್ರಮೋದ್, ಚಂದ್ರು ಇನ್ನಿತರರಿದ್ದರು.

ಕರವೇ ನಾರಾಯಣಗೌಡರ ಬಿಡುಗಡೆಗೆ ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನೆ



ಕರವೇ ಅಧ್ಯಕ್ಷ ನಾರಾಯಣಗೌಡರ ಬಿಡುಗಡೆಗೆ ಆಗ್ರಹಿಸಿ ಶುಕ್ರವಾರ ಮೈಸೂರಿನಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜ.5(ಎಸ್‌ಬಿಡಿ)– ಕರ್ನಾಟಕ ರಕ್ಷಣಾ ವೇದಿಕೆ(ಕರವೇ) ಅಧ್ಯಕ್ಷ ಟಿ.ಎ.ನಾರಾಯಣಗೌಡ ಹಾಗೂ ಕಾರ್ಯಕರ್ತರನ್ನು ಬಿಡುಗಡೆ ಮಾಡುವಂತೆ ಆಗ್ರಹಿಸಿ, ಮೈಸೂರಿನಲ್ಲಿ ಶುಕ್ರವಾರ ರಾತ್ರಿ ಪಂಜು ಬೆಳಗಿ ಪ್ರತಿಭಟಿಸಲಾಯಿತು.

ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಜಮಾಯಿಸಿದ ಕರವೇ ಕಾರ್ಯಕರ್ತರು, ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿದರು. ನಾಡು-ನುಡಿಗಾಗಿ ಹೋರಾಟ ನಡೆಸುವವರನ್ನು ಸರ್ಕಾರ ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಅಂಗಡಿ ಮುಂಗಟ್ಟುಗಳ ಫಲಕದಲ್ಲಿ ಶೇ.60ರಷ್ಟು ಕನ್ನಡ ಬಳಕೆ ಮಾಡಬೇಕೆಂಬ ನಿಯಮವನ್ನು ಅನುಷ್ಠಾನಗೊಳಿಸುವುದು ಸರ್ಕಾರದ ಕೆಲಸ. ಆದರೆ ಈ ಬಗ್ಗೆ ಸರ್ಕಾರ ನಿರ್ಲಕ್ಷಿಸಿದ್ದರಿಂದ ಕರವೇ ಆ ಕೆಲಸ ಮಾಡಿದೆ. ಕರವೇ ಅಧ್ಯಕ್ಷರಾದ ಟಿ.ಎ.ನಾರಾಯಣ ಗೌಡರ ನೇತೃತ್ವದಲ್ಲಿ ಹೋರಾಟ ನಡೆಸುವ ಮೂಲಕ ಅನ್ಯ ಭಾಷೆಯ ವ್ಯಾಮೋಹದಿಂದ ಕನ್ನಡ ಅಳಿಯಬಾರದು ಎಂದು ಎಚ್ಚರಿಸಲಾಗಿದೆ. ಆದರೆ ಸರ್ಕಾರ, ಕರವೇ ಅಧ್ಯಕ್ಷರು ಹಾಗೂ ಕಾರ್ಯಕರ್ತರನ್ನು ಬಂಧಿಸಿರುವುದು ಖಂಡನಾರ್ಹ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ರಾಜಕಾರಣಿಗಳು ಹಾಗೂ ಅಧಿಕಾರಿಗಳು ಶಾಮೀಲಾಗಿ ಕರವೇ ಹೋರಾಟಗಾರರ ವಿರುದ್ಧ ಈ ರೀತಿ ಕ್ರಮ ವಹಿಸಿದ್ದಾರೆ. ಸರ್ಕಾರದ ನಡೆಯನ್ನು ನಾಡಿನ ಜನ ಖಂಡಿಸುತ್ತಿದ್ದಾರೆ. ಕೂಡಲೇ ಟಿ.ಎ.ನಾರಾಯಣ ಗೌಡರು ಹಾಗೂ ಕಾರ್ಯಕರ್ತರನ್ನು ಬಿಡುಗಡೆ ಮಾಡಿ, ಅವರ ವಿರುದ್ಧ ದಾಖಲಿಸಿರುವ ಮೊಕದ್ದಮೆಗಳನ್ನು ಬೇಷರತ್ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಕರವೇ ಮೈಸೂರು ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ನಗರಾಧ್ಯಕ್ಷ ಲೋಕೇಶ್ ಕುಮಾರ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ಹೇಮಂತ್‌ಗೌಡ, ರಾಜ್ಯ ಮಹಿಳಾ ಘಟಕದ ಕಾರ್ಯದರ್ಶಿ ಗಾಯತ್ರಿ ವಿಜಯೇಂದ್ರ, ಸುನಂದಾ ಪ್ರಸಾದ್, ಸದಾನಂದ್, ಅನಸೂಯ, ಕುಮಾರಿ, ರಫೀಕ್, ಅಫ್ರೋಜ್, ಲಾಲು, ಅಸ್ಲಂ, ರಘು, ಲೋಕೇಶ್, ಶಿವರಾಜ್, ಗಣೇಶ್ ಮತ್ತಿತರರು ಭಾಗವಹಿಸಿದ್ದರು.

PUBLIC NOTICE

That my client Sri. P. Goutham Kumar, S/o. H. Pukhraj, R/at 2854, Halladakeri I Cross, Lashkar Mohalla, Mysuru, intended to purchase the property described in the schedule to this notice from its owner Sri. Vijay Shah.H, S/o Himatlal, R/at No. 38/2, II Cross, Theobold Road, Nazarbad, Mysuru, if any person/s having any claim, right, title or interest or lien or objection to the intended sale transaction pertaining to schedule property they are called upon to submit their written claim/s or objection with necessary documents to the undersigned within 7 days from the date of publication. In the event of failure to receive any claim or objection by any person/s within 7 days, my client will proceed to purchase the property from its owner as if the property is of free hold without there being any clog.

SCHEDULE

Property bearing No.1689/1D5, 1689/2AD-5/1A, situated at Hanumantha Rao Street, Devaraja Mohalla, Mysuru, consisting of cellar, ground, first and second floor with building to its total extent bounded on-East by: Private Property, West by: Hanumantha Rao 2nd Cross, North by: Private Property, South by: Private Property,

Sd/- NAGARAJ. M, Advocate.
En. Roll No.: 462/1990 No. 1307/1,
K.R. Hospital Road, Lashkar Mohalla,
Mysuru - 570 001. Mob:9900330995
Email:nagaraj.m1564@gmail.com

CHANGE OF NAME

I, Vidhi Manilal Mehta, W/o Ketan B resident of No 411,6th cross, sanmarga, siddarthanagara, Mysore - 570011,Karnataka, have changed my name from "Vidhi Manilal Mehta" to "Vidhi Jain",before M Anantha Murthy, Notary, Mysore vide affidavit dated 05.01.2024. Henceforth I shall continue my name as "Vidhi Jain" in all my records and transactions.

Sd/- Vidhi Jain

ವಿಜಯನಗರ ಪತ್ತಿನ ಸಹಕಾರ ಸಂಘ ನಿಯಮಿತ

#12, ನೆಲಅಂತಸ್ತು, ಕನ್ನಡ ಸಾಹಿತ್ಯ ಪರಿಷತ್ತು ಭವನ ರಸ್ತೆ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮುಂಭಾಗ, ವಿಜಯನಗರ 1ನೇ ಹಂತ, ಮೈಸೂರು–570017 । ದೂರವಾಣಿ: 2415869

ಪ್ರಕಟಣೆ

ವಿಜಯನಗರ ಪತ್ತಿನ ಸಹಕಾರ ಸಂಘ ನಿ. ಇದರ 2024–2029ನೇ ಸಾಲಿನ ಚುನಾವಣೆಯು ದಿನಾಂಕ: 20/01/2024 ರ ಶನಿವಾರ ರಂದು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ನಡೆಯಲಿದ್ದು, ವಿವರಗಳು ಕೆಳಗಿನಂತಿವೆ.

ಚುನಾವಣೆ ವೇಳಾಪಟ್ಟಿ:

1. ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಕೊನೆಯ ದಿನಾಂಕ	06-01-2024 ಶನಿವಾರ ರಿಂದ 12-01-2024 ಶುಕ್ರವಾರ ವರೆಗೆ
2. ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ	13-01-2024 ಶನಿವಾರ
3. ನಾಮಪತ್ರಗಳ ಹಿಂತೆಗೆದುಕೊಳ್ಳಲು ಕೊನೆಯ ದಿನ	14-01-2024 ಭಾನುವಾರ
4. ಮತದಾನ ನಡೆಯುವ ದಿನಾಂಕ	20-01-2024 ಶನಿವಾರ
5. ಚುನಾವಣೆ ಕಾರ್ಯ ಪೂರ್ಣಗೊಳ್ಳುವ ದಿನಾಂಕ	20-01-2024 ಶನಿವಾರ

ಚುನಾವಣೆ ನಡೆಯುವ ಸ್ಥಳ : ಜಿಲ್ಲಾ ಕನ್ನಡ ಸಾಹಿತ್ಯ ಭವನ

1, ಕನ್ನಡ ಸಾಹಿತ್ಯ ಪರಿಷತ್ತು ಭವನ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು–570017

ಸಹಿ/–
ರಿಟರ್ನಿಂಗ್ ಅಧಿಕಾರಿ

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ರಿಟರ್ನಿಂಗ್ ಆಫೀಸರ್, ಆಟೋಮೋಟಿವ್ ಆಕ್ಸೆಲ್ಸ್ ಎಂಪ್ಲಾಯೀಸ್ ಹೌಸಿಂಗ್ ಕೋ-ಅಪರೇಟಿವ್ ಸೊಸೈಟಿ ಲಿ, ಮೈಸೂರು ರವರ ಕಾರ್ಯಾಲಯ.

ಪತ್ರಿಕಾ ಪ್ರಕಟಣೆ

ಆಟೋಮೋಟಿವ್ ಆಕ್ಸೆಲ್ಸ್ ಎಂಪ್ಲಾಯೀಸ್ ಹೌಸಿಂಗ್ ಕೋ-ಅಪರೇಟಿವ್ ಸೊಸೈಟಿ ಲಿ, ಮೈಸೂರು ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಚುನಾವಣೆಯನ್ನು ದಿನಾಂಕ : 20-01-2024 ರಂದು ಶನಿವಾರ ಬೆಳಗ್ಗೆ 9-00 ಗಂಟೆಯಿಂದ ಸಂಜೆ 04-00 ಗಂಟೆಯವರೆಗೆ ಶ್ರೀ ಅನಂತೇಶ್ವರ ಭವನ ಹೂಟಗಳ್ಳಿ ಮೈಸೂರು ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ನಾಮಪತ್ರಗಳನ್ನು ದಿನಾಂಕ :06.01.2024 ರಿಂದ 12.01.2024 ರವರೆಗೆ ಬೆಳಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 02-00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು ಹಾಗೂ ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ :13.01.2024 ರಂದು ಬೆಳಗ್ಗೆ 11-30 ಗಂಟೆಗೆ ನಡೆಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮೂಲಕ ಈಗಾಗಲೇ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಮುಖ್ಯಕಾರ್ಯನಿರ್ವಾಹಕರನ್ನು / ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/-(ರಾಜು.ಬಿ) ರಿಟರ್ನಿಂಗ್ ಅಧಿಕಾರಿ, ಆಟೋಮೋಟಿವ್ ಆಕ್ಸೆಲ್ಸ್ ಎಂಪ್ಲಾಯೀಸ್ ಹೌಸಿಂಗ್, ಕೋ-ಅಪರೇಟಿವ್ ಸೊಸೈಟಿ ಲಿ, ಮೈಸೂರು